ಬಳ್ಳಾರಿ ನಗರದ ದ್ವಿ ಭಾಷಿಕತೆಯ ವೈವಿಧ್ಯತೆ

(ತೆಲಗು ಮತ್ತು ಉರ್ದು ಭಾಷಿಕರನ್ನು ಅನುಲಕ್ಷಿಸಿ)

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಅಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪ್ರಬಂಧ

ಸಂಶೋಧಕ
ಎಸ್. ಮಂಜುನಾಥ

ಮಾರ್ಗದರ್ಶಕರು
ಡಾ. ಪಿ. ಮಹಾದೇವಯ್ಯ

ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ - ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೨

150

ಬಳ್ಳಾರಿ ನಗರದ ದ್ವಿ ಭಾಷಿಕತೆಯ ವೈವಿಧ್ಯತೆ

(ತೆಲುಗು ಮತ್ತು ಉರ್ದು ಭಾಷಿಕರನ್ನು ಅನುಲಕ್ಷಿಸಿ)

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಪ್ರಬಂಧ.

ಸಂಶೋಧಕ
ಎಸ್. ಮಂಜುನಾಥ

ಮಾರ್ಗದರ್ಶಕರು
ಡಾ. ಪಿ. ಮಹಾದೇವಯ್ಯ

ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ – ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೦೦೭

ದೃಢೀಕರಣ ಪತ್ರ

ಶ್ರೀ ಎಸ್. ಮಂಜುನಾಥ ಇವರು "**ಬಳ್ಳಾರಿ ನಗರದ ದ್ವಿ ಭಾಷಿಕತೆಯ ವೈವಿಧ್ಯತೆ**" **(ತೆಲುಗು ಮತ್ತು ಉರ್ದು ಭಾಷಿಕರನ್ನು ಅನುಲಕ್ಷಿಸಿ)**–ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ದಿನಾಂಕ : ೨೮-೦೭-೨೦೦೭
ಸ್ಥಳ : ವಿದ್ಯಾರಣ್ಯ

ಡಾ. ಪಿ. ಮಹಾದೇವಯ್ಯ
ಮಾರ್ಗದರ್ಶಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ – ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪ್ರಮಾಣ ಪತ್ರ

"ಬಳ್ಳಾರಿ ನಗರದ ದ್ವಿ ಭಾಷಿಕತೆಯ ವೈವಿಧ್ಯತೆ" (ತೆಲುಗು ಮತ್ತು ಉರ್ದು ಭಾಷಿಕರನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ. ಪಿ. ಮಹಾದೇವಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲೀ ಅಥವಾ ಇತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

(ಎಸ್. ಮಂಜುನಾಥ)
ಎಂ.ಫಿಲ್. ವಿದ್ಯಾರ್ಥಿ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ - ಹಂಪಿ
ವಿದ್ಯಾರಣ್ಯ - ೫೮೩ ೨೭೬

ದಿನಾಂಕ : ೨೮-೦೭-೨೦೦೭
ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

* ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿಯ ಅಧ್ಯಯನ ಕೈಗೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಇಂದಿನ ಕುಲಪತಿಗಳಾದ ಮಾನ್ಯ ಕೆ.ವಿ. ನಾರಾಯಣ ಅವರಿಗೆ ಹಾಗೂ ಹಿಂದಿನ ಕುಲಪತಿಗಳಾಗಿದ್ದ ಮಾನ್ಯ ಡಾ. ಬಿ.ಎ. ವಿವೇಕ ರೈ ಅವರಿಗೆ, ಮತ್ತು ಕುಲ ಸಚಿವರಾದ ಶ್ರೀ ವಿ. ಶಂಕರ್ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಡಿ. ಪಾಂಡುರಂಗ ಬಾಬು ಅವರಿಗೆ,
* ನನಗೆ ಮಾರ್ಗದರ್ಶನ ಮಾಡಿದ ಪ್ರೀತಿಯ ಗುರುಗಳೂ ಹಾಗೂ ವಿಭಾಗದ ಮುಖ್ಯಸ್ಥರೂ ಆದ ಡಾ. ಪಿ. ಮಹದೇವಯ್ಯ ಅವರಿಗೆ
* ಸಂಶೋಧನೆಯ ಹೊಸ ಹೊಸ ರಂಗಗಳನ್ನು ಕುರಿತು ಭೋದಿಸಿದ ಹಾಗೂ ಭಾಷಾ ನಿಕಾಯದ ಡೀನ್ ಆದ ಡಾ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ಮತ್ತು ಭಾಷಾ ನಿಕಾಯದ ಎಂ.ಫಿಲ್. ಸಂಚಾಲಕರಾಗಿದ್ದ ಡಾ. ಕೆ.ಕೆ. ಮಾಧವ್ ಅವರಿಗೆ.
* ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಸದಾ ನನಗೆ ಪ್ರೋತ್ಸಹ ಸ್ಫೂರ್ತಿ ನೀಡಿ ಸಂಶೋಧನೆಯ ಮಾರ್ಗದ ಕಣ್ಣುತೆರೆಸಿದ ವಿಭಾಗದ ಡಾ. ಸಾಂಬಮೂರ್ತಿ, ಡಾ. ಅಶೋಕಕುಮಾರ ರಂಜೇರ ಅವರಿಗೆ.
* ಎಂ.ಫಿಲ್. ಅಧ್ಯಯನದ ಸಂದರ್ಭದಲ್ಲಿ ಸಂಶೋಧನೆಯ ವಿವಿಧ ಮಜಲುಗಳನ್ನು ಬೋಧಿಸಿದ ಡಾ. ಕೆ. ರವೀಂದ್ರನಾಥ, ಸುಬ್ಬಣ್ಣ ರೈ, ಡಾ. ಎಸ್.ಎಸ್. ಅಂಗಡಿ, ಡಾ. ವೀರೇಶ್ ಬಡೇಗೇರ್ ಅವರಿಗೆ.
* ವಿಶ್ವವಿದ್ಯಾಲಯದ ಎಲ್ಲಾ ವಿಭಾಗದ ಮುಖ್ಯಸ್ಥರಿಗೂ ಹಾಗೂ ಅಧ್ಯಾಪಕರಿಗೆ ಮತ್ತು ಎಲ್ಲಾ ಸಿಬ್ಬಂದಿ ವರ್ಗ ಹಾಗೂ ಸಿಬ್ಬಂದೇತರ ವರ್ಗದವರಿಗೆ ಮತ್ತು ಗ್ರಂಥಾಪಾಲಕರಿಗೆ ಹಾಗೂ ಪ್ರತ್ಯಕ್ಷವಾಗಿ-ಅಪ್ರತ್ಯಕ್ಷವಾಗಿ ಸಹಕರಿಸಿದ ಎಲ್ಲಾರಿಗೆ ಮತ್ತು ನನ್ನ ನೆಚ್ಚಿನ ಸಾಧಕರಿಗೆ
* ಕ್ಷೇತ್ರ ಕಾರ್ಯದಲ್ಲಿ ಸದಾ ನನ್ನ ಜೊತೆಗಿದ್ದ ಜಿ.ಬಿ. ಚಂದ್ರಶೇಖರ ಕೂಡ್ಲಿಗಿ, ಇಸ್ಮಾಯಿಲ್‌ಜಜೀರ್ ಹಾಗೂ ತುಂಬ ಆಸಕ್ತಿಯಿಂದ ಪ್ರೋತ್ಸಾಹಿಸಿದ ನನ್ನ ಅಳಿಯನಾದ ಅಜಯ್‌ಬಣಕಾರ ಅವರಿಗೆ.
* ಕ್ಷೇತ್ರಕಾರ್ಯದಲ್ಲಿ ನನ್ನ ಜೊತೆ ಮಾತನಾಡಿದ ಹಾಗೂ ಕಥೆಗಳನ್ನು ಹೇಳಿದ ಎಲ್ಲಾ ವಕ್ತೃ ವರ್ಗಕ್ಕೆ
* ಸದಾ ನನ್ನ ಶ್ರೇಯೋಭಿವೃದ್ಧಿಯನ್ನೇ ಬಯಸುವ ಪೂಜ್ಯ ತಂದೆ ಎಸ್. ಸೋಮನಗೌಡ, ತಾಯಿ ಚನ್ನಮ್ಮ ಅವರಿಗೆ, ಸದಾ ಉತ್ಸಾಹಿತಳಾಗಿ ನನ್ನ ಯೋಗಕ್ಷೇಮ ವಿಚಾರಿಸುತ್ತಾ ಏಳಿಗೆ ಬಯಸುವ ನನ್ನ ಮಡದಿ ಲಕ್ಷ್ಮೀದೇವಿ, ಹಾಗೂ ಮುದ್ದುಮಣಿ ಮಾಣಕ್ಯಳಿಗೆ.
* ಸಹಕಾರ ನೀಡದ ಮಿತ್ರರಾದ, ಸೂಗಣ್ಣ, ಹೂಲೆಪ್ಪ, ಧರ್ಮವೀರ, ಶರಣಬಸವ, ಸತ್ಯಮೂರ್ತಿ, ಮಾಣಿಕಪ್ಪ, ಮಲ್ಲಿಕಾರ್ಜುನ, ಚನ್ನಬಸಪ್ಪ, ಹಾಗೂ ಲಲಿತಬಾವಿಕಟ್ಟಿ, ಸಾವಿತ್ರಿಬಾಯಿ, ದೀಪ ಅವರಿಗೆ ವಿಭಾಗದ ಸಹಾಯಕರಾದ ವೀರೇಶ್ ಅವರಿಗೆ.
* ಸಕಾಲದಲ್ಲಿ ಅಂದವಾಗಿ ಅಕ್ಷರ ಸಂಯೋಜಿಸಿಕೊಟ್ಟಿರುವ ಕೊಟ್ಟೂರಿನ ಗುರು ಗ್ರಾಫಿಕ್ಸ್‌ನ ಕೆ.ಎಂ. ಗುರುಬಸವರಾಜ ಅವರಿಗೆ

ಹೃತ್ಪೂರ್ವಕ ಕೃತಜ್ಞತೆಗಳು

ದಿನಾಂಕ : ೨೮-೦೭-೨೦೦೭

ಸ್ಥಳ : ವಿದ್ಯಾರಣ್ಯ

ಎಸ್. ಮಂಜುನಾಥ

ಪರಿವಿಡಿ

ಅಧ್ಯಯನದ ನೆಲೆಗಳು

ಅಧ್ಯಯನದ ನೆಲೆಗಳು

ವ್ಯಕ್ತಿ ಯಾವ ಸಾಮಾಜಿಕ ಪರಿಸರದಲ್ಲಿ ಜೀವಿಸುತ್ತಾನೋ, ಆಯಾ ಸಾಮಾಜಿಕ ಪರಿಸರದ ಭಾಷೆಯನ್ನು ತನ್ನ ವ್ಯವಹಾರಿಕ ಭಾಷೆಯನ್ನಾಗಿ ಸ್ವೀಕರಿಸಿ ಬಳಸುತ್ತಾನೆ. ಸಮಾಜದಲ್ಲಿ ಯಾವುದೇ ಸಾಮಾಜಿಕ ವರ್ಗದವರ ಸಂಖ್ಯೆ ಹೆಚ್ಚಿರಲಿ, ಕಡಿಮೆ ಇರಲಿ ಅವರವರ ಆಚಾರ, ವಿಚಾರ, ನಡೆನುಡಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅವರದೇ ಆದ ಭಾಷೆ ರೂಪಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದ್ವಿ ಭಾಷಿಕ ಪರಿಸರ ಹೆಚ್ಚು ಬಳಕೆಯಲ್ಲಿರುವುದು ವಲಸಿಗರಲ್ಲಿ.

ವಲಸಿಗರ ಪರಂಪರೆಯಲ್ಲಿ ದ್ವಿಭಾಷಿಕತೆ ಅಧ್ಯಯನವು ಬಹು ಹಿಂದಿನಿಂದಲೂ ನಡೆಯುತ್ತು ಬಂದಿರುವ ಪ್ರಕ್ರಿಯೆ ಆಗಿದೆ. ಯಾವುದೇ ಒಂದು ಭಾಷಿಕ ಸಮುದಾಯವು, ಒತ್ತಡ ಅಥವಾ ಆಕರ್ಷಕ ಅಂಶಗಳಿಂದ ತಾತ್ಕಾಲಿಕ ಅಥವಾ ಶಾಶ್ವತವಾಗಿ ವಲಸೆ ಹೋಗಬಹುದು. ಹಾಗೆ ವಲಸೆ ಹೋದ ಪ್ರಾದೇಶಿಕ ಸಾಮಾಜಿಕ ಪರಿಸರದ ಭಾಷೆಯನ್ನು ತಮ್ಮ ವ್ಯವಹಾರಿಕ ಭಾಷೆಯನ್ನಾಗಿ ಸ್ವೀಕರಿಸಬೇಕಾಗುತ್ತದೆ. ಹಾಗೆ ಸ್ವೀಕರಿಸುವಾಗ ದ್ವಿಭಾಷಿಕ ಪರಿಸರ ಸೃಷ್ಠಿಯಾಗುತ್ತದೆ.

ಎಲ್ಲಾ ವಲಸಿಗರು ದ್ವಿಭಾಷಿಕರಲ್ಲ, ಹಾಗಿಯೇ ಎಲ್ಲಾ ದ್ವಿಭಾಷಿಕರೂ ವಲಸಿಗರಲ್ಲ ಈ ವಲಸಿಗರ ಪರಿಸರದಲ್ಲಿ ದ್ವಿಭಾಷಿಕತೆಯ ಪ್ರಮಾಣ ವಲಸೆ ಹೋಗುವ ಸ್ಥಳಗಳ ಮೇಲೆ ನಿರ್ಧಾರಿತವಾಗಿರುತ್ತದೆ. ಈ ಹಿನ್ನೆಲೆಯಿಂದ ವಲಸೆಯ ಆಯಾಮಗಳು ದ್ವಿಭಾಷಿಕತೆ, ಬಹುಭಾಷಿಕತೆಯ ನೆಲೆಯನ್ನು ನಿರ್ಧರಿಸುವ ಅಂಶವಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಹಲವಾರು ಧಾರ್ಮಿಕ ಪಂಗಡಗಳಿಗೆ ಸೇರಿದ ಜನರು ನೆಲೆಸಿರುವುದು ಸರ್ವೇಸಾಮಾನ್ಯ, ಹಾಗೆಯೇ ಹಲವಾರು ವಿವಿಧ ಸಾಮಾಜಿಕ ವರ್ಗದ ಜನರು ಪರಸ್ಪರ ತಮ್ಮ ದಿನ ನಿತ್ಯದ ವ್ಯವಹಾರವನ್ನು ವ್ಯವಹರಿಸಬೇಕಾದರೆ ಬೇರೆ ಬೇರೆ ಸಂದರ್ಭಗಳಲ್ಲಿ ಭಾಷಾ ಬಳಕೆ ಅನಿವಾರ್ಯವಾಗಿದೆ. ಹಾಗಾಗಿ ಬಳ್ಳಾರಿ ಜಿಲ್ಲೆ ಒಂದು ದ್ವಿಭಾಷಿಕ ಪ್ರದೇಶವೂ ಹೌದು, ಹಾಗೂ ಬಹುಭಾಷಿಕ ಪ್ರದೇಶವೂ ಹೌದು.

ಬಳ್ಳಾರಿ ನಗರದಲ್ಲಿ ನೆಲೆಸಿರುವ ತೆಲುಗರು ಎಲ್ಲಾ ಸಂದರ್ಭದಲ್ಲಿ ತಮ್ಮ ಮನೆ ಆವರಣದಲ್ಲಿ ತೆಲುಗು ಭಾಷೆಯನ್ನು, ಸಾರ್ವಜನಿಕ ಆವರಣಗಳಲ್ಲಿ ಕನ್ನಡ ಮಿಶ್ರಿತ ತೆಲುಗು ಭಾಷೆಯನ್ನು ಬಳಸುವುದು ಸಹಜ. ಅದೇ ರೀತಿ ಉರ್ದುಭಾಷಿಕರೂ ಸಹ ತಮ್ಮ ಮನೆ ವಾತಾವರಣದಲ್ಲಿ ಉರ್ದುಭಾಷೆಯನ್ನು ಸಾರ್ವಜನಿಕ ಆವರಣಗಳಲ್ಲಿ ಕನ್ನಡ ಮಿಶ್ರಿತ ಉರ್ದುಭಾಷಿಕ ರೂಪಗಳನ್ನು ಬಳಸುತ್ತಾರೆ. ಇಂತಹ ಸನ್ನಿವೇಶಗಳಲ್ಲಿ ತೆಲುಗು ಮತ್ತು ಉರ್ದುಭಾಷೆಯ ಉಚ್ಚಾರಣೆ, ಶಬ್ದಕೋಶ, ವ್ಯಾಕರಣ ವಿಚಾರಗಳು, ಸ್ಪಷ್ಟವಾಗಿ ಗೋಚರಿಸುತ್ತವೆ. ವಿಶೇಷವಾಗಿ ಈ ಜಿಲ್ಲೆಯಲ್ಲಿರುವ ಉರ್ದು ಮತ್ತು ತೆಲುಗು ಭಾಷಿಕರು ಹಾಗೂ ಕನ್ನಡಿಗರು ತಮ್ಮ ಮನೆ ಮಾತಿನೊಂದಿಗೆ ತೆಲುಗು ಭಾಷೆಯಲ್ಲಿ ವ್ಯವಹರಿಸುವ ಸಾಮರ್ಥ್ಯವುಳ್ಳವರಾಗಿದ್ದಾರೆ.

ಅಂದರೆ ತೆಲುಗು ಭಾಷಿಕರು ಕನ್ನಡ ಕಲಿಯುವ ಅವಶ್ಯಕತೆಗಿಂತ ಕನ್ನಡ ಮತ್ತು ಉರ್ದು ಭಾಷಿಕರು ತೆಲುಗನ್ನು ಕಲಿಯುವಂತೆ ಒತ್ತಾಯಿಸುವ ಸನ್ನಿವೇಶವಿದೆ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆ ಒಂದು ದ್ವಿಭಾಷಿಕ ಪ್ರದೇಶವೂ ಹೌದು, ಹಾಗೂ ಬಹುಭಾಷಿಕ ಪ್ರದೇಶವೂ ಹೌದು ಎಂಬ ನಿರ್ಧಾರಕ್ಕೆ ಬರಬಹುದು, ವಿಶೇಷವಾಗಿ ಬಳ್ಳಾರಿ ಸುತ್ತು ಮುತ್ತು ಪ್ರದೇಶದಲ್ಲಿ ವ್ಯಕ್ತಿ ನಾಮ ಮತ್ತು ಸ್ಥಳನಾಮಗಳ ಮೇಲೂ ತೆಲುಗಿನ ಪ್ರಭಾವ ಇರುವುದನ್ನು ನೋಡಬಹುದು.

ಅಕ್ಷರಸ್ಥ ತೆಲುಗರ ಮಾತು ತೆಲುಗಿನಿಂದ ಇಂಗ್ಲೀಶ್‌ಗೆ ನುಡಿ ಪಲ್ಲಟವಾದರೆ, ಅನಕ್ಷರಸ್ಥ ತೆಲುಗರ ಮಾತು ತೆಲುಗಿನಿಂದ ಕನ್ನಡಕ್ಕೆ ನುಡಿ ಪಲ್ಲಟವಾಗುವುದು ಕಂಡುಬರುತ್ತದೆ.

ಅಧ್ಯಯನದ ವಿಧಾನ :-

ದ್ವಿಭಾಷಿಕತೆಯ ಅಧ್ಯಯನಕ್ಕೆ ರ್‍ಯಾಂಡಂ (Random Sampling Method) ಅಳವಡಿಸಿಕೊಳ್ಳಲಾಗಿದೆ. ವಿಷಯಕ್ಕೆ ಸಂಬಂಧಿಸಿದಂತೆ, ಸೂಕ್ತವಾದ ಪ್ರಶ್ನಾವಳಿಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಬಳ್ಳಾರಿ ನಗರದ ಜನಸಂಖ್ಯಾ ವಿವರ, ಚಾರಿತ್ರಿಕ ದಾಖಲೆಗಳು, ಹಾಗೂ ಆಕರಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅದೇ ರೀತಿ ಸರಕಾರದ ಗೆಜೆಟೆರಿಯಗಳು, ಸಂಶೋಧನೆಯ ಪ್ರಬಂಧಗಳು, ಮೌಖಿಕ ದಾಖಲೆಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಅಲ್ಲದೆ ಬಳ್ಳಾರಿ ನಗರದ ಸಂಕ್ಷಿಪ್ತ ಚರಿತ್ರೆಯ ಬಗೆಗೆ ಪ್ರಕಟವಾಗಿರುವ ಪುಸ್ತಕಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅಧ್ಯಯನದ ಕ್ಷೇತ್ರಕಾರ್ಯ :-

ಪ್ರಸ್ತುತ ಅಧ್ಯಯನವು ಸಂಪೂರ್ಣ ಕ್ಷೇತ್ರಕಾರ್ಯ ಪ್ರಧಾನವಾದುದು. ಬಳ್ಳಾರಿ ನಗರದಲ್ಲಿರುವ ತೆಲುಗರು, ಉರ್ದುಭಾಷಿಕರು, ಕನ್ನಡಿಗರು ನೆಲೆಸಿರುವ ಪ್ರದೇಶಗಳಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಪ್ರಶ್ನಾವಳಿಗಳಿಂದ ವ್ಯಕ್ತಿಗಳನ್ನು ಬೇಟಿಮಾಡಿ ಸೂಚಕ, ಲಿಂಗ, ವಯಸ್ಸು, ವಿದ್ಯಾರ್ಹತೆ, ಧರ್ಮ, ಜಾತಿ, ಮುಂತಾದ ಸಾಮಾಜಿಕ ಭಿನ್ನಾಂಶಗಳನ್ನು ಗಮನದಲ್ಲಿಟ್ಟುಕೊಂಡು ಮಾಹಿತಿ ಸಂಗ್ರಹಿಸಲಾಗಿದೆ.

ಅಧ್ಯಯನದ ವ್ಯಾಪ್ತಿ :-

ಬಳ್ಳಾರಿ ನಗರ ಪ್ರಸ್ತುತ ಅಧ್ಯಯನ ವ್ಯಾಪ್ತಿಯೂ ಹೌದು, ಮಿತಿಯೂ ಹೌದು, ತೆಲುಗು ಮನೆ ಮಾತುಳ್ಳವರು, ಉರ್ದು ಮನೆಮಾತುಳ್ಳವರು, ಮತ್ತು ಕನ್ನಡ ಮನೆಮಾತುಳ್ಳವರು ನೆಲೆಸಿರುವ ವಲಯಗಳು (area) ಅಧ್ಯಯನದ ಪ್ರಧಾನ ಕ್ಷೇತ್ರಗಳಾಗಿವೆ.

ಅಧ್ಯಯನದ ಪ್ರಾಮುಖ್ಯತೆ :-

ಪ್ರಸ್ತುತ ಅಧ್ಯಯನವು ಹಲವು ದೃಷ್ಟಿಕೋನಗಳಿಂದ ಮಹತ್ವ ಪೂರ್ಣವಾಗಿದೆ. ಕನ್ನಡ ಮನೆಮಾತುಳ್ಳವರೆಲ್ಲರಿಗೂ ತೆಲುಗು ಗೊತ್ತಿದೆ. ಆದರೆ ತೆಲುಗು ಮನೆಮಾತುಳ್ಳವರೆಲ್ಲರಿಗೂ ಕನ್ನಡ ಗೊತ್ತಿಲ್ಲ. ಅದೇರೀತಿ ಉರ್ದುಮನೆಮಾತುಳ್ಳವರೆಲ್ಲರಿಗೂ ಕನ್ನಡ ಗೊತ್ತಿಲ್ಲ ತೆಲುಗನ್ನ ಅರಿತಿದ್ದಾರೆ.

ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಯನ್ನು ಕತೆಗಳನ್ನು ಹೇಳಿಸುವುದರ ಮೂಲಕ 'ಮಾಹಿತಿ ಸಂಗ್ರಹ' ಮಾಡಿ ವಿಶ್ಲೇಷಣೆ ಮಾಡಲಾಗಿದೆ. ಹಾಗಾಗಿ ಇದೊಂದು ಮಹತ್ವದ ಅಧ್ಯಯನವಾಗಿದೆ. ಶೈಕ್ಷಣಿಕವಾಗಿ ಇಂತಹ ಅಧ್ಯಯನಗಳಿಂದ ದ್ವಿಭಾಷಿಕ ಮತ್ತು ಬಹುಭಾಷಿಕ ಪರಿಸರದಲ್ಲಿ ಅಭ್ಯಾಸಿಸುವ ವಿದ್ಯಾರ್ಥಿಗಳಲ್ಲಿ ಕಂಡು ಬರುವ ಕಲಿಕೆಯ ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳಬಹುದಾಗಿದೆ. ಹಾಗೂ ಈ ಮಾದರಿ ಅಧ್ಯಯನದಿಂದ ಮಕ್ಕಳಿಗೆ ಪ್ರತ್ಯೇಕವಾದ ಪಠ್ಯಪುಸ್ತಕಗಳನ್ನು ಸಿದ್ದಪಡಿಸುವಲ್ಲಿ ಪ್ರಯೋಜನಕ್ಕೆ ಬರುತ್ತವೆ. ಹಾಗೂ ಬಾಷಾ ಯೋಜನೆಗಳನ್ನು ರೂಪಿಸುವಲ್ಲಿ, ಉಪಭಾಷೆಯ ಅಧ್ಯಯನ ಕೈಗೊಳ್ಳುವಲ್ಲಿ ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಕಟ್ಟುವಲ್ಲಿ, ಈ ಮಾದರಿಯ ಅಧ್ಯಯನ ಮಹತ್ವದ್ದಾಗಿದೆ.

ಪ್ರಸ್ತುತ ಅಧ್ಯಯನದ ರೂಪ-ರೇಷಗಳು :-

ಪ್ರಸ್ತುತ ಅಧ್ಯಯನವನ್ನು ಆರು ಅಧ್ಯಾಯನಗಳಲ್ಲಿ ರೂಪಿಸಲಾಗಿದೆ. ಪ್ರಸ್ತುತ ಈ ಮೊದಲನೆಯ ಅಧ್ಯಾಯನವು ಅಧ್ಯಯನದ ಸಮಗ್ರ ಆಶಯವನ್ನು ಒಳಗೊಂಡಿದೆ. ಈ ಅಧ್ಯಯನದಲ್ಲಿ ಭಾಷೆ, ದ್ವಿಭಾಷಿಕತೆ, ಮತ್ತು ಬಹುಭಾಷಿಕತೆಯ ಪರಿಕಲ್ಪನೆಯನ್ನು ಸ್ಥೂಲವಾಗಿ ಚರ್ಚಿಸಲಾಗಿದೆ

ಎರಡನೇ ಅಧ್ಯಾಯದಲ್ಲಿ ಉರ್ದುಭಾಷಿಕರ ಕನ್ನಡ ಪದಗಳು ಮತ್ತು ಅದರ ಪ್ರಯೋಗಾರ್ಥಗಳನ್ನು ನಿರ್ದೇಶನಗಳ ಮೂಲಕ ಪರಿಚಯ ಮಾಡಿಕೊಡಲಾಗಿದೆ.

ಮೂರನೇ ಅಧ್ಯಾಯದಲ್ಲಿ ಬಳ್ಳಾರಿ ನಗರದ ತೆಲುಗು ಭಾಷಿಕರ ಕನ್ನಡದ ಉಚ್ಚಾರಣೆಯಲ್ಲಿ ಪದಗಳು ಮತ್ತು ಪ್ರಯೋಗಾರ್ಥವನ್ನು ನಿದರ್ಶನದ ಸಹಿತ ವಿವರಿಸಲಾಗಿದೆ.

೪ ನೇ ಅಧ್ಯಾಯದಲ್ಲಿ ಬಳ್ಳಾರಿ ನಗರದ ಉರ್ದು ಭಾಷಿಕರ ಕನ್ನಡದ ಉಚ್ಚಾರಣೆಯಲ್ಲಿ ನುಡಿಮಿಶ್ರಣ ರೂಪಗಳು ಹೇಗೆ ಬಳಕೆಯಲ್ಲಿವೆ ಎಂಬುದನ್ನು ಸೂಕ್ತ ಉದಾಹರಣೆಗಳ ಮೂಲಕ ವಿಶ್ಲೇಷಿಸಲಾಗಿದೆ.

೫ ನೇ ಅಧ್ಯಾಯದಲ್ಲಿ ಬಳ್ಳಾರಿ ನಗರದ ತೆಲುಗು ಭಾಷಿಕರ ಕನ್ನಡದ ಉಚ್ಚಾರಣೆಯಲ್ಲಿ ಬಳ್ಳಾರಿ ನಗರದ ತೆಲುಗು ಭಾಷಿಕರ ಕನ್ನಡದ ಉಚ್ಚಾರಣೆಯಲ್ಲಿ ನುಡಿಮಿಶ್ರಣ ರೂಪಗಳು ಹೇಗೆ ಬಳಕೆಯಲ್ಲಿವೆ. ಎಂಬುದನ್ನು ಸೂಕ್ತ ಉದಾಹರಣೆಗಳ ಮೂಲಕ ವಿಶ್ಲೇಷಿಸಲಾಗಿದೆ.

೬ ನೇ ಅಧ್ಯಾಯದಲ್ಲಿ ಸಮಗ್ರ ಅಧ್ಯಯನದ ಪ್ರಾಮುಖ್ಯತೆ ಮತ್ತು ಪ್ರಯೋಜನಗಳನ್ನು ಕುರಿತು ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ.

೭ ಅನುಬಂಧದ ಭಾಗದಲ್ಲಿ :- ೧. ಪದಕೋಶ ದಾಖಲೆ

೨. ಅಧ್ಯಯನಕ್ಕೆ ಪೂರಕವಾಗಿ ಸಂಗ್ರಹಿಸಿದ ತೆಲುಗು ಮತ್ತು ಉರ್ದುಭಾಷಿಕರ ಕನ್ನಡ ಕಥಾಮಾದರಿಗಳನ್ನು ನೀಡಲಾಗಿದೆ. ಹಾಗೆಯೇ ಅಧ್ಯಯನಕ್ಕೆ ಮಾಹಿತಿಯನ್ನು ನೀಡಿದ ವ್ಯಕ್ತಿಗಳ ವಿವರಗಳನ್ನು ಪಟ್ಟಿಸಲಾಗಿದೆ. ಅಧ್ಯಯನದ ಸಂದರ್ಭದಲ್ಲಿ ಸಹಾಯಕ್ಕೆ ಬಂದ ಆಕರಗ್ರಂಥಗಳ ಸೂಚಿಯನ್ನು ನೀಡಲಾಗಿದೆ.

ಅಧ್ಯಾಯ – ೧

ಬಳ್ಳಾರಿ ನಗರ ಮತ್ತು ದ್ವಿಭಾಷಿಕತೆ

ಅಧ್ಯಾಯ – ೧

ಬಳ್ಳಾರಿ ನಗರ ಮತ್ತು ದ್ವಿಭಾಷಿಕತೆ

ಮಾನವನ ಸಂಪರ್ಕ ಸಾಧನ ಭಾಷೆ. ತನಗಾದ ಸಂತಸ, ಸಂಕಟಗಳನ್ನು ತನಗಾದ ಅನುಭವದ ಅಭಿಪ್ರಾಯಗಳನ್ನು ಇತರರ ಜೊತೆ ಹಂಚಿಕೊಳ್ಳುವುದು ಈ ಸಂಘ ಜೀವಿಯ ಸಹಜ ಗುಣ. ಮಾನವ ನಾಗರಿಕನಾಗುತ್ತ ಹೋದಂತೆ ಆತನ ಭಾಷೆ, ಚಿಂತನೆ, ಬೌದ್ಧಿಕತೆ ಅವಶ್ಯಕತೆಗಳೂ ಬೆಳೆಯುತ್ತ ಸಾಗಿದವು, ಈ ವಿಜ್ಞಾನ-ತಂತ್ರಜ್ಞಾನ ಬೆಳೆದು; ಮನಷ್ಯನ ಬದುಕಿನಲ್ಲಿ ಮಹತ್ತರವಾದ ಬದಲಾವಣೆಗಳಾದವು. ಆತನ ಬೆಳವಣಿಗೆಯ ಹಂತಗಳು ಸಾಮಾಜಿಕ ಸಂಘ ಜೀವಿಯಾಗಿ ಬದುಕುವಂತೆ ಮಾಡಿದವು, ಹೀಗೆ ಸಮಾಜದಲ್ಲಿ ಬದುಕ ಬೇಕಾದರೆ ಭಾಷೆಯು ಸಂವಹನ ಮಾಧ್ಯಮವಾಗಿದೆ.

ಮಾನವನ ಚಿಂತನೆ, ಗುರಿ, ಯೋಚನೆಗಳೆಲ್ಲವೂ ಭಾಷೆಯೊಂದರಿಂದ ಅಭಿವ್ಯಕ್ತಿಯಾಗಲು ಸಾಧ್ಯವಾಯಿತು. ಆದರೆ ಈ ಆಧುನಿಕತೆಯಲ್ಲಿ ಮಾನವ ಕೇವಲ ತನ್ನ ಮಾತೃಭಾಷೆಯೊಂದರಿಂದಲೇ ಬದುಕಿ ಬಾಳುವುದು ಕಷ್ಟಸಾಧ್ಯ . ತನ್ನ ಅವಶ್ಯಕತೆ ಪೂರೈಕೆಗೆ ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಕಲಿಯುವುದು ಅನಿವಾರ್ಯ. ಅಂತಹ ಸಂದರ್ಭದಲ್ಲಿ 'ದ್ವಿ ಭಾಷಿಕತೆ' ಕಾಣಿಸಿಕೊಳ್ಳುತ್ತದೆ.

ಆಧುನಿಕ ಜಗತ್ತಿನಲ್ಲಿ ತೀವ್ರಗತಿಯಲ್ಲಿ ಸಾಗುತ್ತಿರುವ ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಪ್ರಕ್ರಿಯೆಗಳೂ ದ್ವಿಭಾಷಿಕತೆಯ ಸಂದರ್ಭಗಳನ್ನು ತೀವ್ರಗೊಳಿಸಿವೆ. ಹಾಗೆಯೆ ವಲಸೆ ಬಂದ ಸಮುದಾಯಗಳು ತಮ್ಮ ಮಾತೃ ಭಾಷೆಯೊಂದಿಗೆ ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಕಲಿತು ವ್ಯವಹರಿಸುವುದು ಅನಿವಾರ್ಯ. ಇಂತಹ ದ್ವಿಭಾಷಾ ಸಮುದಾಯದಲ್ಲಿ ಯಾವ ರೀತಿ ಭಾಷಾ ಬಳಕೆ ಆಗುತ್ತದೆ. ಹಾಗೂ ಬದಲಾವಣೆಯ ಪ್ರತಿಕ್ರಿಯೆಗಳೇನು? ದ್ವಿಭಾಷಿಕ ಪರಿಸರದ ಭಾಷಿಕಹಂತಗಳು ಏನು ಅದರ ಸ್ವರೂಪ ಎಂತಹದು ಎಂಬುದು ಒಂದು ರೀತಿ ಕುತೂಹಲಕಾರಿ ಆಗಿದೆ. ಬಳ್ಳಾರಿ ಜಿಲ್ಲೆಗೆ ಸಂಬಂದಿಸಿದಂತೆ ಹಲವು ಸಂಪ್ರಬಂಧ ಮಹಾಪ್ರಬಂಧಗಳು ಬಂದಿವೆಯಾದರೂ ಅವು ಕೇವಲ ಕನ್ನಡ ಮತ್ತು ತೆಲುಗು ಭಾಷೆಯ ದ್ವಿಭಾಷಿಕತೆಯ ಹಿನ್ನೆಲೆಯಲ್ಲಿ ಮಂಡಿತವಾಗಿವೆ.

ಪುಸ್ತಕ ಸಂಬಂಧವೂ ಅವುಗಳಿಗಿಂತ ಭಿನ್ನವಾಗಿದೆ. ಆದರೆ ತೆಲುಗು ಭಾಷೆಯಂತೆಯೇ ಉರ್ದು ಭಾಷೆಯನ್ನು ಆಧರಿಸಿ ಬಂದ ಸಂಪ್ರಬಂಧಗಳು ಇಲ್ಲ ಬಳ್ಳಾರಿ ನಗರದಲ್ಲಿ ಕನ್ನಡ ಮನೆಮಾತುಳ್ಳವರ ಜತೆಗೆ ಉರ್ದು ಮತ್ತು ತೆಲುಗು ಮನೆಮಾತುಳ್ಳವರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಕನ್ನಡ ಪರಿಸರದಲ್ಲಿ ಕನ್ನಡೇತರ ಕನ್ನಡ ಭಾಷೆ ಬಳಕೆ ವಿಶಿಷ್ಟವಾಗಿರುತ್ತದೆ. ಅದರಲ್ಲೂ ಬಳ್ಳಾರಿ ನಗರದಲ್ಲಿ ಉರ್ದು ಮತ್ತು ತೆಲುಗು ಭಾಷಿಕರು ಬಳಸುವ ಪದಕೋಶ ವಿಶಿಷ್ಟವಾಗಿರುತ್ತದೆ. ಅಂತಹ ಪದಕೋಶ ಮಾದರಿಗಳನ್ನು ಅವುಗಳ ಬಳಕೆ ಸಂದರ್ಭವನ್ನು ಆಧರಿಸಿ ದಾಖಲಿಸಲಾಗಿದೆ.

ಒಂದು ಅಂದಾಜಿನ ಪ್ರಕಾರ ಪ್ರಪಂಚದಲ್ಲಿ ಸರಿಸುಮಾರು 3000/- ಭಾಷೆಗಳು ಇರಬೇಕೆಂದು ಹೇಳಲಾಗುತ್ತದೆ. ಆದರೆ ಇನ್ನು ಎಷ್ಟೋ ಭಾಷೆಗಳು ಭಾಷಾ ವಿಜ್ಞಾನಿಗಳ ಗಮನಕ್ಕೆ ಬಾರದೇ ಹೋಗಿರಬಹುದು. ಇಂದಿನ ಆಧುನಿಕತೆಯಲ್ಲಿ ಯಾವುದೇ ದೇಶ ಕೇವಲ ಒಂದೇ ಭಾಷೆಯನ್ನು ಹೊಂದಿ ತನ್ನ ಅವಶ್ಯಕತೆ ಪೂರೈಸಿಕೊಳ್ಳುವುದು ಕಷ್ಟವೆನಿಸುತ್ತದೆ. ಜ್ಞಾನ, ವಿಜ್ಞಾನ ತಂತಜ್ಞಾನಗಳ ಬೆಳವಣಿಗೆಗಳು ಯಾವುದೇ ದೇಶವನ್ನು ಬಹುಭಾಷಿಕ ರಾಷ್ಟ್ರವನ್ನಾಗಿಸಿವೆ. ಅಂತಹ ರಾಷ್ಟ್ರಗಳಲ್ಲಿ ಭಾರತವೂ ಒಂದು.

1961 ರ ಜನಗಣತಿಯ ಪ್ರಕಾರ ಭಾರತದಲ್ಲಿ 1632 ರಷ್ಟು ಭಾಷೆ ಮತ್ತು ಉಪಭಾಷೆಗಳು ಇವೆ ಎಂದು ಅಂದಾಜಿಸಲಾಗಿದೆ. ಕರ್ನಾಟಕದಲ್ಲಿ 177 ವಿವಿಧ ಮನೆ ಮಾತುಗಳುಳ್ಳ ಜನರು ವಾಸವಾಗಿದ್ದಾರೆ. ಮಾನವ ತನ್ನ ಪರಸ್ಪರ ವ್ಯವಹಾರಕ್ಕೆ. ವ್ಯಾಪಾರಕ್ಕೆ ಒಂದಕ್ಕಿಂತ ಹೆಚ್ಚು ಭಾಷೆ ಹೊಂದುವುದು ಅನಿವಾರ್ಯ. ಈ ಅನಿವಾರ್ಯತೆ ದ್ವಿಭಾಷಿಕತೆಯ ಸೃಷ್ಟಿಗೆ ಕಾರಣ. ಆತನ ಮೂಲಭೂತ ಅವಶ್ಯಕತೆಯ ಪೂರೈಕೆಯ ಸಂದರ್ಭಗಳು ದ್ವಿಭಾಷಿಕತೆಯ ಪರಿಸರ ಹುಟ್ಟಿಗೆ ಕಾರಣವಾಗುತ್ತದೆ.

ಕನ್ನಡ ಭಾಷೆ ಮೊದಲಿನಿಂದಲೂ ದ್ವಿಭಾಷಿಕತೆಯ ಪ್ರಕ್ರಿಯೆಗೆ ಒಳಗಾಗಿದೆ, ಪ್ರಾರಂಭದಲ್ಲಿ ಕನ್ನಡ-ಸಂಸ್ಕೃತಗಳ ದ್ವಿಭಾಷಿಕತೆಯ ಸಂದರ್ಭ ಕಾಣಿಸಿಕೊಂಡಂತೆ, ಇಂದು ಕನ್ನಡ-ಇಂಗ್ಲೀಶ್, ಕನ್ನಡ-ಹಿಂದಿ, ಕನ್ನಡ-ತೆಲುಗು, ಕನ್ನಡ-ಮರಾಠಿ, ಕನ್ನಡ-ತಮಿಳು, ಕನ್ನಡ-ಉರ್ದು ಮುಂತಾಗಿ ಕಂಡುಬರುತ್ತವೆ.

ಯಾವುದೇ ಒಂದು ಭಾಷಿಕ ಸಮುದಾಯವು ತಾನು ನೆಲಸಿರುವ ಸಾಮಾಜಿಕ ಪರಿಸರದ ಭಾಷೆಯನ್ನು ಅವಲಂಬಿಸಬೇಕಾಗುತ್ತದೆ. ಪ್ರತಿಯೊಂದು ಸಮಾಜದಲ್ಲೂ ಎರಡು ರೀತಿಯ ಭಾಷಿಕ ಪರಿಸರಗಳು ಕಾಣಿಸಿಕೊಳ್ಳುತ್ತವೆ. ಅವುಗಳು.

೧) ಪ್ರಧಾನ ಭಾಷಾ ಪರಿಸರ

೨) ಅಲ್ಪ ಸಂಖ್ಯಾತರ ಭಾಷಾ ಪರಿಸರ

ಸಮಾಜದಲ್ಲಿ ಅಲ್ಪ ಸಂಖ್ಯಾತರು ಪ್ರಧಾನ ಭಾಷೆಯನ್ನು ಸ್ವೀಕರಿಸಿ ಬಳಸಬೇಕಾಗುತ್ತದೆ. ಈ ಪ್ರಧಾನ ಭಾಷೆಯ ವಿವಿಧ ವಲಯಗಳು ಅಲ್ಪ ಸಂಖ್ಯಾತರನ್ನು ದ್ವಿಭಾಷಿಕರನ್ನಾಗಿಯೂ ಬಹುಭಾಷಿಕರನ್ನಾಗಿಯೂ ಪರಿವರ್ತನೆ ಮಾಡುತ್ತವೆ. ಸಾಮಾನ್ಯವಾಗಿ ಎರಡು ಸಮುದಾಯಗಳು ಪರಸ್ಪರರಲ್ಲಿ ಸಂಪರ್ಕ ಏರ್ಪಟ್ಟಾಗ ಆ ಎರಡು ಸಮುದಾಯಗಳು ಪರಸ್ಪರರು ಆ ಭಾಷೆಯನ್ನು ಕಲಿಯಬೇಕಾಗಿ ಬರಬಹುದು, ಇಲ್ಲವೆ ಒಂದು ಸಮುದಾಯದವರು ಮಾತ್ರ ಇನ್ನೊಂದು ಸಮುದಾಯದ ಭಾಷೆಯನ್ನು ಕಲಿಯಬಹುದು ಅಥವಾ ಎರಡೂ ಸಮುದಾಯಗಳು ಕಲಿಯಬಹುದು.

ಸಮುದಾಯಗಳು ಈ ಮೊದಲೇ ಎರಡಕ್ಕು ಸಾಮಾನ್ಯ ಭಾಷೆಯನ್ನು ತಿಳಿದಿದ್ದರೆ. ಆ ಮೂರನೇ ಭಾಷೆಯ ಮೂಲಕವೇ ಪರಸ್ಪರರು ವ್ಯವಹರಿಸುತ್ತಾ ತಮ್ಮ ಮಾತೃ ಭಾಷೆಯನ್ನು ತಮ್ಮ ತಮ್ಮ ಸಮುದಾಯದೊಳಗಿನ ವ್ಯವಹಾರಕ್ಕೆ ಬಳಸಿಕೊಳ್ಳಬಹುದು. ಇಂತಹ ಸಂದರ್ಭದಲ್ಲಿ ಇಡೀ ಸಮುದಾಯವು ಇನ್ನೊಂದು ಭಾಷೆಯನ್ನು ಕಲಿಯಬೇಕಾಗಿ ಬರಬಹುದು ಅಥವಾ ಕೆಲವೇ ವ್ಯಕ್ತಿಗಳು ಕಲಿತು ತಮ್ಮ ಸಮಾಜಕ್ಕೆ ಭಾಷಾ ಮಧ್ಯವರ್ತಿಯಾಗಿ ಇದ್ದು ಬಿಡಬಹುದು.

ಈ ದ್ವಿಭಾಷಿಕ ಪರಿಸರದಲ್ಲಿ ವ್ಯಕ್ತಿಗಳ ಸಂಖ್ಯೆ ಕಾಲಕ್ರಮೇಣ ಹೆಚ್ಚಾಗುತ್ತಾ ಸಾಗಿ ಇಡೀ ಸಮುದಾಯ ಇನ್ನೊಂದು ಭಾಷೆಯನ್ನು ಕಲಿಯುವ ಪರಿಸ್ಥಿತಿ ತಲುಪಬಹುದು, ಅದು ಸಾಮಾಜಿಕ, ಆರ್ಥಿಕ, ಹಾಗೂ ಜನಸಂಖ್ಯಾ ಪ್ರಮಾಣಕ್ಕೆ ಹೊಂದಿಕೊಂಡಂತೆ ಆಯಾ ಸಮುದಾಯ ಸಂಪರ್ಕ ಕೆಲವೊಮ್ಮೆ ಪ್ರತ್ಯಕ್ಷವಾಗಿ ಕೆಲವೊಮ್ಮೆ ಅಪ್ರತ್ಯಕ್ಷವಾಗಿರಬಹುದು. ಅವಶ್ಯಕತೆಗಾಗಿ ಬರಬಹುದು, ಇಲ್ಲವೇ ಶಿಕ್ಷಣಕ್ಕಾಗಿ, ಆಡಳಿತಕ್ಕಾಗಿ, ಮತ್ತೊಂದು ಭಾಷೆಯನ್ನು ಕಲಿಯಬೇಕಾಗಿ ಬರಬಹದು. ಇತರೆ ಸಮಾಜದ ಸಾಹಿತ್ಯ ಅರಿಯುವ ಕುತೂಹಲಕ್ಕೋ, ಅನಿವಾರ್ಯತೆಗೋ, ರಾಜಕೀಯ ಇಚ್ಛಾ ಶಕ್ತಿಗೋ, ಒತ್ತಡಕ್ಕೋ... ಸಿಲುಕಿ ಬೇರೆ ಭಾಷೆ ಕಲಿಯುವ ಸಂದರ್ಭಗಳು ಬರಬಹದು.

[೧]"ಬಹು ಹಿಂದಿನಿಂದಲೂ ಕರ್ನಾಟಕಕ್ಕೆ ವಿವಿಧ ಕಾಲಘಟ್ಟದಲ್ಲಿ ಬೇರೆ ಬೇರೆ ಪ್ರದೇಶಗಳಿಂದ ಬೇರೆ ಬೇರೆ ಭಾಷೆಯನ್ನು ಆಡುವ ಜನರು ವಲಸೆ ಬರುತ್ತಲೇ ಇದ್ದಾರೆ. ಪ್ರಾಕೃತವನ್ನಾಡುತ್ತಿದ್ದ ಜನ ಸಮುದಾಯಗಳಿಂದ ಮೊದಲ್ಗೊಂಡು ಬೇರೆ ಬೇರೆ ಮಧ್ಯ ಇಂಡೋ ಆರ‍್ಯನ್ ಭಾಷೆಯನ್ನಾಡುವ ಜನರು ಕರ್ನಾಟಕಕ್ಕೆ ಬಂದಿದ್ದಾರೆ. ಇವರಲ್ಲಿ ಕೆಲವರು ತಮ್ಮ ಮಾತೃ ಭಾಷೆಯನ್ನು ಕಳೆದುಕೊಂಡು ಕನ್ನಡವನ್ನೇ ತಮ್ಮ ಭಾಷೆಯನ್ನಾಗಿ ಸ್ವೀಕರಿಸಿರುವುದೂ ಸಾಧ್ಯ , ಆದರೆ ಉಳಿದವರು ಚಿಕ್ಕ ಚಿಕ್ಕ ದ್ವಿಭಾಷಿಕ ಸಮುದಾಯಗಳಾಗಿ ರೂಪಗೊಂಡಿರುವುದಕ್ಕೆ ಉತ್ತರ ಕನ್ನಡ ಜಿಲ್ಲೆಯ ಹಲವಾರು ಬುಡಕಟ್ಟಿನ ಜನರು ಇದಕ್ಕೆ ನಿದರ್ಶನ." [೧] ಈ ಹೇಳಿಕೆ ಬಳ್ಳಾರಿ ಜಿಲ್ಲೆಗೆ ತತ್ವಶಃ ತೆಲುಗು ಮತ್ತು ಉರ್ದು ಭಾಷಿಕರಿಗೆ ಅನ್ವಯವಾಗುತ್ತದೆ. ಈ ತೆಲುಗು ಮತ್ತು ಉರ್ದು ಭಾಷಿಕರು ಮಾತನಾಡುವ ಕನ್ನಡ ಪದಗಳು ಹಾಗೂ ಅದರ ಹಿಂದಿರುವ ನಿಯಮಗಳನ್ನು ವಿವರಿಸುವುದು ಈ ಸಂಪ್ರಬಂಧದ ಮುಖ್ಯ ಉದ್ದೇಶವಾಗಿದೆ.

೧) ಕನ್ನಡ ಮತ್ತು ಉರ್ದು :- ಬಳ್ಳಾರಿ ಜಿಲ್ಲೆ ತುಂಬ ವೈವಿಧ್ಯ & ವೈಶಿಷ್ಟ್ಯಗಳನ್ನು ಹೊಂದಿದೆ. ಈ ಹಿಂದೆ ಹೈದ್ರಾಬಾದ್‌ನ ನಿಜಾಮನ ಆಡಳಿತಕ್ಕೂ ಒಳಪಟ್ಟಿತ್ತು. ದೇಶದ ನಾನಾ ಭಾಗಗಳಿಂದ ಉರ್ದುಭಾಷಿಕರು ಉದ್ಯೋಗಕ್ಕಾಗಿಯೋ, ಕೂಲಿಗಾಗಿಯೋ, ವಿದ್ಯಾಭ್ಯಾಸಕ್ಕಾಗಿಯೋ ಇನ್ನಿತರೆ ವ್ಯವಹಾರಕ್ಕಾಗಿ ಬಂದು ಬಳ್ಳಾರಿ ನಗರದಲ್ಲಿ ನೆಲೆ ನಿಲ್ಲುವ ಸಂದರ್ಭದಲ್ಲಿ ತಮ್ಮ ಮಾತೃಭಾಷೆ ಉರ್ದುವಿನ ಜೊತೆಗೆ ವ್ಯವಹಾರಿಕ ಭಾಷೆಯಾಗಿ ಕನ್ನಡ ಭಾಷೆಯನ್ನು ಬಳಸಿಕೊಳ್ಳುವ ಅನಿವಾರ್ಯತೆ ಎದುರಾಗಿದೆ. ಈ ಅನಿವಾರ್ಯತೆ ಉರ್ದು ಭಾಷಿಕರನ್ನು ದ್ವಿಭಾಷಿಕರನ್ನಾಗಿ ನಿರ್ಮಿಸಿದೆ. ಕನ್ನಡ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದೆ. ಮೊದಲನೆಯದು ತಮಿಳು, ಎರಡನೆಯದು ಕನ್ನಡ ಆದರೆ ಉರ್ದು ಇಂಡೋ ಆರ‍್ಯನ್ ಭಾಷಾವರ್ಗಕ್ಕೆ ಸೇರಿದ್ದಾಗಿದೆ. ಹೀಗಿದ್ದರೂ ಕರ್ನಾಟಕದಲ್ಲಿ ಬಹುಸಂಖ್ಯಾತರಾಡುವ ೨ನೇಯ ಭಾಷಾ ಸ್ಥಾನವನ್ನು ಉರ್ದು ಭಾಷೆ ಪಡೆದಿದೆ.

ಡಾ. ಕೆ. ವಿ. ನಾರಾಯಣ ಅವರು ಹೇಳುವಂತೆ "ಭಾರತದಲ್ಲಿ ಉರ್ದು ಅಂಥ ಒಂದು ಭಾಷೆ. ಇದು ಭಾರತದಲ್ಲಿ ಯಾವುದೇ ರಾಜ್ಯದ ಅಧಿಕೃತ ಭಾಷೆಯಲ್ಲ, ಆದರೆ ಹಲವು ರಾಜ್ಯಗಳಲ್ಲಿ ದ್ವಿಭಾಷಿಕ ಸನ್ನಿವೇಶವನ್ನು ಸೃಷ್ಟಿಸಿದೆ. ಕೆಲವು ರಾಜ್ಯಗಳಲ್ಲಿ (ಉದಾ : ಉ.ಪ್ರದೇಶ, ಆಂದ್ರ ಪ್ರದೇಶ) ಎರಡನೆಯ ಅಧಿಕೃತ ಭಾಷೆಯಾಗಿದೆ. ಉಳಿದ ರಾಜ್ಯಗಳಲ್ಲಿ ಆ ಸ್ಥಾನವಿಲ್ಲ, ಉರ್ದು ಬಾಷಿಕರ ಈ ಪರಿಸ್ಥಿತಿ ಸದಾ ಚಡಪಡಿಕೆಯನ್ನು ತೋರಿಸುವುದು ಮುಂದುವರೆದಿದೆ" ಎಂಬ ಮಾತು ಈ ಉರ್ದು ಭಾಷಿಕರು ದ್ವಿಭಾಷಿಕತೆಯನ್ನು ಮೈಗೂಡಿಸಿಕೊಳ್ಳುವ ಅನಿವಾರ್ಯತೆಯನ್ನು ಎತ್ತಿ ತೋರಿಸಿದೆ. ಇದು ಬಳ್ಳಾರಿ ನಗರಕ್ಕೆ ಹೊರತಾಗಿಲ್ಲ.

೨) ಕನ್ನಡ ಮತ್ತು ತೆಲುಗು :- ಬಳ್ಳಾರಿ ಜಿಲ್ಲೆ ಮತ್ತು ಆಂದ್ರದಲ್ಲಿರುವ ಕರ್ನೂಲ್, ಕಡಪ, ಅನಂತಪುರ ಜಿಲ್ಲೆಗಳು ಒಂದೇ ಆಡಳಿತಕ್ಕೆ ಒಳಪಟ್ಟಿದ್ದವು. ತೆಲುಗರಿಗೂ ಮತ್ತು ಕನ್ನಡಿಗರಿಗೂ ಇರುವ ಸಂಬಂಧ ಪ್ರಾಚೀನವಾದುದು, ಬರೀ ಭಾಷಾ ಸಂಬಂಧ ಅಷ್ಟೇ ಅಲ್ಲ , ಚಾರಿತ್ರಿಕ ಸಂಬಂಧವೂ ತುಂಬಾ ಹತ್ತಿರವಿದೆ.

"ವಿಜಯ ನಗರ ಪ್ರಾರಂಭ ಕಾಲದ ರಾಜರುಗಳ ಆಳ್ವಿಕೆಯ ಕಾಲದಲ್ಲಿ ತೆಲುಗು ಮಾತನಾಡುವ ಪ್ರದೇಶವು ಕನ್ನಡ ಮಾತನಾಡುವ ಪ್ರದೇಶಗಳ ನಿಕಟ ಸಂಪರ್ಕ ಹೊಂದಿತ್ತು, ಅದರ ರಾಜಧಾನಿಯು ದ್ವಿಭಾಷಾ ಪ್ರದೇಶದಲ್ಲಿ ನೆಲೆಗೊಂಡಿತ್ತು, ವಿಜಯನಗರ ಸಾಮ್ರಾಜ್ಯದಲ್ಲಿ ಅರ್ಧದಷ್ಟು ಭಾಗವು ತೆಲುಗು ಮಾತನಾಡುವ ಪ್ರದೇಶಗಳಿಂದ ಕೂಡಿತ್ತಾದರೂ ವಿಜಯನಗರದ ಮೊದಲನೆಯ ರಾಜ ವಂಶವು ಕನ್ನಡ ವಿದ್ವಾಂಸರಿಗೆ ಆಶ್ರಯ ನೀಡಿತ್ತು" [೨]

ರಾಯಲ ಸೀಮೆಯ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡದಷ್ಟೇ ತೆಲುಗು ಭಾಷೆಗೂ ಆದ್ಯತೆ ಸಿಕ್ಕಿತ್ತು. ಕನ್ನಡ ಮತ್ತು ತೆಲುಗು ಒಂದೇ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದವುಗಳು, ಕನ್ನಡ ದಕ್ಷಿಣ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಭಾಷೆಯಾದರೆ. ತೆಲುಗು ಮಧ್ಯ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಭಾಷೆಯಾಗಿದೆ.

೩) ಬಳ್ಳಾರಿನಗರದಲ್ಲಿ ಕನ್ನಡದ ಸ್ಥಾನ ಮಾನ :- ಸು. ೬ ರಾಜಮನೆತನಗಳು ಆಳ್ವಿಕೆ ನಡೆಸಿದ ಈ ಜಿಲ್ಲೆ ತನ್ನದೇ ಆದ ಸಾಂಸ್ಕೃತಿಕತೆಯನ್ನು ಬೆಳೆಸಿಕೊಂಡು ಬಂದಿದೆ. ಐತಿಹಾಸಿಕವಾಗಿ ಪ್ರಸಿದ್ದಗೊಂಡ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಿಂದ ಹಿಡಿದು, ಬ್ರಿಟೀಷರ ಮದ್ರಾಸ್ ಆಳ್ವಿಕೆಗೆ, ಮೈಸೂರ್ ಆಳ್ವಿಕೆಗೆ, ಹೈದ್ರಾಬಾದ್ ನಿಜಾಮನ ಆಳ್ವಿಕೆಗೆ, ರಾಯಲ್ ಸೀಮೆಯ ಆಳ್ವಿಕೆಗಳಿಗೂ, ಒಳಪಟ್ಟಿತ್ತು.

ತುಂಗಭದ್ರ ಆಣೆಕಟ್ಟು , ಜಿಂದಾಲ್ ಉಕ್ಕು ಕಾರ್ಖಾನೆ, ವಿದ್ಯುತ್ ಸ್ಥಾವರಗಳು, ಮೈನ್ಸ್ ಧನಿಗಳ ನೆಲೆಬೀಡು ಈ ಜಿಲ್ಲೆ. ಹೀಗಾಗಿ ಹಲವು ಕಾರಣಗಳಿಂದ ರಾಜ್ಯದ ಮತ್ತು ರಾಷ್ಟ್ರದ ಹಲವು ಭಾಗಗಳಿಂದ ಜನರು ಆಕರ್ಷಿತರಾಗಿ ಉದ್ಯೋಗಕ್ಕೋ, ಕೂಲಿಗೋ ಬಂದು ನೆಲೆ ನಿಂತಿದ್ದಾರೆ. ದ್ವಿಭಾಷಿಕ ನೆಲೆಯಾದ ಈ ನಗರ ಕನ್ನಡದಷ್ಟೇ ತೆಲುಗಿಗೂ ಮಾನ್ಯತೆ ನೀಡಿದ್ದರಿಂದ, ಇಲ್ಲಿಯ ಭಾಷೆ ಜನರ ಬಾಯಲ್ಲಿ 'ಕನ್ನಡ ಮತ್ತು ತೆಲುಗು' ಮಿಶ್ರಣಗೊಂಡು ಪ್ರಸಾರಗೊಳ್ಳುತ್ತದೆ. ತೆಲುಗಿನ ಪ್ರಭಾವ ನಗರ ವಾಸಿಗಳಲ್ಲಿ ದಟ್ಟವಾಗಿ ಕಾಣುತ್ತದೆ. ಕನ್ನಡ ಭಾಷೆಯನ್ನು ತೆಲುಗಿನಂತೆಯೇ ಬಳಸಿಕೊಳ್ಳುವುದನ್ನು ಕಾಣಬಹುದು.

ಉದಾ : 'ಳ' ಕಾರದ ಬದಲಾಗಿ 'ಲ' ಕಾರವನ್ನು 'ಣ' ಕಾರದ ಬದಲಾಗಿ 'ನ' ಕಾರವನ್ನು 'ಕ್ಷ' ಕಾರದ ಬದಲಾಗಿ 'ಚ' ಕಾರ ಬಳಕೆಯಲ್ಲಿದೆ. ಬಳ್ಳಾರಿ ನಗರದಲ್ಲಿ ಇಂತಹ ಅನೇಕ ಉದಾಹರಣೆಗಳು ಕಾಣಸಿಗುತ್ತವೆ. ಕರ್ನಾಟದಲ್ಲಿ ಕನ್ನಡ ಉರ್ದು ಬಹುಸಂಖ್ಯಾತರ ಭಾಷೆಗಳಾದರೆ, ತೆಲುಗು ಬಹುಸಂಖ್ಯಾತರಾಡುವ ಭಾಷೆಗಳಲ್ಲಿ ೩ನೇ ಸ್ಥಾನದಲ್ಲಿದೆ. ಈ ತೆಲುಗನ್ನು ಕರ್ನಾಟಕದ ಗಡಿ ಭಾಗದ ಜನರು ಹೆಚ್ಚು ಬಳಸುತ್ತಿದ್ದಾರೆ. ತೆಲುಗು ಭಾಷೆ ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ಅತಿ ಹೆಚ್ಚು ಜನರು ಬಳಸುವ ಭಾಷೆಯಾಗಿದೆ. ಇತರೆ ಜಿಲ್ಲೆಗಳಲ್ಲಿ ಅಲ್ಲಲ್ಲಿ ಬಳಕೆ ಮಾಡುತ್ತಾರೆ. ಆದರೆ ಬಳ್ಳಾರಿ ನಗರದಲ್ಲೂ ಇದರ ಛಾಯೆ ಎದ್ದು ಕಾಣುತ್ತದೆ.

ಬಳ್ಳಾರಿ ಪ್ರದೇಶದ ಚಾರಿತ್ರಿಕೆ ಹಿನ್ನೆಲೆ :-

ಕರ್ನಾಟಕ ರಾಜಧಾನಿಯಿಂದ ಸುಮಾರು ೩೫೦ ಕಿ.ಮೀ. ದೂರದಲ್ಲಿರುವ ಬಳ್ಳಾರಿ ಜಿಲ್ಲೆ ಪ್ರಮುಖ ಆರು ರಾಜಮನೆತನಗಳ ಆಳ್ವಿಕೆಗೆ ಹೆಸರಾಗಿದೆ. ಹಾಗೂ ಮಹತ್ವದ ಸಾಂಸ್ಕೃತಿಕ ಕೇಂದ್ರಗಳಲ್ಲಿ ಇದು ಒಂದು. ೧೯೫೩ ರ ವರೆಗೆ ಬಳ್ಳಾರಿ ಜಿಲ್ಲೆ ಮದ್ರಾಸ್ ಪ್ರಾಂತ್ಯದ ಒಂದು ಜಿಲ್ಲೆಯಾಗಿತ್ತು. ಕರ್ನಾಟಕದಲ್ಲಿ ಅತಿ ಹೆಚ್ಚು ಕಾಲ ಬ್ರಿಟೀಷರ ಆಳ್ವಿಕೆಯಲ್ಲಿದ್ದ ಬಳ್ಳಾರಿಯು ಹೈದ್ರಾಬಾದ್ ನಿಜಾಮನ ಆಳ್ವಿಕೆಗೂ ಒಳಪಟ್ಟಿತ್ತು.

"ಈ ಪ್ರದೇಶಗಳನ್ನು ಕ್ರಿ.ಶ. ೧೮೦೦ ರಲ್ಲಿ ಹೈದ್ರಾಬಾದ್ ನಿಜಾಮನು ಬ್ರಿಟೀಷರಿಗೆ ನೀಡಿದ್ದರಿಂದ ಇವುಗಳನ್ನು "ಸೀಡೆಡ್ ಡಿಸ್ಟ್ರಿಕ್"[೩] ಎಂದು ಕರೆಯಲಾಗಿದೆ. ಹೀಗೆ ಬಳ್ಳಾರಿ ಬ್ರಿಟೀಷರ ವಸಾಹಾತುಶಾಹಿಯ ಮದ್ರಾಸ್ ಪ್ರಾಂತ್ಯಕ್ಕೂ, ಇತ್ತ ಹೈದ್ರಾಬಾದ್ ನಿಜಾಮನ ಸಂಸ್ಥಾನದ ಅಧಿಕಾರದ ವ್ಯಾಪ್ತಿಗೂ, ಸೇರಿಕೊಂಡಿದ್ದರಿಂದ ಇದರ ಚರಿತ್ರೆ ಸಂಕೀರ್ಣ ಸ್ವರೂಪದಲ್ಲಿ ಸಾಗಿದೆ. ಇಲ್ಲಿಯ ಬಹುಸಂಖ್ಯಾತ ಕನ್ನಡಿಗರಿಗೆ ತೆಲುಗು ಭಾಷೆಯ ದ್ವಿಭಾಷಿಕ ಸಂದರ್ಭದೊಟ್ಟಿಗೆ ಆಡಳಿತಾತ್ಮಕ ಕಾರಣಗಳಿಂದಾಗಿ ಉರ್ದು ಮತ್ತು ವಸಹಾತುಶಾಹಿ ಇಂಗ್ಲೀಶ್‌ನ್ನು ಮುಖಾಮುಖಿಯಾಗುವ ಅವಕಾಶಗಳು ಏರ್ಪಟ್ಟವು, ಹೀಗಾಗಿ ಇಲ್ಲಿ ವಿಶಿಷ್ಠ ಭಾಷಾ ಸಂಕೀರ್ಣ ಚರಿತ್ರೆ ಈ ಜಿಲ್ಲೆಗಿದೆ.

೪) ಬಳ್ಳಾರಿ ಪದದ ಅರ್ಥ :- ಈ ಜಿಲ್ಲೆಯಲ್ಲಿ ಎಲ್ಲಾ ಸಮುದಾಯಗಳಿದ್ದು ವಿವಿಧ ಧರ್ಮಗಳ ಜನರು ಬಳ್ಳಾರಿ ನಗರದಲ್ಲಿ ನೆಲೆಸಿದ್ದಾರೆ. ಅವರು ತಮ್ಮದೇ ಆದ ಸಾಂಸ್ಕೃತಿಕ ಪರಂಪರೆ ಹೊಂದಿದ ಸಮುದಾಯಗಳು ತಮ್ಮದೇ ಆದ ಭಾಷೆಯನ್ನು ಬಳಸುವುದು ಸಹಜ"[೪]

ಬಳ್ಳಾರಿ-ಎಂಬ ಹೆಸರು 'ಬಳರಿ' 'ಬಲ್ಲಹರಿ' ಬಳ್ಳಾರಿ... ಇತ್ಯಾದಿಯಾಗಿ ಅನೇಕ ಕಡೆ ಬಳಕೆಗೊಂಡಿದೆ. "ಇಲ್ಲಿಯ ಬಳ್ಳಾರಿ ಎಂಬುದು ಕಾಳಿಯ ಮತ್ತೊಂದು ಹೆಸರು "ಬನದ ಬಳ್ಳಾರಿ" "ಬನದ ಬಳರಿ" ಎಂದು ಕರೆಯುವುದರಿಂದ ಬನದಲ್ಲಿ (ಅಡವಿಯಲ್ಲಿ) ಸ್ಥಾಪಿಸಲ್ಪಟ್ಟಿರುವ ದೇವತೆಯಾಗಿರಬಹುದು"-ಎಂದು ಡಾ. ಎಂ.ಎಂ. ಕಲ್ಬುರ್ಗಿಯವರು ಅಭಿಪ್ರಾಯಪಡುತ್ತಾರೆ. 'ಬಳರಿ' ಯೇ ಬಳ್ಳಾರಿಯ ಪ್ರಸಿದ್ಧ ದುರುಗಮ್ಮ ದೇವಿಯಾಗಿರಬಹುದೆಂದು ಈ ಮಾಕಾಳಿ ಅಥವಾ ಬಳರಿ ಇರುವುದರಿಂದ 'ಬಳ್ಳಾರಿ' ಎಂಬ ಹೆಸರು ಈ ಜಿಲ್ಲೆಗೆ ಅನ್ವರ್ಥವಾಗಿ ಬಂದಿರಬಹುದು ಎಂದು ಕೆಲವರ ಅಭಿಮತ

ಡಾ. ಎಂ.ಎಂ. ಕಲ್ಬುರ್ಗಿಯವರು "ಕೋಲಾರದಲ್ಲಿ" 'ಕೋಲಾರಮ್ಮ' ಎಂಬ ಹೆಸರಿನ ದೇವತೆ ಇರುವುದರಿಂದ 'ಕೋಲಾರ' ಎಂಬ ಹೆಸರು ಬಂದಂತೆ, ಬಳ್ಳಾರಿಯಲ್ಲಿ 'ಬಳರಿ' ಅಥವಾ "ಬಳಾರಿಯಮ್ಮ" ಇರುವುದರಿಂದ 'ಬಳ್ಳಾರಿ' ಎಂಬ ಹೆಸರು ಏಕೆ ಬಂದಿರಬಾರದು? ಎಂದು ಪ್ರಶ್ನಿಸುತ್ತಾರೆ. ಈ ಹೆಸರಿನ ಬಗೆಗೆ ಹಲವಾರು ದಂತ ಕತೆಗಳೂ ಉಂಟು ಅವು ಇಲ್ಲಿ ಅಪ್ರಸ್ತುತ ಬಳ್ಳಾರಿಯು ಆಂದ್ರದ 'ರಾಯಲಸೀಮೆ'-ಯ ಒಂದು ಭಾಗವೂ ಹೌದು.

ಬಳ್ಳಾರಿ ನಗರದ ಭಾಷಿಕ ಪರಿಸರ :-

ಬಳ್ಳಾರಿ ನಗರದ ಕನ್ನಡ ಭಾಷಾ ಪರಿಸರದಲ್ಲಿ ವಾಸಿಸುವ ಉರ್ದು ಮತ್ತು ತೆಲುಗು ಮಾತೃ ಭಾಷೆ ಹೊಂದಿರುವ ಈ ಭಾಷಿಕರು ತಮ್ಮ ಮನೆಯ ಆವರಣದಲ್ಲಿ ತಮ್ಮ ಮಾತೃ ಭಾಷೆಗಳಾದ ಉರ್ದು ಮತ್ತು ತೆಲುಗು ಭಾಷೆಗಳನ್ನು ಬಳಸುತ್ತಾರೆ. ಆದರೆ ಸಾರ್ವಜನಿಕ ಆವರಣದಲ್ಲಿ ಕನ್ನಡ-ಉರ್ದು ಹಾಗೂ ಕನ್ನಡ-ತೆಲುಗು ಮಿಶ್ರಿತ ರೂಪಗಳ ಬಳಕೆ ಹೆಚ್ಚಿದೆ.

ಸಾರ್ವಜನಿಕ ವಲಯಗಳೆಂದರೆ, ಸಿನಿಮಾ ಮಂದಿರಗಳು ಮಾರುಕಟ್ಟೆಗಳು, ಮನೋರಂಜನ ಸ್ಥಳಗಳು, ಸಾರ್ವಜನಿಕ ವೇದಿಕೆಗಳು, ಆಫೀಸು, ಆಟದ ಮೈದಾನ, ಹೋಟೆಲ್‌ಗಳು, ಬಸ್ ನಿಲ್ದಾಣಗಳು... ಈ ಮುಂತಾದವುಗಳು, ಈ ಎಲ್ಲಾ ಆವರಣಗಳಲ್ಲಿ ಬಹುಸಂಖ್ಯಾತರಾದ ಕನ್ನಡಿಗರು ವ್ಯವಹಾರ ಮಾಡುವುದರಿಂದ ಅನಿವಾರ್ಯವಾಗಿ ಉರ್ದು ಭಾಷಿಕರು ಮತ್ತು ತೆಲುಗು ಭಾಷಿಕರು ಕನ್ನಡ ಭಾಷೆಯನ್ನು ಬಳಕೆ ಮಾಡುವ ಒತ್ತಡವಿದೆ. ಆದ್ದರಿಂದ ಇಂತಹ ಸನ್ನಿವೇಶ, ಸಂದರ್ಭಗಳಲ್ಲಿ ಉರ್ದು-ತೆಲುಗು ಭಾಷಿಕರು-ಕನ್ನಡ ಭಾಷೆಯನ್ನು ಅಲ್ಲಿ ಬಳಕೆ ಮಾಡುವ ಒತ್ತಡವಿದೆ. ಆದ್ದರಿಂದ ಇಂತಹ ಸನ್ನಿವೇಶ, ಸಂದರ್ಭಗಳಲ್ಲಿ ಉರ್ದು-ತೆಲುಗು ಭಾಷಿಕರ ಕನ್ನಡ ಮಾತಿನಲ್ಲಿ ಅವರ ಮಾತೃ ಭಾಷೆಯ ಸಂದರ್ಭದಲ್ಲಿ ಉಚ್ಚರಣೆ, ಶಬ್ದಕೋಶ, ವ್ಯಾಕರಣ ವಿಚಾರಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

[೫] "ಬಳ್ಳಾರಿ ನಗರದಲ್ಲಿ ಮಾತೃಭಾಷೆ ದೃಷ್ಟಿಯಿಂದ ಕನ್ನಡ, ತೆಲುಗು, ಉರ್ದು, ತಮಿಳು, ಇಂಗ್ಲೀಶ್, ಮಲೆಯಾಳಂ, ಮರಾಠಿ, ಲಂಬಾಣಿ, ಹಾಗೂ ಹಿಂದಿ... ಇತ್ಯಾದಿ ಭಾಷೆಗಳನ್ನಾಡುವ ಭಾಷಿಕರಿದ್ದಾರೆ." ತೆಲುಗರು ತಮ್ಮ ಮನೆಯ ವಾತಾವರಣದಲ್ಲಿ 'ಶಿಷ್ಟ ತೆಲುಗು' ಮಾತನಾಡಿದರೆ. ಉರ್ದು ಭಾಷಿಕರು (ಮುಸ್ಲಿಂರು) ತಮ್ಮ ಮನೆಯ ಪರಿಸರದಲ್ಲಿ ಉರ್ದುವನ್ನು ಬಳಸುತ್ತಾರೆ. ಆದರೆ ಇವರೆಲ್ಲ ವ್ಯವಹಾರಕ್ಕೆ ತೆಲುಗು ಮತ್ತು ಕನ್ನಡ ಭಾಷೆಗಳೆರಡನ್ನು ತೆಲುಗರು ಮತ್ತು ಉರ್ದು ಭಾಷಿಕರು ಬಳಸುತ್ತಾರೆ.

ಬಳ್ಳಾರಿ ನಗರದ ಕನ್ನಡ ಪರಿಸರದಲ್ಲಿ ಮಧ್ಯೆ ಮಧ್ಯೆ ತೆಲುಗು, ಉರ್ದು ರೂಪಗಳನ್ನು ಸೇರಿಸಿಕೊಂಡು ಮಾತನಾಡುವ ಭಾಷಿಕ ಪ್ರಕ್ರಿಯೆ ಇಲ್ಲಿದೆ. ವಾಕ್ಯ ರಚನೆಯಲ್ಲಿ ಇದನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಈ ಬಳ್ಳಾರಿ ನಗರದಲ್ಲಿ ಕನ್ನಡ ಪ್ರಧಾನ ಭಾಷೆಯ ಜೊತೆಗೆ ಈ ತೆಲುಗು ಮತ್ತು ಉರ್ದು ಭಾಷೆಗಳ ಪ್ರಭಾವವು

ದಟ್ಟವಾಗಿದೆ. ಕಾರಣ ನಗರದ ನಾಮಫಲಗಕಗಳಲ್ಲಿ ಸ್ಥಳನಾಮಗಳಲ್ಲಿ, ವ್ಯಕ್ತಿನಾಮಗಳಲ್ಲಿ ಕಾಣಬಹುದು ತೆಲುಗರು ವಾಸಿಸುವ ಕ್ಯಾಂಪುಗಳು, ತಾಂಡಗಳಿಗೆ ತೆಲುಗು ಹೆಸರುಗಳಿದ್ದಂತೆ, ಮಿಲ್ಲರ್ ಪೇಟೆ, ಕೌಲ ಬಜಾರಗಳೆಂದಾಗ ಮುಸ್ಲಿಂರು ಅತಿ ಹೆಚ್ಚು ವಾಸವಾಗಿರುವ ಪ್ರದೇಶಗಳೆಂಬುದು ಜನರ ಮಾತಾಗಿದೆ. 'ಮಿಲ್ಲರ್ ಪೇಟೆ'– ಎಂದರೆ ಅಲ್ಲಿನ ಕೆಲ ತಿಳುವಳಿಕೆಯ ಜನರ ಪ್ರಕಾರ 'ಕಟ್ಟಿಗೆ ಮಿಲ್ಲುಗಳು' ಹೆಚ್ಚು ಇದ್ದ ಪ್ರದೇಶ ಅದಾಗಿದ್ದರಿಂದ ಈ ಹೆಸರು ಬಂದಿದೆ ಎನ್ನುತ್ತಾರೆ.

'ಕೌಲ್ ಬಜಾರ್'–ಎಂದರೆ ಕೆಲ ಮುಸ್ಲಿಂರ ಪ್ರಕಾರ ಕೌಲು–ಎಂದರೆ ಗಟ್ಟಿ ಮಾತು, ಸತ್ಯದ ಮಾತು– ಎಂತಲು, ಹಾಗೂ ಅಂತಹ ಜನರು ವಾಸವಾದ ಸ್ಥಳವೇ ಕೌಲು ಬಜಾರ್ ಎಂದು ಬಂದಿರಬೇಕು ಎನ್ನುತ್ತಾರೆ, ಅಲ್ಲದೆ ಅದು 'ಗೌಳೇರ ಬಜಾರ್' ಆಗಿರುವ ಸಾದ್ಯತೆಗಳಿವೆ. ಕಾರಣ ಗೌಳೇರು> ಕೌಳೇರು> ಕೌಲೇರು> ಕೌಲ್ ಆಗಿರುವ ಸಾಧ್ಯತೆ ಇದೆ. ಈಗಲೂ ಈ ಭಾಗದಲ್ಲಿ ಸಾಕಷ್ಟು ಜನರು ಧನ–ಕರು ಸಾಕಿಕೊಂಡು ಹೈನು ಮಾರುವುದನ್ನು ಗಮನಿಸಿದರೆ. ಈ ಹೆಸರು ಬಂದಿರಲಿಕ್ಕೆ ಸಾಧ್ಯತೆ ಇದೆ.

ಆದರೆ ಕೆಲ ಸಾಹಿತ್ಯ ದಾಖಲೆಗಳ ಊಹೆಗಳು ಇನ್ನೊಂದು ರೀತಿಯ ಅರ್ಥವನ್ನು ಪುಷ್ಟೀಕರಿಸುತ್ತವೆ. ಈ ಬಳ್ಳಾರಿ ಜಿಲ್ಲೆ ಆಂಧ್ರಪ್ರದೇಶದ ಕರ್ನೂಲು, ಕಡಪ, ಅನಂತಪುರ ಜಿಲ್ಲೆಗಳು ಒಂದೇ ಆಡಳಿತಕ್ಕೆ ಒಳಪಟ್ಟವುಗಳು. ಹೈದ್ರಾಬಾದ್ ನಿಜಾಮನ ಆಳ್ವಿಕೆ ಕಂಡ ಈ ಪ್ರದೇಶದ ಜನತೆ ಕನ್ನಡ, ತೆಲುಗು, ಭಾಷಿಕರು ಒಟ್ಟಿಗೆ ಬದುಕುವುದಲ್ಲದೆ. ಉರ್ದು ಭಾಷಿಕರು ಈ ಎರಡು ಭಾಷೆಗಳನ್ನು ಸಮೀಕರಿಸಿಕೊಂಡು ಬದುಕುತ್ತಿದ್ದಾರೆ. ಹೀಗಾಗಿ ಬಳ್ಳಾರಿ ನಗರದಲ್ಲಿ ಕನ್ನಡ ಮತ್ತು ತೆಲುಗು ಭಾಷಿಕರ ಪರಿಸರ ಹೇಗೋ ಹಾಗೆಯೇ ಕನ್ನಡ ಮತ್ತು ಉರ್ದು ಭಾಷಿಕರ ಪರಿಸರವೂ ತುಂಬ ವೈಶಿಷ್ಟಪೂರ್ಣವೆನಿಸಿದೆ.

ಕನ್ನಡಿಗರೆಲ್ಲರೂ ತೆಲುಗು ತಿಳಿದಿರಬಹುದು, ಆದರೆ ಉರ್ದು ತಿಳಿದಿಲ್ಲ ಹಾಗೆಯೇ ಉರ್ದು ಮತ್ತು ತೆಲುಗು ಭಾಷಿಕರೆಲ್ಲರಿಗೂ ಕನ್ನಡ ಗೊತ್ತಿಲ್ಲ, ಈ ಹಿನ್ನೆಲೆಯಲ್ಲಿ ಕನ್ನಡ–ತೆಲುಗು ಮತ್ತು ಕನ್ನಡ–ಉರ್ದು ಭಾಷಿಕರನ್ನು ವರ್ಗೀಕರಿಸುವುದು ಕಷ್ಟ ಸಾಧ್ಯ . ಉರ್ದು ಭಾಷಿಕರು ಕೆಲವರು ಕನ್ನಡ ಮತ್ತು ತೆಲುಗು ಭಾಷೆಗಳೆರಡನ್ನೂ ನುಡಿಯುತ್ತಾರೆ. ಆದರೆ ಕನ್ನಡ ಮತ್ತು ತೆಲುಗು ಭಾಷಿಕರು ಉರ್ದುವನ್ನು ಮಾತನಾಡುವುದಿಲ್ಲ, ಆದರೆ ಜಿಲ್ಲಾ ಮಾತೃ ಭಾಷಾ ದೃಷ್ಠಿಯಿಂದ ಪ್ರಾಧಾನ್ಯತೆ ಕನ್ನಡಕ್ಕಿದೆ. ತೆಲುಗರು ಬಳ್ಳಾರಿ ನಗರದಲ್ಲಿ ಬಹುತೇಕ ಹೊರ ವಲಯಗಳಲ್ಲಿ ವಾಸವಾಗಿದ್ದರೆ, ಉರ್ದು ಭಾಷಿಕರು ವಿಶೇಷವಾಗಿ ಮಿಲ್ಲರ್ ಪೇಟೆ, ಕೌಲು ಬಜಾರ, ಮುಂತಾದ ಪ್ರದೇಶಗಳಲ್ಲಿ ಹೆಚ್ಚು ವಾಸವಾಗಿದ್ದಾರೆ.

ಭೌಗೋಳಿಕ ಪರಿಸರ :-

[೬] "ಬಳ್ಳಾರಿ ಜಿಲ್ಲೆ" ೧೫°-೩೦° ಇದು ಕರ್ನಾಟಕದ ಪೂರ್ವಭಾಗದಲ್ಲಿ, ಮಧ್ಯಭಾಗ ದಕ್ಷಿಣೋತ್ತರವಾಗಿ ಹಬ್ಬಿದೆ. ೧೪°- ೩೦° ಮತ್ತು ಉತ್ತರ ಅಕ್ಷಾಂಶ ಹಾಗೂ ೭೫°-೮೦° ಮತ್ತು ೭೭°-೧೧° ಪೂರ್ವ ರೇಖಾಂಶ ಇವುಗಳ ಮಧ್ಯದಲ್ಲಿದೆ. ಈ ಜಿಲ್ಲೆಯ ಒಟ್ಟು ವಿಸ್ತೀರ್ಣದ ೧.೧೬ % ರಷ್ಟಿದ್ದು ೧೧ ನೇ ಸ್ಥಾನದಲ್ಲಿದೆ. ಜಿಲ್ಲೆಯ ವಿಸ್ತೀರ್ಣದಲ್ಲಿ ಬಳ್ಳಾರಿ ತಾಲೂಕು ೧೯೮೯ ಚದುರ ಕಿಲೋಮೀಟರ್ ಹೊಂದಿದೆ. ಇದು ಬಳ್ಳಾರಿ, ಶಿರುಗುಪ್ಪ, ಸಂಡೂರು, ಕೂಡ್ಲಿಗಿ, ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹಡಗಲಿ ಹೀಗೆ ೭ ತಾಲೂಕುಗಳನ್ನು ಒಳಗೊಂಡಿದೆ. ಈ ಬಳ್ಳಾರಿ ಜಿಲ್ಲೆಗೆ ಬಳ್ಳಾರಿ ನಗರವೇ ಆಡಳಿತ ಪ್ರದೇಶವಾಗಿದೆ. ಜಿಲ್ಲೆಯ ಒಟ್ಟು ಗ್ರಾಮಗಳು ೬೧೭.

ಕರ್ನಾಟಕ ರಾಜಧಾನಿಯಿಂದ ೩೦೯ ಕಿ.ಮೀ. ದೂರದಲ್ಲಿರುವ ಈ ಜಿಲ್ಲೆಯ ಉತ್ತರಕ್ಕೆ ರಾಯಚೂರು ಜಿಲ್ಲೆ, ಪಶ್ಚಿಮಕ್ಕೆ ಕೊಪ್ಪಳ ಜಿಲ್ಲೆ, ದಕ್ಷಿಣಕ್ಕೆ ಚಿತ್ರದುರ್ಗ ಜಿಲ್ಲೆ, ಹಾಗೂ ಪೂರ್ವಕ್ಕೆ ಆಂಧ್ರಪ್ರದೇಶ ಕರ್ನೂಲ್, ಅನಂತಪುರ ಜಿಲ್ಲೆಗಳು ಸುತ್ತಿಕೊಂಡಿವೆ. ಸುಟ್ಟ ಕಲ್ಲು ಹಾಗೂ ಬೆಣಚು ಕಲ್ಲು ಮಿಶ್ರಿತದ ಕಪ್ಪು ಮಣ್ಣಿನ ಪ್ರದೇಶವಿದೆ.

ಚಳಿಗಾಲದಲ್ಲಿ ಕೆಲವೊಮ್ಮೆ ೧೫° ಸೆಂ. ನಷ್ಟು ಕನಿಷ್ಠ ಉಷ್ಣಾಂಶವನ್ನು ಹೊಂದಿದ, ಈ ಜಿಲ್ಲೆ ಇಡೀ ವರ್ಷದ ಹೆಚ್ಚಿನ ಅವಧಿಯಲ್ಲಿ ಅಧಿಕ ಉಷ್ಣಾಂಶವನ್ನು ಹೊಂದಿರುತ್ತದೆ. ಮಾರ್ಚ್ ನಿಂದ ಮೇ ತಿಂಗಳಿನವರೆಗೆ ಬೇಸಿಗೆಯ ತಾಪಮಾನ ಬಹು ತೀವ್ರವಾಗಿದ್ದು, ಗರಿಷ್ಠ ಉಷ್ಣಾಂಶ ೪೩° ಸೆ. ವರೆಗೂ ಇರುತ್ತದೆ. ಬಹುಷ್ಯ ಈ ಅಂಶವನ್ನು ಗಮನಿಸಿಯೇ ಸಾಹಿತಿ **ಬೀಚಿ**ಯವರು "ಬಳ್ಳಾರಿಯಲ್ಲಿರುವುದು 'ಬೇಸಿಗೆ ಮತ್ತು ಅತಿ ಬೇಸಿಗೆ' ಎಂಬ ಎರಡೇ ಕಾಲಗಳು" ಎಂದು ಹಾಸ್ಯ ಮಾಡಿದ್ದಾರೆ.

"ಇತ್ತೀಚಿಗೆ ನಡೆಸಿದ ಅಧ್ಯಯನ ಒಂದರ ಪ್ರಕಾರ ಜಿಲ್ಲೆಯ ಕಬ್ಬಿಣದ ಅದಿರಿನ ನಿಕ್ಷೇಪದ ಪ್ರಮಾಣ ೧೮.೮೧ ದಶಲಕ್ಷ 'ಟನ್'- ಎಂದು ಅಂದಾಜಿಸಲಾಗಿದೆ". ೧೯೭೬ ರಿಂದ ೧೯೯೧ ರ ಅವಧಿಯಲ್ಲಿ ವಾರ್ಷಿಕ ಕಬ್ಬಿಣದ ಅದಿರಿನ ಉತ್ಪತ್ತಿ ಸರಾಸರಿ ೨.೭೫ ರಿಂದ ೮.೫೦ ದಶಲಕ್ಷ ಟನ್ ಹಾಗೂ ಮ್ಯಾಂಗನೀಸ್ ಖನಿಜದ್ದು ೧೩ ರಿಂದ ೩೦ ಲಕ್ಷ ಟನ್ ಎಂದು ತಿಳಿದು ಬಂದಿದೆ" [೭]

ಇಲ್ಲಿ ಉತ್ಪಾದನೆಯಾಗುವ ಕಬ್ಬಿಣದ ಅದಿರು ಅರ್ಧಕ್ಕಿಂತ ಹೆಚ್ಚು ಭಾಗ ವಿದೇಶಗಳಿಗೆ ರಫ್ತಾಗುತ್ತದೆ. ಇಲ್ಲಿಯ ನೈಸರ್ಗಿಕ ಸಂಪತ್ತನ್ನು ಕುರಿತು ಭೂ ವಿಜ್ಞಾನಿ " ವಿ. ಬ್ರೂಸ್ ಪುಟ್"- ರವರು " ಇತಿಹಾಸ ಪೂರ್ವ ಕುರುಹುಗಳು ಈ ಜಿಲ್ಲೆಯಲ್ಲಿ ಅತ್ಯಂತ ಶ್ರೀಮಂತವಾಗಿದೆ" ಎಂದಿದ್ದಾರೆ. ನಗರದ ಪಕ್ಕದಲ್ಲಿಯೇ ಜಿಂದಾಲ್ (ವಿಜಯನಗರ) ಉಕ್ಕಿನ ಕಾರ್ಖಾನೆ ಇದ್ದು ಸಂಡೂರು ಮ್ಯಾಂಗನೀಸ್ ಕಂಪನಿಗಳ ಮಾಲೀಕರು ಬಳ್ಳಾರಿ ನಗರದಲ್ಲಿ ವಾಸವಾಗಿದ್ದಾರೆ. ೧೮೨೭ ರಲ್ಲಿ ಈ ಬಳ್ಳಾರಿ ನಗರದಲ್ಲಿ ಮುದ್ರಣ ಯಂತ್ರ ಕರ್ನಾಟಕದಲ್ಲಿಯೇ

ಮೊದಲ ಬಾರಿಗೆ ಸ್ಥಾಪಿಸಲಾಯಿತು. ಈ ನಗರ ಪ್ರಸಿದ್ಧ ಸಾಂಸ್ಕೃತಿಕ ಕೇಂದ್ರವಾಗಿದ್ದು ಇಲ್ಲಿಯ ಎಲ್ಲಾ ಸಮೂದಾಯಗಳು ತಮ್ಮ ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ ಸಮೂದಾಯಗಳು ತಮ್ಮದೇ ಆದ ಭಾಷೆಯನ್ನು ಬಳಸುತ್ತಿರುವುದು ಸಹಜ.

ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳು ವಿಶ್ವ ವಿಖ್ಯಾತಿಗಳಿಸಿದಂತೆ. ವಿಜಯನಗರ ಸಾಮ್ರಾಜ್ಯವೂ ವಿಶ್ವ ವಿಖ್ಯಾತಿಯನ್ನು ಗಳಿಸಿಕೊಂಡಿತ್ತು. ಇಂತಹ ನಗರದ ಉರ್ದು-ತೆಲುಗು ಭಾಷೆಗಳ ಜನತೆಯ ಕನ್ನಡ ಪದ ರಚನೆಯ ಅಧ್ಯಯನವು ತುಂಬಾ ಅವಶ್ಯವೆನಿಸಿದೆ. ಇಂತಹ ಅಧ್ಯಯನಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ ನೆಡೆದಿವೆ ಎಂದರೆ ತಪ್ಪಾಗಲಾರದು.

ಬೆಳೆಗಳು :-

ಬಳ್ಳಾರಿ ಜಿಲ್ಲೆಯಲ್ಲಿ ಕಪ್ಪು ಮಣ್ಣು, ಕೆಂಪು ಮಣ್ಣಿನ ಪ್ರದೇಶವು ಹೆಚ್ಚಿದ್ದು, ನೀರಾವರಿ ಭೂಮಿಗಿಂತ ಮಳೆ ಆಶ್ರಯದ ಭೂಮಿಯೇ ಹೆಚ್ಚಿದೆ. ಬರಗಾಲಕ್ಕೆ ಹೆಸರುವಾಸಿಯಾದ ಈ ಜಿಲ್ಲೆ ಬಿಸಿಲಿನ ಬೇಗೆ ಇಲ್ಲಿ ಅಧಿಕ, ಮುಂಗಾರು ಹಾಗೂ ಹಿಂಗಾರು ಎರಡು ಕಾಲದಲ್ಲೂ ಬೆಳೆ ಬೆಳೆಯಲಾಗುತ್ತಿದೆಯಾದರೂ. ಮುಂಗಾರಿನಲ್ಲಿ ಭತ್ತ, ಜೋಳ, ಪ್ರಧಾನವಾದ ಬೆಳೆಯಾಗಿವೆ, ಹಾಗೆಯೇ ಭತ್ತ, ಜೋಳ, ಸಜ್ಜೆ, ನವಣೆ, ಮೆಕ್ಕೆಜೋಳ ಮೊದಲಾದವುಗಳನ್ನು ಘುಖ್ಯವಾಗಿ ಮಳೆ ಆಧರಿತ ಬೆಳೆಗಳಾಗಿವೆ. ಹತ್ತಿ, ಮೆಣಸಿನಕಾಯಿ, ಕಬ್ಬು, ಶೇಂಗಾ, ಸೂರ್ಯಪಾನ.... ಮುಂತಾದವುಗಳು ವಾಣಿಜ್ಯ ಬೆಳೆಗಳಾದರೆ, ಹುರುಳಿ, ಹಲಸಂದಿ, ಹೆಸರು, ಮಡಿಕೆ, ತೊಗರಿ, ಮುಂತಾದ ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತದೆ. ಇಲ್ಲಿ ಕಬ್ಬಿಣ ಮ್ಯಾಂಗನೀಸ್, ರೆಡ್ ಆಕ್ಸೈಡ್... ಮುಂತಾದ ಖನಿಜಗಳು ಇಲ್ಲಿ ಹೇರಳವಾಗಿ ದೊರೆಯುತ್ತವೆ. ಹೀಗಾಗಿ ಉದ್ಯೋಗದ ಅವಕಾಶಗಳು ಹೆಚ್ಚಿದ್ದರಿಂದ ಜನರು ಕೂಲಿ ಹರಸಿ ಇಲ್ಲಿಗೆ ಬರುವುದು ಸಹಜ, ವೈವಿಧ್ಯಮಯ ಖನಿಜ ಸಂಪತ್ತು ವಲಸಿಗರನ್ನು ಇಲ್ಲಿಗೆ ಕೈಬೀಸಿ ಕರೆಯುತ್ತದೆ.

ಕನ್ನಡ ಭಾಷಾ ಪ್ರಭೇದಗಳ ಮೇಲೆ ತೆಲುಗು ಭಾಷಾ ಪ್ರಭಾವ.

ಕ್ರ.ಸಂ.	ಜಿಲ್ಲೆಗಳು	ತೆಲುಗು	
೧)	ಬೀದರ್	+	
೨)	ಗುಲ್ಬರ್ಗಾ	+	
೩)	ಬಿಜಾಪುರ	–	
೪)	ಬೆಳಗಾವಿ	–	
೫)	ರಾಯಚೂರು	+	
೬)	ಬಳ್ಳಾರಿ	+ +	
೭)	ಕೊಪ್ಪಳ	–	
೮)	ಬಾಗಲಕೋಟೆ	–	
೯)	ಗದಗ್	–	
೧೦)	ಚಿತ್ರದುರ್ಗ	– +	
೧೧)	ತುಮಕೂರು	– +	
೧೨)	ಕೋಲಾರ	+ – +	
೧೩)	ಬೆಂಗಳೂರು ಉತ್ತರ	– +	
೧೪)	ಬೆಂಗಳೂರು ದಕ್ಷಿಣ	+	
೧೫)	ಮೈಸೂರು	+	
೧೬)	ಕೊಡಗು	–	
೧೭)	ದಕ್ಷಿಣ ಕನ್ನಡ	–	
೧೮)	ಉತ್ತರ ಕನ್ನಡ	–	
೧೯)	ಶಿವಮೊಗ್ಗ	–	
೨೦)	ಮಂಡ್ಯ	+	
೨೧)	ಹಾಸನ	–	
೨೨)	ಚಿಕ್ಕಮಂಗಳೂರು	–	
೨೩)	ಧಾರವಾಡ	–	
೨೪)	ಉಡುಪಿ	–	
೨೫)	ಚಾಮರಾಜನಗರ	+	
೨೬)	ಹಾವೇರಿ	–	

+ + + ಹೆಚ್ಚು + + ಸಾಧಾರಣ + ಕಡಿಮೆ – ಇಲ್ಲ

(ಕೃಪೆ : ಕರ್ನಾಟಕ ಭಾರತಿ ೧೯೭೬ ವಿಶೇಷ ಸಂಚಿಕೆ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ)

ಅಡಿ ಟಿಪ್ಪಣಿಗಳು :

೧. ಡಾ. ಕೆ.ವಿ. ನಾರಾಯಣ, ೧೯೯೯, ಪು. ೨

೨. ಶ್ರೀ ಕೆ. ಈಶ್ವರದತ್ತ, ೧೯೯೧. ೧೪೭, ವಿಜಯನಗರ ಸಾಮ್ರಾಜ್ಯ ಕಾಲದ ತೆಲುಗು ಸಾಹಿತ್ಯ. ಸಂ. ದೀಕ್ಷಿತ್

೩. ಡಾ. ಪಿ. ಮಹಾದೇವಯ್ಯ, ೧೯೯೯, ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ. ಪು. ೧೦.

೪. ಶ್ರೀ ಜಿ. ನಾಗವರ್ಮ, ಬಳ್ಳಾರಿ ಜಿಲ್ಲೆಯ ತೊಗಲುಗೊಂಬೆ ಆಟ.

೫. ಶ್ರೀ ಬಿ. ಓಂಪ್ರಕಾಶ್ ನಾಯಕ್, ಬಳ್ಳಾರಿ ವ್ಯವಹಾರಿಕ ಕನ್ನಡದ ಉಚ್ಚಾರಣೆ ಮತ್ತು ಧ್ವನಿ ನಿಯಮಗಳು, ಪು. ೭.

೬. ಡಾ. ಪಿ. ಮಹಾದೇವಯ್ಯ, ೧೯೯೯, ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ ಪು. ೯.

೭. ಪ್ರೊ. ಬಿ. ಶೇಷಾದ್ರಿ, ೧೯೯೯, ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರಿಕೀಕರಣ ಮತ್ತು ಆಂದೋಲನ, ಪು. ೧

ಅಧ್ಯಾಯ – ೨

ಬಳ್ಳಾರಿ ನಗರದ ಉರ್ದುಭಾಷಿಕರ ಕನ್ನಡದ ಉಚ್ಚಾರಣೆಯಲ್ಲಿ ಪದಗಳು ಮತ್ತು ಪ್ರಯೋಗಾರ್ಥ

ಅಧ್ಯಾಯ – ೨

ಬಳ್ಳಾರಿ ನಗರದ ಉರ್ದುಭಾಷಿಕರ ಕನ್ನಡ ಉಚ್ಚಾರಣೆಯಲ್ಲಿ ಪದಗಳು ಮತ್ತು ಪ್ರಯೋಗಾರ್ಥ

ಬಳ್ಳಾರಿನಗರದ ಉರ್ದುಭಾಷಿಕರ ಕನ್ನಡ ಪದಗಳು ವೈಶಿಷ್ಠತೆಯಿಂದ ಕೂಡಿವೆ. ತೆಲುಗು ಭಾಷಾ ಪರಿಸರ ನಗರದಲ್ಲಿ ಹೆಚ್ಚು ಇರುವುದರಿಂದ ಉರ್ದುಭಾಷಿಕರು, ಕನ್ನಡ ಭಾಷಿಕರ ಜೊತೆ ಹಾಗೂ ತೆಲುಗು ಭಾಷಿಕರ ಜೊತೆ ವ್ಯವಹರಿಸುವಾಗ ಅವರ ಪದ ಮತ್ತು ಪ್ರಯೋಗಾರ್ಥಗಳು ಇಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಗನ್‌ಮಕ್ಲು, ಗುದಾಟ, ತಗ್ದು, ಗಾದಿ, ಗರ್‌ಬೋವತಿ, ತಟಕಲ್‌ಲಾರದ, ಜಿಕ್ಕ, ಬೊಗ್ಗು, ಕೊಜ್ಜಿಣ, ಬಕ್ಸಿ, ಇತ್ಯಾದಿ ಬಹುಸಂಖ್ಯಾ ಪದಗಳು ಬಳ್ಳಾರಿನಗರದ ಉರ್ದುಭಾಷಿಕರಲ್ಲಿ ಉಚ್ಚಾರಣೆಯಲ್ಲಿವೆ.

ಬಳ್ಳಾರಿನಗರ ಒಂದು ವಿಶೇಷವಾಗಿ ಪ್ರಾದೇಶಿಕ ಉಪಭಾಷೆ ಎಂದು ನಿರ್ಧರಿಸಲು ಕೆಲ ಹೊಸ ಕನ್ನಡ ಪದ ಉಚ್ಚಾರಣೆಯಲ್ಲಿವೆ. ಕಾಲ್‌ಮರಿ, ಕೋಸ್‌ಬಿಲ್ಲಿ, ಗಾದಿ, ಜಲ್ದಿ, ದುಬ್ಬಿ, ಬರ್ತದೆ, ಹಾಂ, ಬೇಸ್, ಮೋಟಜನ, ಮಸಡ, ಮಂತಿಗಿ, ಯತ್ಯಾಸ, ಯಮಕಿ, ಯಣ, ಲಚ್ಚ, ವೀರೆಕಾಯಿ, ಮುಂತಾದ ಪ್ರಾದೇಶಿಕ ಉಪಭಾಷೆ ನಿರ್ಣಯಿಸುವ ಪದಗಳಾಗಿ ಉಚ್ಚಾರಣೆಯಲ್ಲಿರುವುದು ವಿಶೇಷ.

ಮೇಲಿನ ಎರಡು ಹಂತಗಳಲ್ಲಿ ಬಳ್ಳಾರಿನಗರದ ಕನ್ನಡದ ಉಚ್ಚಾರಣೆಯಲ್ಲಿ ಪದಗಳು ಮತ್ತು ಅವುಗಳ ಪ್ರಯೋಗಾರ್ಥದ ಹಿನ್ನೆಲೆಯಿಂದ ವಿಶ್ಲೇಷಣೆ ಮಾಡಲಾಗಿದೆ. ಪದಗಳ ವಿಶಿಷ್ಟ ಉಚ್ಚಾರಣೆಗೆ ಕಾರಣಗಳನ್ನು ಖಚಿತತೆಗಿಂತ ಸಾಧ್ಯತೆಗೆ ಹೆಚ್ಚು ಒತ್ತು ನೀಡಲಾಗಿದೆ.

೧. **ಅಮ್ಮಂದು :–** ಬರಹದ ಕನ್ನಡದ 'ಅಮ್ಮನದು' ಎಂಬ ಪದಕ್ಕೆ ಉರ್ದು ಭಾಷಿಕರಲ್ಲಿ 'ಅಮ್ಮಂದು' ಎಂದು ಉಚ್ಚಾರಣೆಗೊಳ್ಳುತ್ತದೆ. ಅನುಸ್ವರದ ಬದಲು ಅನುನಾಸಿಕ ಧ್ವನಿಯಾದ 'ನ್' ಕಾರ ವ್ಯಂಜನವಾಗಿ ಪ್ರಯೋಗವಾಗಿದೆ.

ಆದರೆ ತೆಲುಗು ಭಾಷಿಕರಲ್ಲಿ 'ಅಮ್ಮದಿ' ಎಂಬ ಪದ ಉಚ್ಚಾರಣೆಯಲ್ಲಿದ್ದು 'ನ್' ಕಾರ ಲೋಪವಾಗಿ 'ದ' ಕಾರ 'ದಿ' ಕಾರವಾಗಿ ಉಚ್ಚಾರಣೆಗೊಳ್ಳುತ್ತಿದೆ.

ಉದಾ :– ಬೇಟಾ ಇ ಚೀರಿ ನಿಮ್ ಅಮ್ಮನ್‌ದು ತಂಡೋಗಿ ಕೊಡು.

೨. **ಅಸಿರ್ವಾದ** :– ಬರಹದ ಕನ್ನಡದ 'ಆಶಿರ್ವಾದ' ಎಂಬ ಪದಕ್ಕೆ ಬಳ್ಳಾರಿ ಉರ್ದು ಕನ್ನಡಿಗರಲ್ಲಿ 'ಅಸಿರ್ವಾದ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ ಪದದ ಪ್ರಾರಂಭದ ಅಕ್ಷರ 'ಆ' ದೀರ್ಘಸ್ವರದ ಬದಲಿಗೆ ಹೃಸ್ವಸ್ವರ 'ಅ' ಬಳಕೆಯಲ್ಲಿದೆ. ಹಾಗು 'ಶ್' ಕಾರದ ಬದಲಿಗೆ 'ಸ್' ಕಾರ ಬಳ್ಳಾರಿ ಉರ್ದು ಭಾಷಿಕರಲ್ಲಿ 'ಅಸಿರ್ವಾದ' ಎಂದು ಉಚ್ಚಾರಣೆಯಲ್ಲಿದೆ. ಕನ್ನಡಿಗರಲ್ಲಿ ಆಶಿರ್ವಾದ ಇದ್ದರೆ, ತೆಲುಗು ಭಾಷಿಕರಲ್ಲಿ ಆಚಿರ್ವಾದ ಇದೆ.

ಉದಾ :– ತನ್ದೆತಾಯಿ ಅಸಿರ್ವಾದ ಚನಾಗಿರಬೇಕು.

೩. **ಅಂಚ್‌ತಾನ** :– ಬರಹ ಕನ್ನಡದಲ್ಲಿ 'ಹಂಚುತ್ತಾನೆ' ಎಂಬ ಪದಕ್ಕೆ ಬಳ್ಳಾರಿ ಉರ್ದು ಕನ್ನಡಿಗರಲ್ಲಿ 'ಅಂಚ್‌ತಾನ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ ಪದದ ಪ್ರಾರಂಭದ ಅವರ್ಗೀಯ ಅಕ್ಷರ 'ಹ' ಬದಲಿಗೆ ಹೃಸ್ವಸ್ವರ 'ಅ' ಹಾಗೂ ಚ್+ ಉ 'ದ' ಬದಲಿಗೆ 'ಚ್+ಅ' ರೂಪಗೊಂಡಿವೆ. ಹಾಗಾಗಿ 'ಅಂಚ್‌ತಾನ' ಎಂದು ಉಚ್ಚಾರಣೆಗೊಂಡಿದೆ. ತೆಲುಗು ಭಾಷಿಕರಲ್ಲಿ 'ಅಂಚ್‌ತಾನ' ಎಂದು ಉಚ್ಚಾರಣೆಯಲ್ಲಿದೆ.

ಉದಾ :– ದುಡ್‌ದುದೆಲ್ಲ ಮಂದಿಗೆ ಅಂಚ್‌ತಾನ ರೊಕ್ಕನ ಮನಿಗೆ ಕೊಡಕಿಲ್ಲ, ಸಂಸಾರ ಯಂಗ್ ನೆಡಿಬೇಕು !

೪. **ಅನ್‌ತಮ್ಮಂದ್ರು** :– ಬರಹದ ಕನ್ನಡದಲ್ಲಿ 'ಅಣ್ಣ–ತಮ್ಮಂದಿರು' ಎಂಬ ಪದಕ್ಕೆ ಉರ್ದು ಕನ್ನಡಿಗರು 'ಅನ್‌ತಮ್ಮಂದ್ರು' ಎಂದು ಉಚ್ಚಾರಿಸುತ್ತಾರೆ. ಅನುನಾಸಿಕ 'ಣ್' ಕಾರದ ಬದಲಿಗೆ 'ನ್' ಕಾರವಾಗಿ, ಬಳಕೆಗೆ ಬಂದಿರಬೇಕು. ತೆಲುಗು ಭಾಷಿಕರಲ್ಲಿ 'ಅನ್‌ತಮ್ಮುಡು' ಎಂದು ಉಚ್ಚಾರಣೆಗೊಳ್ಳುತ್ತಿದೆ. 'ಮ' ಕಾರದ ಬದಲು 'ಮು' ಕಾರ, 'ದ್' ಕಾರದ ಬದಲು 'ಡ್' ಕಾರ ಬಂದಿರುವುದು ವೈಶಿಷ್ಟ್ಯ. ಉರ್ದುಭಾಷಿಕರ ಮನೆಮಾತಿನಲ್ಲಿ ಮೂರ್ಧನ್ಯ ಅನುನಾಸಿಕ ಧ್ವನಿಯಾದ 'ಣ' ಕಾರ ಇಲ್ಲದೆ

ಇರುವುದರಿಂದ ಅದರ ಕೆಲಸವನ್ನು ದಂತ್ಯ ಅನುನಾಸಿಕ ಧ್ವನಿಯಾದ 'ನ್' ಕಾರ ಮಾಡುತ್ತಿದೆ.

ಉದಾ :– ನಾವ್ ಅನ್‌ತಮ್ಮಂದ್ರು ಯಂಟ್ ಜನ ಇರದು.

೫. ಅನ್‌ಕೋರಿ :– ಬರಹದ ಕನ್ನಡದಲ್ಲಿ 'ಅಂದುಕೊಳ್ಳಿ' ಎಂಬ ಪದಕ್ಕೆ ಬಳ್ಳಾರಿ ನಗರದ ಉರ್ದು ಭಾಷಿಕರಲ್ಲಿ 'ಅನ್‌ಕೋರಿ' ಎಂಬ ಪದ ಉಚ್ಚಾರಣೆಯಾಗುತ್ತದೆ. ಪದಮಧ್ಯದ 'ದು' ಕಾರ ಲೋಪವಾಗಿ, ಕೊನೆ ಪದ 'ಳ್ಳಿ' ಗೆ ಬದಲಿಗೆ 'ರಿ' ಕಾರ ಆದೇಶವಾಗಿದೆ. ತೆಲುಗು ಭಾಷಿಕರ ಮೂರ್ಧನ್ಯ ಅಕ್ಷರ ಲೋಪದ ಪ್ರಭಾವದಿಂದ 'ಳ್' ಕಾರ 'ರ್' ಕಾರವಾಗಿ ಉರ್ದು ಭಾಷಿಕರಲ್ಲಿ ಪರಿವರ್ತನೆ ಹೊಂದಿದೆ. ತೆಲುಗು ಭಾಷಿಕರಲ್ಲಿ 'ಅನ್‌ಕೋರಿ' ಎಂಬ ಪದವೇ ಪ್ರಯೋಗದಲ್ಲಿದೆ.

ಉದಾ :– ಶಾದಿಗೆ ಬಂದಿಲ್ಲ ಅಂತ್‌ಯಾಕ್ ಅಂತಿರಿ. ಬಂದಿನಂತ ಅನ್‌ಕೋರಿ

೬. ಅವಲು :– ಬರಹದ ಕನ್ನಡದಲ್ಲಿ 'ಅವಳು' ಎಂಬ ಪದಕ್ಕೆ ಬಳ್ಳಾರಿ ನಗರದ ಉರ್ದು ಭಾಷಿಕರಲ್ಲಿ 'ಅವಲು' ಎಂದು ಉಚ್ಚಾರಣೆಗೊಳ್ಳುತ್ತಿದೆ. 'ಳ್' ಕಾರ ಲೋಪವಾಗಿ 'ಲ್' ಕಾರ ಬಳಕೆಗೊಂಡಿರುವುದು ವಿಶೇಷ ತೆಲುಗು ಭಾಷಿಕರ ಭಾಷಾ ಪರಿಸರದ ಒತ್ತಡದಿಂದಲೇ, ತೆಲುಗು ಭಾಷಿಕರಲ್ಲಿ 'ಅವಲು' ಎಂಬ ಪದವೇ ಉಚ್ಚಾರಣೆಯಲ್ಲಿದೆ. ಉರ್ದು ಮತ್ತು ತೆಲುಗು ಭಾಷೆಯಲ್ಲಿ 'ಳ' ಕಾರ ಇಲ್ಲದೆ ಇರುವುದರಿಂದ, ಅದರ ಕೆಲಸವನ್ನು 'ಲ' ಕಾರವೇ ನಿರ್ವಹಿಸುತ್ತದೆ.

ಉದಾ :– ಮಗು ಅಲ್‌ತೆತೆ ಅವಲು ಕರ್‌ಕೋನಕ ಏಲಪ

೭. ಅನ್ನರಿಗೆ :– ಬರಹದ ಕನ್ನಡದಲ್ಲಿ 'ಅಣ್ಣಂದರಿಗೆ' ಎಂಬ ಪದಕ್ಕೆ ಉರ್ದುಭಾಷಿಕರಲ್ಲಿ 'ಅನ್ನರಿಗೆ' ಎಂದು ಉಚ್ಚಾರಣೆಗೊಳ್ಳುತ್ತಿದೆ. ತೆಲುಗು ಭಾಷಾ ಪರಿಸರದಂತೆ, 'ಣ್' ಕಾರ 'ನ್' ಕಾರವಾಗಿ 'ದ್' ಕಾರ ಲೋಪವಾಗಿ 'ಅನ್ನರಿಗೆ' ಎಂಬ ಪದ ಪ್ರಯೋಗ ಚಾಲ್ತಿಗೆ ಬಂದಿದೆ ಆದರೆ ತೆಲುಗು ಭಾಷಿಕರಲ್ಲಿ ಪದಮಧ್ಯ ಪರಿಸರದಲ್ಲಿ 'ಓ' ಕಾರ ಸೇರಿಕೊಂಡು 'ಅನ್ನೋರಿಗೆ' ಎಂದು ಉಚ್ಚಾರಣೆಗೊಳ್ಳುತ್ತಿದೆ.

ಉದಾ :– ನಿಮ್ ಅನ್ನರಿಗೆ ಕೆಲ್ಸ ಸಿಕ್‌ತಂತಲ ?

೮. ಅಂಬಾಡ್ :- ಬಳ್ಳಾರಿ ಪರಿಸರದಲ್ಲಿ 'ಪುಂಡಿಸೊಪ್ಪು' ಎಂಬ ಪದಕ್ಕೆ ಉರ್ದು ಭಾಷಿಕರಲ್ಲಿ ಉರ್ದು ಭಾಷೆಯ ಪ್ರಭಾವದಿಂದ 'ಅಂಬಾಡ್' ಎಂಬ ಪದ ಉಚ್ಚಾರಣೆಯಲ್ಲಿದೆ. ಆದರೆ ಕೆಲವೊಮ್ಮೆ 'ಪುಂಡೀಕಾ' ಎಂದು ಉಚ್ಚಾರಣೆಯಲ್ಲಿದ್ದರೆ. ತೆಲುಗು ಭಾಷಿಕರಲ್ಲಿ 'ಪುಂಡ್ಯಕ' ಎಂದು ಬಳಕೆಯಲ್ಲಿದೆ.

ಉದಾ :- ವಚ್ಚಕ್ಕೆ ಒಂದ್ ಸಲ ಅಂಬಾಡ್ ಪಲ್ಯ ಉನ್‌ಬೇಕು

೯. ಅಂಜುರ್ :- ಬರಹದ ಕನ್ನಡದಲ್ಲಿ 'ಅಂಜೂರ್' ಗೆ ಉರ್ದು ಭಾಷಿಕರು 'ಅಂಜುರ್' ಎಂದು ಉಚ್ಚಾರಿಸುತ್ತಾರೆ. 'ಅಂಜೂರ್' ಎಂಬುದು ಹತ್ತಿಹಣ್ಣಿನ ಜಾತಿಯ ಇನ್ನೊಂದು ತರದ ಹಣ್ಣು, 'ಊ' ಕಾರ 'ಉ' ಕಾರವಾಗಿ ಉಚ್ಚಾರಣೆಯಲ್ಲಿದೆ. ತೆಲುಗು ಭಾಷಿಕರು 'ಹತ್ತಿಹಣ್ಣು' ಎಂಬ ಅರ್ಥದಲ್ಲಿಯೇ ಅವರು ಬರಹದ ತೆಲುಗು ಭಾಷೆಯ 'ಪತ್ತಿಪಂಡು' ಎಂಬ ಪದವನ್ನೇ ಉಚ್ಚಾರಿಸುತ್ತಾರೆ. ಪತ್ತಿ ಎಂದರೆ ಹತ್ತಿ, ಹಾಗೂ ಪಂಡು ಎಂದರೆ ಹಣ್ಣು ಆಗಿ, ಹತ್ತಿಹಣ್ಣು>ಪತ್ತಿಪಂಡುವಾಗಿ ಉಚ್ಚಾರಣೆಗೊಳ್ಳುತ್ತಿದೆ.

ಉದಾ :- ರಕ್ತೆ ರುದ್ಧಿ ಆಗಕಂದ್ರ ಅಂಜುರ್ ಅನ್ನು ತಿಂಬೇಕಂತೆ

೧೦. ಆನೆಕೊಲ್ಲು :- ಬರಹದ ಕನ್ನಡದಲ್ಲಿ 'ಆಣೆಕಲ್ಲು' ಎಂಬ ಪದಕ್ಕೆ 'ಅನೆಕೊಲ್ಲು' ಎಂದು ಉರ್ದುಭಾಷಿಕರಲ್ಲಿ ಉಚ್ಚಾರಣೆಗೊಳ್ಳುತ್ತಿದೆ. 'ಅನೆಕೊಲ್ಲು' ಎಂದರೆ ಮಳೆಬರುವಾಗ ಮಳೆ ಹನಿ ಜೊತೆ ಬೀಳುವ ಮಂಜುಗಡ್ಡೆಯ ಹರಳುಗಳು ಉರ್ದು ಭಾಷಿಕರಲ್ಲಿ 'ಅ' ಹ್ರಸ್ವಸ್ವರ ದೀರ್ಘಸ್ವರ 'ಆ' ದ ಬದಲಿಗೆ ಬಳಕಿಗೆ ಬಂದುದುಲ್ಲದೆ. 'ಕ್' ಕಾರಕ್ಕೆ 'ಒ' ಕಾರ ಸೇರಿ ಸೇರಿಕೊಂಡು ಕಲ್ಲು>ಕೊಲ್ಲು ಎಂದು ಉಚ್ಚಾರಣೆಗೊಳ್ಳುತ್ತಿದೆ. ಇದು ತೆಲುಗು ಭಾಷಿಕರ ತೆಲುಗು ಪರಿಸರದ ಪ್ರಭಾವದಿಂದ ಈ ರೀತಿ ಪದಗಳು ಉಚ್ಚಾರಣೆಯಲ್ಲಿವೆ. ಇದೇ ರೀತಿ ಕಲ್ಲು> ಕೊಲ್ಲು, ಕಣ್ಣು>ಕೊಣ್ಣು, ಕಬ್ಬಿಣ>ಕೊಬ್ಬಿಣ, ಬಣ್ಣ>ಬೊಣ್ಣ ಇತ್ಯಾದಿ.

ಉದಾ :- ಮಲಿ ಬಂದಾಗ ಆನೆಕೊಲ್ಲು ಬಿತ್ತಲ್ಲ ಅದ್‌ಕೆ ಮಾನಕಾಯಿ ಕೆಟೇತಿ.

೧೧. ಅಲಚಿನಿ :- ಬರಹದ ಕನ್ನಡದ 'ಆಲೋಚನೆ' ಎಂಬ ಪದಕ್ಕೆ ಬಳ್ಳಾರಿ ನಗರ ಉರ್ದು ಭಾಷಿಕರು 'ಅಲಚಿನಿ' ಎಂದು ಉಚ್ಚಾರಿಸುತ್ತಾರೆ. ತೆಲುಗು ಭಾಷಿಕರಲ್ಲಿ 'ಆಲೋಸಿನಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಬರಹದ ಕನ್ನಡದಲ್ಲಿ ಚ್-ಕಾರದ ಬದಲು 'ಸ್' ಕಾರವಾಗಿ ಉಚ್ಚಾರಣೆಯಲ್ಲಿದೆ.

ಉದಾ :- ಇವಗ ಕುಡ್ಯಾಕ ನೀರಿಲ್ಲ ಮುಂದೆಂಗಂತ ಅಲಚಿನಿ ಮಾಡಿ, ಈ ದೇಸ ಏನಕ್‌ತಂತ

೧೨. ಆಗ್‌ತೈತಿ :- 'ಆಗುತ್ತದೆ' ಎಂಬ ಬರಹದ ಕನ್ನಡದ ಪದಕ್ಕೆ ಬಳ್ಳಾರಿ ನಗರ ಉರ್ದುಭಾಷಿಕರಲ್ಲಿ 'ಆಗ್‌ತೈತಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇಲ್ಲಿ 'ತ್' ಕಾರದ ಹಿಂದೆ 'ಉ' ಹೃಸ್ವಸ್ವರ ಬಂದಾಗ, 'ತ್' ದನಂತರ 'ಎ' ಮತ್ತು 'ಐ' ಕರಗಳು ಆದೇಶವಾಗಿ ಬರುತ್ತವೆ. ಹಾಗೆಯೇ ಈ 'ತ್' ಕಾರಕ್ಕೆ 'ಇ' ಕಾರ ಆದೇಶವಾಗಿ ಬರುವುದು ಬಳ್ಳಾರಿ ನಗರದ ಒಂದು ವೈಶಿಷ್ಟವೇ ಸರಿ.

ಉದಾ :- ಆಗುತ್ತದೆ>ಆಗ್‌ತೈತಿ, ಮಾಡುತ್ತದೆ>ಮಾಡ್‌ತೈತಿ, ನುಡಿಯುತ್ತದೆ>ನುಡಿತೈತಿ, ಹೋಗುತ್ತದೆ>ಹೋಗ್‌ತೈತಿ,
ಬರುತ್ತದೆ >ಬರ್‌ತೈತಿ, ಎಂಬ ಹಲವು ಪ್ರಯೋಗಗಳನ್ನು ಕಾಣಬಹುದು, ತೆಲುಗು ಭಾಷಿಕರಲ್ಲಿ 'ಆಗ್‌ತೈತಿ' ಎಂದು ಉಚ್ಚಾರಣೆಗೊಳ್ಳುವುದನ್ನು ನೋಡಬಹುದು.

ಉದಾ :- ಆ ಊರಗೆ ದೊಡ್‌ದು ಅಬ್ಬ ಆಗ್‌ತೈತಿ, ದೇವಿದು, ಬೇಸ್ ಇರ್‌ತೈತಿ.

೧೩. ಇಂದಿಶ್‌ನ್ :- ಇಂಗ್ಲೀಶ್‌ನ ಎರವಲು ಪದವಾದ 'ಇಂಜಕ್ಷನ್' ಪದಕ್ಕೆ ಬಳ್ಳಾರಿ ನಗರದ ಉರ್ದು ಭಾಷಿಕರಲ್ಲಿ 'ಇಂದಿಶ್‌ನ್' ಎಂದು ಉಚ್ಚಾರಣೆಯಲ್ಲಿದೆ. 'ಜ' ಮತ್ತು 'ಕ್ಷ' ಗಳ ಬದಲಿಗೆ ಉರ್ದು ಭಾಷಿಕರಲ್ಲಿ ಕ್ರಮವಾಗಿ 'ದಿ' ಮತ್ತು 'ಶ್' ಗಳಾಗಿ ಉಚ್ಚಾರಣೆಯಲ್ಲಿವೆ. ಇದೇ ರೀತಿ ತೆಲುಗು ಭಾಷಿಕರಲ್ಲಿ 'ಶ್' ಕ್ಕೆ ಬದಲಾಗಿ 'ಸ' ಕಾರವಾಗಿ 'ಇಂದಿಸನ್' ಎಂಬ ಪದ ಉಚ್ಚಾರಣೆಯಲ್ಲಿದೆ.

ಉದಾ :- ಎರ್ರಿಗೂ ಒಂದ ಇಂದಶನ (ಔಸಿದಿ) ಒಪಿಡಿಗೆ ಮಾಡದು, ಬಿಲಿ ಬನ್ನದ್ದು

೧೪. ಉಡುಗರು :-

ಬರಹದ ಕನ್ನಡದಲ್ಲಿ 'ಹುಡುಗರು' ಎಂಬ ಪದಕ್ಕೆ ಬಳ್ಳಾರಿ ನಗರ ಭಾಷಿಕರಲ್ಲಿ 'ಉಡುಗರು' ಎಂಬ ಪದ ಉಚ್ಚಾರಣೆಯಲ್ಲಿದೆ. ಅವರ್ಗೀಯ ವ್ಯಂಜನ 'ಹ್' ಕಾರ ಇಲ್ಲಿ ಲೋಪವಾಗಿ ಹ್ರಸ್ವಸ್ವರ 'ಉ' ಕಾರವಾಗಿ ಉಚ್ಚಾರಣೆಯಲ್ಲಿದೆ. ತೆಲುಗು ಭಾಷಿಕರಲ್ಲೂ ಈ ನಿಯಮ ಹೊರತಾಗಿಲ್ಲ ಪದಾದಿ ಪರಿಸರದಲ್ಲಿ 'ಹ್' ಕಾರ ತೆಲುಗು ಮತ್ತು ಉರ್ದು ಭಾಷಿಕರಿಬ್ಬರಲ್ಲೂ ಲೋಪವಾಗಿದೆ.

ಉದಾ :- ಹುಡುಗರು>ಉಡುಗರು, ಹುಡುಗಿ>ಉಡಿಗಿ, ಹುಂಡಿ>ಉಂಡಿ, ಹುಲ್ಲು>ಉಲ್ಲು, ಹುಚ್ಚ>ಉಚ್ಚ... ಇತ್ಯಾದಿಯಾಗಿ ಮನಗಾಣಬಹುದು.

ಉದಾ :- ಈಗಿನ ಕಾಲದ ಎಲ್ಲ ಉಡುಗರು ಇಂಗೆ, ಯಾರ್ ಮಾತು ಕೇಲಲ್ಲ.

೧೫. ಉಣಸೋದು :-

ಬರಹದ ಕನ್ನಡದಲ್ಲಿ 'ಊಣಿಸುವುದು' ಅಥವಾ 'ಊಳುವುದು' ಎಂಬ ಪದಕ್ಕೆ ಉರ್ದುಭಾಷಿಕರಲ್ಲಿ 'ಉಣಸೋದು' ಎಂದು ಉಚ್ಚಾರಣೆಗೊಳ್ಳುತ್ತದೆ. "ಉಣಸೋದು" ಎಂದರೆ ಇನ್ನೊಂದು ಅರ್ಥ "ಊಟಮಾಡಿಸು" ಎಂದಿದೆ.ಆದರೆ ಉರ್ದುಭಾಷಿಕರಲ್ಲಿ ಸತ್ತವ್ಯಕ್ತಿಯನ್ನು ಸಮಾಧಿಮಾಡುವುದು ಎಂಬರ್ಥದಲ್ಲಿ ಬಳಕೆಯಲ್ಲಿದೆ. ಪದಾದಿ 'ಉ' ಹ್ರಸ್ವಸ್ವರ 'ಊ' ದ ಪ್ರತಿನಿಧಿಯಾಗಿ ಬಂದಿದೆ. ತೆಲುಗು ಭಾಷಿಕರಲ್ಲಿ 'ಗುಂತಾ' ,'ಸಮಾಧಿ' ಎಂಬ ಪದಗಳೇ ಉಚ್ಚಾರಣೆಗೊಳ್ಳುತ್ತವೆ.

ಉದಾ :- ಸತ್ತಾಗ ಎಲ್ಲರನು ಅದೇ ಮನ್ನಗಲ್ಲೆನು ಉಣಸೋದು

೧೬. ಉರ್ಲುಗಡ್ಡೆ :-

ಬರಹದ ಕನ್ನಡದಲ್ಲಿ 'ಆಲೂಗಡ್ಡೆ' ಎಂಬ ಪದಕ್ಕೆ ಉರ್ದು ಭಾಷಿಕರಲ್ಲಿ 'ಉರ್ಲುಗಡ್ಡೆ' ಎಂದು ಉಚ್ಚಾರಣೆಗೊಳ್ಳುತ್ತದೆ. ಬಳ್ಳಾರಿ ನಗರದಲ್ಲಿ ತೆಲುಗು ಭಾಷಾ ಪರಿಸರದಿಂದ 'ಆಲೂ' ಗೆ ಬದಲಿ 'ಉರ್ಲು' ಎಂಬ ತೆಲುಗು ಶಬ್ದಕ್ಕೆ ಕನ್ನಡದ 'ಗಡ್ಡೆ' ಸೇರಿಕೊಂಡು ಉರ್ಲುಗಡ್ಡೆ ಎಂದಾಗಿದೆ. ಇದು ತೆಲುಗು ಭಾಷಿಕರಲ್ಲೂ ಉರ್ಲುಗಡ್ಡೆ ಎಂದೇ ಉಚ್ಚಾರಣೆಯಲ್ಲದೆ.

ಉದಾ :- ಭೈಯಾ ಬರ್‌ಬೇಕರ ಅಂಗ ಉರ್ಲುಗಡ್ಡೆ ತಗಂಡ್ ಬರಕಂತೆ ನೋಡು !

೧೭. ಒಲಗೆ :- ಬರಹದ ಕನ್ನಡದ "ಒಳಗೆ" ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಒಲಗೆ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಪದ ಮಧ್ಯದ ಅಕ್ಷರ 'ಳ್' ಕಾರದ ಬದಲಾಗಿ 'ಲ' ಕಾರ ಬಂದು 'ಒಲಗೆ' ಎಂದು ಬಳಕೆಗೊಳ್ಳುತ್ತದೆ. ತೆಲುಗು ಭಾಷಿಕರಲ್ಲೂ ಇದೇ ಮಾದರಿಯ 'ಒಲಗೆ' ಎಂಬ ಪದ ಉಚ್ಚಾರಣೆಯಲ್ಲಿರುವುದು ವಿಶೇಷ.

ಉದಾ :- ಒಲಗೆ ಮಂತಿನ್ಯಾಗ ಇರದ ಒಂದು, ವರಗಡ ಬನ್ನ ಬೇರೆ.

೧೮. ಒಳ್ಳೆಕೆ :- ಬರಹದ ಕನ್ನಡದ 'ಒಳ್ಳೆಯದಕ್ಕೆ' ಎಂಬ ಪದಕ್ಕೆ ಬಳ್ಳಾರಿ ನಗರದ ಉರ್ದುಭಾಷಿಕರಲ್ಲಿ 'ಒಳ್ಳೆಕೆ' ಎಂದು ಉಚ್ಚಾರಣೆಗೊಳ್ಳುತ್ತದೆ. ಪದಮಧ್ಯದ ಯ್,ದ್ ಹಾಗೂ ಪದದ ಅತ್ಯಕ್ಷರದ ಒತ್ತಕ್ಷರ 'ಕ' ಲೋಪಹೊಂದಿ 'ಒಳ್ಳೆಕ್ಕೆ' ಎಂದು ಬಳಕೆಗೊಳ್ಳುತ್ತದೆ. ತೆಲುಗು ಭಾಷಿಕರಲ್ಲಿಯೂ ಸಹ 'ಒಳ್ಳೆದುಕ' ಎಂಬ ಪದ ಉಚ್ಚಾರಣೆಯಾಗುತ್ತಿದ್ದು, 'ಯ್' ಕಾರ ಲೋಪವಾಗಿ 'ದ' ಕಾರ ಇಲ್ಲಿ ಲೋಪವಾಗದೆ 'ಉ' ಕಾರ 'ದ' ಕಾರಕ್ಕೆ ಹತ್ತಿ 'ದು' ಕಾರವಾಗಿ, 'ಕ್ಕೆ' ಕಾರಕ್ಕೆ ಬದಲು 'ಕ್' ಅಷ್ಟೆ ಪ್ರಯೋಗವಾಗಿ 'ಒಳ್ಳೆದುಕ' ಎಂಬ ಪದ ಉಚ್ಚಾರಣೆಗೊಳ್ಳುತ್ತದೆ

ಉದಾ :- ನಾವ್ ದುಡೇದ್ ಮಕ್ಲು ಒಳ್ಳೆಕೆ ಅಲ್ಲೇನು !

೧೯. ಔಸಿದಿ :- ಬರಹದ ಕನ್ನಡ 'ಔಷಧ' ಎಂಬ ಪದಕ್ಕೆ ಬಳ್ಳಾರಿ ನಗರದ ಉರ್ದುಭಾಷಿಕರಲ್ಲಿ 'ಔಸಿದಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. 'ಷ' ಕಾರಕ್ಕೆ ಬದಲಿಗೆ 'ಸ' ಕಾರವು ಮಹಾಪ್ರಾಣ 'ಧ' ಕಾರಕ್ಕೆ ಬದಲಾಗಿ ಅಲ್ಪಪ್ರಾಣ 'ದ' ಕಾರವು ಬಳಕೆಯಲ್ಲಿದೆ. ಈ ಎರಡು ಪದಗಳಿಗೆ 'ಇ' ಕಾರ ವಿಶೇಷವಾಗಿ ಆಗಮನ ಗೊಂಡಿದೆ. 'ಔಸಿದಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. ತೆಲುಗು ಭಾಷಿಕರಲ್ಲಿ 'ಔ' ಕಾರದ ಬದಲು 'ಓ' ಕಾರ ಹಾಗೂ 'ಧಿ' ಕಾರದ ಬದಲು 'ದ್' ಅಲ್ಪಪ್ರಾಣಾಕ್ಷರ ಉಚ್ಚಾರಣೆಗೊಳ್ಳುತ್ತಿದೆ. ಅಂದರೆ 'ಓಸಿದಿ' ಎಂದು ಬಳಕೆಗೊಳ್ಳುತ್ತಿದೆ.

ಉದಾ :- ಒ.ಪಿ.ಡಿ. ಲ್ಲಿ ಡಾಕ್‌ರು ಓಸಿದಿಯಲ್ಲ ಮಾರ್‍ತಾರೆ, ಮಂದಿಗೆ ಇಲ್ಲ.

೨೦. ಕಾಲ್‌ಮರಿ :- ಬಳ್ಳಾರಿ ನಗರದ ಉರ್ದು ಭಾಷಿಕರಲ್ಲಿ 'ಕಾಲ್‌ಮರಿ' ಎಂದರೆ ಬರಹ ಕನ್ನಡದಲ್ಲಿ 'ಚಪ್ಪಲಿ' ಎಂದರ್ಥ. ಈ 'ಕಾಲ್‌ಮರಿ' ಒಂದು ವಿಶಿಷ್ಠ ಪದ ಬಳಕೆ ಎಂದೇ ಹೇಳಬೇಕು, ಏಕೆಂದರೆ ಹಿಂದಿನ ಸಮಾಜದಲ್ಲಿ ಪ್ರಾಣಿಗಳು ತಮ್ಮ ಪ್ರತಿರೂಪದ ಮರಿಗಳನ್ನು ಕಾಲಲ್ಲಿ ಈಯುವುದಕ್ಕೆ ಹಾಗೂ ಹಾಲುಣಿಸುವ ಪ್ರಾಣಿ ಏಳಿಗೆ ಆಗದಿದ್ದಾಗ ಅದರ ಕಾಲಲ್ಲಿ ಮರಿ ಇರುವುದರಿಂದ ಏಳಿಗೆ ಆಗಿಲ್ಲ ಎನ್ನುವ ಪರಿಪಾಠವಿತ್ತು. ಅದೇ ರೀತಿ ಕಾಲಿನಂತದ್ದೇ ಪ್ರತಿ ರೂಪದ ಪಾದರಕ್ಷೆಗಳನ್ನು ಕಾಲಿಗೆ ಹಾಕಿಕೊಳ್ಳುವುದರಿಂದ ಕಾಲಿನಮರಿ ಎಂಬ ಅರ್ಥದಲ್ಲಿ 'ಕಾಲ್‌ಮರಿ' ಎಂದು ಪ್ರಯೋಗಕ್ಕೆ ಬಂದಿರಬೇಕು. ಈ ಪದ ಕನ್ನಡ ಬರಹ ಭಾಷೆಯಲ್ಲಿ ಉಂಟು, ಈ ಚಪ್ಪಲಿ ಎಂಬ ಪದಕ್ಕೆ ತೆಲುಗು ಭಾಷಿಕರು 'ಚೊಪ್ಪಲು' ಎಂದು ಉಚ್ಚಾರಿಸುತ್ತಾರೆ. 'ಚ್' ಕಾರಕ್ಕೆ 'ಒ' ಕಾರನ್ನು ಹಾಗೂ 'ಲ್' ಕಾರಕ್ಕೆ 'ಉ' ಕಾರವನ್ನು ಹಚ್ಚಿ 'ಚೊಪ್ಪಲು' ಎಂದು ತೆಲುಗು ಭಾಷಿಕರಲ್ಲಿ ಉಚ್ಚಾರಣೆಗೊಳ್ಳುತ್ತಿದೆ.

ಉದಾ :- ಅವಾಗ ನಾವು ಕಾಲ್‌ಮರಿ ಇದ್ದಿಲ್ಲ ಸಾಲಿ ಓದಕೆ, ಇಗ ನೋಡು ಅಂಗ ವಕ್ಕರಾ ?

೨೧. ಕೊಲ್ಲು :- 'ಕೊಲ್ಲು' ಎಂದರೆ ಬರಹದ ಕನ್ನಡದಲ್ಲಿ 'ಕಲ್ಲು' ಎಂದರ್ಥ. ಆದರೆ ಬಳ್ಳಾರಿ ನಗರದ ಉರ್ದುಭಾಷಿಕರಲ್ಲಿ 'ಕೊಲ್ಲು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಪ್ರಾರಂಭದ ಅಕ್ಷರ 'ಕ್' ಕಾರಕ್ಕೆ 'ಒ' ಕಾರ ಹಚ್ಚುವುದು ಬಳ್ಳಾರಿ ನಗರದ ತೆಲುಗು ಪರಿಸರದ ಒಂದು ವೈಶಿಷ್ಟ್ಯವೇ ಸರಿ. ಇದೇ ವೈಶಿಷ್ಟ್ಯೆಯನ್ನು ನಗರದಲ್ಲಿ ಉರ್ದುಭಾಷಿಕರು ಅನುಸರಿಸುತ್ತಾರೆ.

ಉದಾ :- ಕಲ್ಲು>ಕೊಲ್ಲು, ಕಬ್ಬಿಣ>ಕೊಬ್ಬಿಣ, ಮಂಚ>ಮೊಂಚ, ಕಂಬ>ಕೊಂಬ ಇತ್ಯಾದಿ. ಇದೇ ನಿಯಮದಡಿ ನಗರದ ತೆಲುಗು ಭಾಷಿಕರು 'ಕಲ್ಲು' ಎಂಬ ಪದವನ್ನು 'ಕೊಲ್ಲು' ಎಂದೇ ಉಚ್ಚಾರಿಸುತ್ತಾರೆ.

ಉದಾ :- ಅವರ ಮನಿ ಕಟ್ಟಕೆ ನಾವೆ ಕೊಲ್ಲು ವಡ್ದಿವಿ ಅಡವಿಲಿಂದ.

೨೨. ಕೋಸ್‌ಬಿಲ್ಲಿ/ಪಿಲ್ಲಿ :- 'ಬೆಕ್ಕು' ಎಂಬುದು ಕನ್ನಡದ ಬರಹದ ರೂಪವಾದರೆ, ಬಳ್ಳಾರಿ ನಗರದ ಉರ್ದುಭಾಷಿಕರು, "ಕೋಸ್‌ಬಿಲ್ಲಿ" ಎಂದು ಉಚ್ಚಾರಿಸುತ್ತಾರೆ. ಕೂಡ್ಲಿಗಿ ತಾಲೂಕಿನ ಸುತ್ತಮುತ್ತ ಗಾಮಗಳಲ್ಲಿ ಬೆಕ್ಕಿಗೆ 'ಕೋಸಿ' ಎಂತಲೂ ಕರೆಯಲಾಗುತ್ತದೆ. ತೆಲುಗು ಭಾಷಿಕರು ಕಾಸಿ, ಬಿಲ್ಲಿ, ಕ್ವಾಸ್‌ಬಿಲ್ಲಿ, ಕ್ವಾಸಿ, ಎಂತಲು ಉಚ್ಚಾರಿಸುತ್ತಾರೆ. ಇದರ ಪ್ರಭಾವದಿಂದಾಗಿಯೇ ಉರ್ದುಭಾಷಿಕರು 'ಕೋಸ್‌ಬಿಲ್ಲಿ' ಎಂದು ಬಳಸುತ್ತಿರಬೇಕು ತೆಲುಗಿನ 'ಕಾಸ್‌ಬಿಲ್ಲಿ' ಉರ್ದುವಿನಲ್ಲಿ 'ಓ' ಕಾರ ಸೇರಿ 'ಕೋಸ್‌ಬಿಲ್ಲಿ' ಎಂದು ಉಚ್ಚಾರಣೆಗೊಳ್ಳುತ್ತಿರಬಹುದು.

ಉದಾ :- ಅಮ್ಮ ಕೋಸ್‌ಬಿಲ್ಲಿ ದೂದ್ ಉಲ್‌ಡಿಸಿ ವೋತು ನೋಡು.

೨೩. ಕೊಲ್ಮಿ :- ಬರಹದ ಕನ್ನಡದ 'ಕೊಲುಮೆ' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರು 'ಕೊಲ್ಮಿ' ಎಂದು ಉಚ್ಚಾರಿಸುತ್ತಾರೆ. ಇಲ್ಲಿ 'ಮ' ಕಾರ 'ಲ್' ಕಾರದಲ್ಲಿ ಲೀನವಾಗುವುದರ ಜೊತೆಗೆ 'ಲ್' ಕಾರಕ್ಕೆ 'ಇ' ಕಾರ ಪ್ರವೇಶಿಸಿ "ಕೊಲ್ಮಿ" ಎಂದು ಬಳಕೆಗೊಳ್ಳುತ್ತಿದೆ. ತೆಲುಗು ಭಾಷಿಕರು ಈ 'ಕೊಲ್ಮಿ' ಎಂಬ ಪದವನ್ನೇ ಉಚ್ಚಾರಿಸುತ್ತಾರೆ.

ಉದಾ :- ಅವಾಗ ನಾನು ಕೊಲ್ಮಿ ಕೆಲ್ಸ ಮಾಡ್ತಿದ್ದೆ ಇಗ ಇದನ್ನ ಮಾಡ್ತಿನಿ.

೨೪. ಗನ್ ಮಕ್ಳು :- ಬರಹದ ಕನ್ನಡದ 'ಗಂಡುಮಕ್ಕಳು' ಎಂಬ ಪದಕ್ಕೆ ಬಳ್ಳಾರಿ ನಗರದ ಉರ್ದುಭಾಷಿಕರು ಗನ್‌ಮಕ್ಳು/ಗನ್‌ಮಕ್ಲು ಎಂದು ಉಚ್ಚಾರಿಸುತ್ತಾರೆ. ಕನ್ನಡದ ಮೂರ್ಧನ್ಯ ಅಕ್ಷರಗಳಾದ 'ಡ್' ಮತ್ತು 'ಳ್' ಕಾರಗಳು ಲೋಪವಾಗಿ ಪದಾಂತ್ಯದಲ್ಲಿ 'ಲ್' ಕಾರ ಆದೇಶವಾಗಿ ಬಂದು ವಿಶಿಷ್ಠ ಪರಿಸರದಲ್ಲಿ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ ಇದೆ, ತೆಲುಗು ಭಾಷಿಕರಲ್ಲಿ 'ಳ್' ಕಾರಕ್ಕೆ ಬದಲು 'ಲ್' ಕಾರವನ್ನು ಹೆಚ್ಚು ಉಪಯೋಗಿಸುವುದನ್ನು ಕಾಣಬಹುದು ಕನ್ನಡದ ಗಂಡುಮಕ್ಕಳು, ತೆಲುಗು ಭಾಷಿಕರಲ್ಲಿ ಗನ್‌ಮಕ್ಲು ಆಗಿ ಉಚ್ಚಾರಣೆಗೊಳ್ಳುತ್ತದೆ.

ಉದಾ :- ನಾವು ಗಟ್ಟಿಗಿದಂಗ ದುಡಿಬೇಕು ಯಾ ಗನ್‌ಮಕ್ಲು ಕೂಳ್ ಹಾಕಲ್ಲ ಇವಾಗ

೨೫. ಗರ್ಬೋವತಿ :- "ಗರ್ಭಿಣಿ" ಎಂಬುದು ಕನ್ನಡ ಬರಹದ ರೂಪವಾದರೆ, ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಗರ್ಬೋವತಿ' ಎಂದು ಉಚ್ಚಾರಣೆಯಲ್ಲಿದೆ. 'ಭ' ಕಾರಕ್ಕೆ 'ಓ' ಕಾರ ಸೇರಿಕೊಂಡು ಹಾಗೂ ಮೂರ್ಧನ್ಯ ತಾಲವ್ಯ ಅಕ್ಷರ 'ಣ್' ದ ಬದಲಿಗೆ 'ವ್' ಮತ್ತು 'ತ್' ಅಕ್ಷರಗಳು ಆದೇಶವಾಗಿ ಬಂದು 'ಗರ್ಬೋವತಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. ತೆಲುಗು ಭಾಷಿಕರಲ್ಲಿ 'ಗರ್ಭವತಿ' ಎಂದು ಬಳಕೆಯಾಗುತ್ತದೆ. ಇಲ್ಲಿ 'ಭ' ಕಾರದಲ್ಲಿಯ 'ಇ' ಕಾರ ಹಾಗೂ 'ಣ್' ಕಾರ ಲೋಪವಾಗಿ 'ವ' ಮತ್ತು 'ತಿ' ಕಾರಗಳು ಆದೇಶವಾಗಿ "ಗರ್ಭವತಿ" ಎಂದು ಬಳಕೆಯಾಗುತ್ತದೆ.

ಉದಾ :- ಮನೇಗ ಜೋರಿ ಗರ್ಬೋವತಿ ಅಯ್ತೆ, ಅದಕೆ ಅನ್ನು ಎಲ್ಲ ವಯ್ತಿನಿ.

೨೬. ಗಾದಿ :- ಬರಹದ ಕನ್ನಡದಲ್ಲಿ "ಗಾದೆ" ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಗಾದಿ' ಎಂದು ಉಚ್ಚಾರಣೆಗೊಳ್ಳುತ್ತದೆ. 'ಗಾದಿ' ಎಂಬುದಕ್ಕೆ ಕನ್ನಡದಲ್ಲಿ ಬೇರೆಬೇರೆ ಅರ್ಥಗಳುಂಟು ಇಲ್ಲಿ ಗಾದಿ ಎಂದರೆ ಜಾನಪದ ಸಾಹಿತ್ಯದ ಒಂದು ಸದ್ಯ ಪ್ರಕಾರ, ಆದರೆ ಉರ್ದುಭಾಷಿಕರಲ್ಲಿ 'ಗಾದಿ' ಎಂದರೆ ಗಾದೆ, ಎಂಬ ಅರ್ಥದಲ್ಲಿ ಪ್ರಯೋಗವಾಗುತ್ತದೆ. ತೆಲುಗು ಭಾಷಿಕರು 'ಗಾದಾ' ಎಂದು ಉಚ್ಚಾರಿಸುತ್ತಾರೆ. ಕನ್ನಡದ 'ದ್' ಕಾರದಲ್ಲಿನ 'ಎ' ಕಾರದ ಬದಲು ತೆಲುಗರು 'ಆ' ಕಾರಾಂತವಾಗಿ 'ಗಾದಾ' ಎಂದು ಬಳಸುತ್ತಾರೆ.

ಉದಾ :- ಇಲ್ರಿ ಸಾರು ನನಿಗೆ ಏನು ಗಾದಿ ಮಾತು ಬರಲ್ಲ.

೨೭. ಗುದಾಟ :- ಬರಹದ ಕನ್ನಡದ 'ಜಗಳ' ಎಂಬ ಪದಕ್ಕೆ ಬದಲಾಗಿ ಬಳ್ಳಾರಿ ನಗರದ ಉರ್ದುಭಾಷಿಕರು 'ಗುದಾಟ' ಎಂದು ಉಚ್ಚಾರಿಸುತ್ತಾರೆ. 'ಗುದಾಟ' ಎಂಬುದು ಸನ್ನಿವೇಶ ಸೂಚಕಪದ, ಅಂದರೆ ಜಗಳ ಆಡುವಾಗ ಒಬ್ಬರು ಮತ್ತೊಬ್ಬರನ್ನು ಹಿಡಿದು ಗುದ್ದುವುದು ಗುದಾಟ ದ ಸನ್ನಿವೇಸ. ತೆಲುಗರಲ್ಲಿ 'ಜಗಳ' ಪದಕ್ಕೆ ಹೊಂದಿಕೊಂಡಂತೆ 'ಜಗಡ' ಎಂಬ ಪದ ಬಳಕೆಯಲ್ಲಿದೆ. ಅವರ್ಗೀಯ ತಾಲವ್ಯ 'ಳ್' ಕಾರದ ಬದಲು ವರ್ಗೀಯ ತಾಲವ್ಯ 'ಡ್' ಕಾರ ಬಂದಿರುವುದು ಒಂದು ವಿಶೇಷವಾಗಿದೆ.

ಉದಾ :- ನೀರ ಸಿಗಂಗಿಲ್ಲ ಗುದಾಟ ಮಾಡಿ ಒನ್ ಅರವಿ ನೀರ್ ತಂದಿನಿ.

೨೮. ಬಿರನು/ಜಲ್ದಿ :- "ಬೇಗ", "ತ್ವರಿತ" ಎಂಬ ಬರಹದ ಕನ್ನಡ ಪದಕ್ಕೆ, ಬಳ್ಳಾರಿ ನಗರದ ಉರ್ದುಭಾಷಿಕರು ಉಚ್ಚಾರಿಸುವ ಪದ ಬಿರನು/ಜಲ್ದಿ. 'ಜ್ಯೋರ್' ಎಂಬ ಪದ ಆಡು ಕನ್ನಡದಲ್ಲಿ ಬಳಕೆಯಲ್ಲಿದೆ. 'ಜ್ಯೋರ್' ಎಂಬುದು ವೇಗದ ತೀವ್ರತೆಯನ್ನು ಅನುಕರಣೆ ಮಾಡುವುದಾಗಿದ್ದರಿಂದ ಬಹುಶಃ ಉರ್ದು ಭಾಷಿಕರು 'ಬಿರನು' ಎಂದು ಬಳಸಿಕೊಂಡಿರಬೇಕು. ತೆಲುಗು ಭಾಷಿಕರು 'ಬಿರಿ ಬಿರಿ' ಜಲ್ದಿ ಎಂಬ ಅದೇ ತರದ ಅನುಕರಣ ಪದ ಪ್ರಯೋಗ ಮಾಡುವುದನ್ನು ನೋಡಬಹುದು.

ಉದಾ :- ಭೇಟಾ ಬಿರ್‌ನು ಟೀ ಪುಡಿ ತಂಬಾ ದುಕಾನಿಯಿಂದ, ಬಾ ಜಲ್ದಿ.

೨೯. ತಗ್ದು :- ಬರಹದ ಕನ್ನಡದಲ್ಲಿ 'ತೆಗೆದು' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ತಗ್ದು' ಎಂಬ ಪದವನ್ನು ಉಚ್ಚಾರಿಸುತ್ತಾರೆ. ಬಳ್ಳಾರಿಯ ಕನ್ನಡದ ಆಡು ಭಾಷೆಯಲ್ಲಿ 'ತಗೂದು' ಎಂಬ ಪದವುಂಟು ಇದೇ ಪದ ಸ್ವರಲೋಪವಾಗಿ ತಗ್ದು ಆಗಿರಬೇಕು, ತೆಲುಗು ಭಾಷಿಕರು ತದು, ತೀಸೆ, ಎಂಬ ಪದಗಳನ್ನು ಇದೇ ಅರ್ಥದಲ್ಲಿ ಉಚ್ಚಾರಿಸುತ್ತಾರೆ.

ಉದಾ :- ರೊಡ್ ಬಗಲ ಮಾಡಿದ್ರಲ್ಲ ಅವಾಗ ನಮ್ಮನಿ ಅರ್‌ದ ತಗ್ದುಬಿಟ್ರು. ಸಾರ್.

೩೦. ತಟಕಲ್‌ಲಾರದ :- ಬರಹದ ಕನ್ನಡದ ತಡೆಯಲಾರದೆ 'ತಡೆದುಕೊಳ್ಳಲಾರದೆ' ಎಂಬಂತಹ ಪದಗಳಿಗೆ ಬಳ್ಳಾರಿನಗರದ ಉರ್ದುಭಾಷಿಕರು 'ತಟಕಲ್‌ಲಾರದ' ಎಂಬ ಪದವನ್ನು ಉಚ್ಚಾರಿಸುತ್ತಾರೆ. ತೆಲುಗು ಭಾಷಿಕರಲ್ಲಿ 'ತಡಿಲಾರದೆ' ಎಂದು ಉಚ್ಚಾರಿಸುತ್ತಾರೆ. 'ತಡೆ' ಎನ್ನುವಲ್ಲಿ 'ಎ' ಕಾರ ತೆಲುಗು ಭಾಷಿಕರಲ್ಲಿ 'ಇ' ಕಾರವಾಗಿ ಉಚ್ಚಾರಗೊಳ್ಳುತ್ತದೆ.

ಉದಾ :- ಯಾರ್ನು ಮುಂದ ವೋಗಕ ಬಿಡಲ್ಲ, ಎಲ್ಲ ರಾಜಕೀಯ, ನನ್ ಅಮ್‌ದಾನಿ 'ತಟಕಲ್‌ಲಾರದ' ಇಂಗೆ ಮಾಡಿದ್ದು.

೩೧. ತಿಂಬೇಕು :- ಬರಹ ಕನ್ನಡದ 'ತಿನ್ನಬೇಕು' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ತಿಂಬೇಕು' ಎಂಬ ಪದ ಉಚ್ಚಾರಗೊಳ್ಳುತ್ತಿದೆ. ತೆಲುಗಿನಲ್ಲಿ 'ತಿನ್ನಾಕು' ಎಂದು ಉಚ್ಚಾರವಾಗುತ್ತದೆ.

ಉದಾ :- ಆಯಾ ಕಾಲ್ದಾಗ ಆಯಾ ಅನ್ನು ತಿಂಬೇಕು. ಅಂತನೆ ಇರೋದು.

೩೨. ತೀರೋದ್ರು :- ಬರಹದ ಕನ್ನಡದಲ್ಲಿ ಬಳಕೆಯಾಗುವ 'ಸತ್ತೋಗಿದ್ದಾರೆ' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ತೀರೋದ್ರು' ಎಂಬ ಪದ ಉಚ್ಚಾರಗೊಳ್ಳುತ್ತಿದೆ. ಕನ್ನಡದಲ್ಲಿ 'ತೀರು' ಎಂಬ ಪದವೂ ಉಂಟು 'ತೀರು' ಎಂದರೆ ಮುಗಿಯಿತು, ಮುಟ್ಟಿತು, ಎಂಬ ಅರ್ಥವನ್ನು ನೀಡುತ್ತವೆ. ಅದೇ ರೀತಿ ಉರ್ದುಭಾಷಿಕರಲ್ಲಿ 'ತೀರೋದ್ರು' ಎಂಬ ಪದ ಪ್ರಯೋಗ ಆತನ (ವ್ಯಕ್ತಿಯ) ಆಯುಷ್ಯ ತೀರಿತು ಎಂಬ ಅರ್ಥದಲ್ಲಿ ಬಳಕೆಗೆ ಬಂದಂತಿದೆ. ತೆಲುಗಿನಲ್ಲಿ ಸತ್ 'ಹೋಗ್ಯಾನ' ಸತ್ತಾನ. ಎಂಬ ಪದ ಬಳಕೆ ಇದೆ.

ಉದಾ :- ನನ್ ಯಜಮಾನ್ ತೀರೋದ್ರು, ಅದಕ ಗೊರ್‌ಮೆಂಟ್ನರು ರೊಕ್ಕ ಕೊಡ್‌ತಾರೆ.

೩೩. ದೀಸಾ :- ಬಳ್ಳಾರಿನಗರದ ಉರ್ದುಭಾಷಿಕರು 'ದೀಸಾ' ಎಂದು ಉಚ್ಚರಿಸುವ ಪದ ಬರಹದ ಕನ್ನಡದಲ್ಲಿ 'ದಿನಾಲೂ' 'ದಿನಾ' ಎಂಬ ರೂಪಗಳು ಬಳಕೆಯಲ್ಲಿವೆ. ತೆಲುಗು ಭಾಷಿಕರಲ್ಲಿ ದಿನಾಲು, ದಿಸಾಲು ಎಂಬ ಪದಗಳು ಉಚ್ಚಾರಣೆಯಲ್ಲಿವೆ.

ಉದಾ :- ದೀಸಾ ಸಾಯ್‌ರಿಗೆ ಅಳೋರ್‍ಯಾರು.

೩೪. ದುಬ್ಬಿ :- ಬರಹದ ಕನ್ನಡದಲ್ಲಿ 'ಗುಬ್ಬಿ' ಎಂಬುದೊಂದು ಚಿಕ್ಕ ಹಕ್ಕಿ ಆದರೆ ಇದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರು 'ದುಬ್ಬಿ' ಎಂದು ಉಚ್ಚಾರಿಸುತ್ತಾರೆ. ತೆಲುಗು ಭಾಷಿಕರಲ್ಲಿ 'ಗುಡ್ಲುಗೂಬಾ' ಎಂದು ಬಳಕೆಗೊಳ್ಳುತ್ತಿದೆ. ಗುಡ್ಲು/ಗುಡ್ಲು ಎಂದರೆ ಗುಡಿಸಲು 'ಗೂಬಾ' ಎಂದರೆ ಗುಬ್ಬಿ ಗುಡಿಸಲಿನ ಹುಲ್ಲು ಅಥವಾ ಸೌಧೆಗಳಲ್ಲಿ ಗೂಡನ್ನು ಕಟ್ಟಿಕೊಂಡು ವಾಸವಾಡುವ ಹಕ್ಕಿ 'ಗುಡ್ಲ ಗೂಬಾ' ಎಂಬರ್ಥದಲ್ಲಿ ಉಚ್ಚಾರಣೆಗೊಳ್ಳುತ್ತಿರಬೇಕು.

ಉದಾ :- ಮೊಬೈಲ್ ಬಂದ ಮೇಲೆ ನೋಡು ದುಬ್ಬಿ ಕಡಿಮೆ ಆಗ್ಯಾವ.

೩೫. ನಾಕು :- 'ನಾಲ್ಕು' ಎಂಬುದು ಬರಹ ಕನ್ನಡದ ಪದ, ಆದರೆ ಬಳ್ಳಾರಿ ಉರ್ದುಭಾಷಿಕರಲ್ಲಿ 'ನಾಲ್ಕು' ಎಂಬುದರ ಬದಲು 'ನಾಕು' ಎಂಬ ಪದ ಉಚ್ಚಾರಣೆಯಾಗುತ್ತದೆ. ಕನ್ನಡದ ಆಡುಭಾಷೆಯಲ್ಲಿ 'ನಾಕು' ಎಂಬ ಪದ ನಾಲ್ಕು ಎಂಬುದರ ಪ್ರತಿನಿಧಿಯಾಗಿ ಬಳಕೆಯಲ್ಲಿದೆ.

ತೆಲುಗುಭಾಷಿಕರಲ್ಲಿ 'ನಾಲ್ಗು' ಎಂದು ಉಚ್ಚಾರಣೆಯಲ್ಲಿದೆ. ಕನ್ನಡದಲ್ಲಿ 'ಕ್' ಕಾರದ ಬದಲು ತೆಲುಗಿವಿನಲ್ಲಿ 'ಗ್' ಕಾರ ಬಳಕೆಯಾಗಿದೆ.

ಉದಾ :– ನಾಕ್ ನಾಕ್ ಮಂದಿ ಬ್ಯಾಡ ಕೆಲ್ಸಕ್ಕೆ ಇಬ್ರಸಾಕು !

೩೬. ನೋವ್‌ತತ :– ಬಳ್ಳಾರಿನಗರದ ಉರ್ದುಭಾಷಿಕರು ಉಚ್ಚಾರಿಸುವ 'ನೋವ್‌ತತ' ಪದ ಕನ್ನಡದಲ್ಲಿ 'ನೋಯ್ಯುತ್ತದೆ' ಎಂಬ ಅರ್ಥದಲ್ಲಿ ಬಳಕೆಯಲ್ಲಿದೆ. ತೆಲುಗು ಭಾಷಿಕರಲ್ಲಿ 'ನೋವುತ್ತೆ' ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :– ಕುರುಬು ನೋವ್‌ತತ ಅಂದ್ರು ಡಾಕ್ಟರು ಎನ್ನಿ ಹಾಕಿತಿಗ್ಯಾರ.

೩೭. ಪುಗರುಮೆಲೆ :– ಬರಹದ ಕನ್ನಡದಲ್ಲಿ 'ಸೊಕ್ಕಿನಲ್ಲಿ' 'ಅಹಂನಲ್ಲಿ' ಎಂಬ ಪದಕ್ಕೆ ಬಳ್ಳಾರಿನಗರ ಉರ್ದುಭಾಷಿಕರಲ್ಲಿ 'ಪುಗರುಮೆಲೆ' ಎಂದು ಉಚ್ಚಾರಗೊಳ್ಳುತ್ತದೆ. ಈ 'ಪುಗರ್' ತೆಲುಗು ಭಾಷೆಯ ಪರಿಸರದಿಂದ ಬಂದಿರಬೇಕು, ತೆಲುಗರು ಸಹ 'ಪೊಗರ್‌ನಲ್ಲಿ' ಎಂಬ ಪದವನ್ನು ಉಚ್ಚಾರಿಸುತ್ತಾರೆ.

ಉದಾ :– ಗಾಡಿ ಬಂದ್ರು ಮಂದಿ ದಾರಿಬಿಡಲ್ಲ ಎಲ್ಲ ಪುಗರುಮೆಲೆ ಅಯ್‌ದಾರ.

೩೮. ಪ್ರಸ್ನಾ :– 'ಪ್ರಶ್ನೆ' ಎನ್ನುವ ಬರಹದ ಕನ್ನಡಕ್ಕೆ ಬಳ್ಳಾರಿನಗರದ ಉರ್ದುಭಾಷಿಕರು 'ಪ್ರಸ್ನಾ' ಎಂಬ ಪದವನ್ನು ಉಚ್ಚಾರಿಸುತ್ತಾರೆ. 'ಶ್' ಕಾರದ ಬದಲು ಉರ್ದುಭಾಷಿಕರಲ್ಲಿ 'ಸ್' ಕಾರವಾಗಿ ಬಳಕೆಗೊಂಡಿದೆ. ಹಾಗೂ ಪದಾಂತ್ಯ ಪರಿಸರದಲ್ಲಿ 'ಎ' ಕಾರ, 'ಆ' ಕಾರಗೊಂಡಿದೆ. ತೆಲುಗು ಭಾಷಿಕರು ಇದೇ ಮಾದರಿಯನ್ನು ಅಂದರೆ 'ಪ್ರಸ್ನಾ' ಎಂದೇ ಉಚ್ಚಾರಿಸುತ್ತಾರೆ.

ಉದಾ :– ನಮ್ ಬೇಟಿ ಅಯ್‌ತಲ್ಲ ಯಾವ್ ಪ್ರಸ್ನಾ ಕೇಳಿದ್ರು ಏಲುತ್ತೆ !

೩೯. ಬತ್ತ ಬತ್ತ :– ಬರಹದ ಕನ್ನಡದಲ್ಲಿ 'ಬರುಬರುತ್ತಾ' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಬತ್ತಬತ್ತ; ಎಂದು ಉಚ್ಚಾರಮಾಡುತ್ತಾರೆ. ಪುನರುಕ್ತಿ ಈ ಪದದ ಬಳಕೆ ತುಂಬಾ ಕುತೂಹಲಕಾರಿಯಾಗಿದೆ.

ಈ ವೈಶಿಷ್ಟ ತೆಲುಗು ಭಾಷಿಕರಲ್ಲಿ ಬೇರೆಯೇ ಇದೆ. ತೆಲುಗು ಭಾಷಿಕರು 'ಬರ್ತಾಬರ್ತಾ' ಎಂಬ ಪದವನ್ನು ಉಚ್ಚಾರಿಸುತ್ತಾರೆ.

ಉದಾ :- ಕಾಲ ಕೆಟ್ಟು ಬತ್ತಾಬತ್ತ ಮಂದಿ ಆಲಾಗ ಅತ್ಯಾರ್, ಬರಿ ಸುಲ್ಲು.

೪೦. ಬಿಕ್ಷ :- ಕನ್ನಡದ ಬರಹದ 'ಬಿಕ್ಷೆ' ಎಂಬ ಪದ ಉರ್ದು ಭಾಷಿಕರ ಬಾಯಲ್ಲಿ ಬಿಕ್ಷ ಎಂದು ಉಚ್ಚಾರಗೊಳ್ಳುತ್ತಿದೆ. ತೆಲುಗು ಭಾಷಿಕರಲ್ಲಿ 'ಬಿಚ್ಚೆ' ಎಂದು ಬಳಕೆಯಲ್ಲಿದೆ. 'ಚ್' ದ್ವಿತ್ವ ಹೊಂದಿ 'ಎ' ಕಾರಾಂತವಾಗಿ ಕನ್ನಡ ಪದದಂತಿಯೇ ಬಳಕೆಯಲ್ಲಿದೆ.

ಉದಾ :- ಇಂಗ ಮಾಡಿದ್ರೆ ನಾಳೆ ಬಿಕ್ಷ ಬಿಕ್ಷ ಬೇಡಕ್ ಅಕ್ಕೇತಿ.

೪೧. ಬೊಗ್ಗು :- ಬರಹದ ಕನ್ನಡದ 'ಬಾಗು' ಎಂಬ ಪದ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಬೊಗ್ಗು' ಎಂದು ಉಚ್ಚಾರಗೊಳ್ಳುತ್ತದೆ. ತೆಲುಗು ಭಾಷಿಕರು ಬೊಗ್ಗಿ, ಬಾಗಿ, ಎಂದು ಪ್ರಯೋಗಿಸುವುದನ್ನು ಅರಿಯಬಹುದು.

ಉದಾ :- ಬಿದ್ದಗಿಂದ ಸೊಂತ ಬೊಗ್ಗಕ ಬರಂಗಿಲ್ಲ.

೪೨. ಬರ್ತದೆ :- ಬರಹದ ಕನ್ನಡದ 'ಬರುತ್ತದೆ' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರು 'ಬರ್ತದೆ' ಎಂದು ಉಚ್ಚಾರಿಸುತ್ತಾರೆ. ಆದರೆ ತೆಲುಗು ಭಾಷಿಕರಲ್ಲಿ 'ಬರುತ್ತೆ' ಎಂದೇ ಉಚ್ಚಾರಿಸುತ್ತಾರೆ.

ಉದಾ :- ಇವ್‌ನಿಗೆ ಎನ್‌ಬಂತೋ ಅಂಗ್ ಅವ್‌ನಿಗು ಬರ್ತದೆ ತಾನೆ ಇಸ್‌ದಾಗ

೪೩. ಬಕ್ಸಿ :- 'ಪಕ್ಷಿ' ಎನ್ನುವ ಬರಹ ಕನ್ನಡದ ಬದಲು ಬಳ್ಳಾರಿನಗರದ ಉರ್ದುಭಾಷಿಕರು 'ಬಕ್ಸಿ' ಎಂದು ಉಚ್ಚಾರಿಸುತ್ತಾರೆ. ಇಲ್ಲಿ 'ಪ್' ಕಾರದ ಬದಲು 'ಬ್' ಕಾರ ಹಾಗೂ ಒತ್ತಕ್ಷರವಾದ 'ಷ್' ಕಾರದ ಬದಲು 'ಸ' ಕಾರವಾಗಿ ಬಕ್ಸಿ ಎಂದು ಬಳಸುತ್ತಾರೆ. ಹಾಗೆಯೆ 'ಪ' ಕಾರದ ಬದಲು 'ಬ' ಕಾರವನ್ನು 'ಕ್ಷ' ಕಾರದ ಬದಲು 'ಸ್' ಕಾರವನ್ನು ತೆಲುಗು ಭಾಷಿಕರು ಬಳಕೆ ಮಾಡುತ್ತಿದ್ದಾರೆ. ಆದರೆ ತೆಲುಗು ಭಾಷಿಕರಲ್ಲಿ 'ಪಚ್ಚಿಲು' ಎಂಬ ಪದ ಪ್ರಯೋಗ ಇದೆ.

ಉದಾ :- ಕರ್‌ನೂಲಗೆ ಎಲ್ಲ ಬಕ್ಸಿನು ಅಯ್‌ದಾವ, ಬಲ್ಲಾರಿಲಿ ಎಲ್ಲೇದವ

೪೪. ಬೇಸ್ :- ಬರಹದ ಕನ್ನಡದ 'ಚೆನ್ನಾಗಿ' ಎಂಬ ಪದದ ಬದಲು ಬಳ್ಳಾರಿನಗರದ ಉರ್ದುಭಾಷಿಕರು 'ಬೇಸ್' ಎಂಬ ಪದವನ್ನು ಉಚ್ಚಾರಿಸುತ್ತಾರೆ. ಆಡುಮಾತಿನ ಕನ್ನಡದಲ್ಲಿ ಚೆನ್ನಾಗಿ ಎನ್ನುವುದಕ್ಕೆ 'ಬೇಸಿ' ಎಂಬ ಪದ ಬಳಕೆಯೂ ಉಂಟು, ತೆಲುಗು ಭಾಷಿಕರು 'ಚೆನ್ನಾಗಿ' ಎಂದು ಉಚ್ಚಾರಿಸುತ್ತಾರೆ.

ಉದಾ :- ಈ ಸಾಲಿಲಿ ಎಲ್ಲ ಮಕ್ಳು ಬೇಸ್ ಕಲಿತಾರ.

೪೫. ಬಗಲಬಗಲಗೆ :- ಬರಹದ ಕನ್ನಡದಲ್ಲಿ 'ಅಕ್ಕ ಪಕ್ಕ' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರು 'ಬಗಲಬಗಲಿಗೆ' ಎಂಬ ಪದ ಬಳಕೆಮಾಡುತ್ತಾರೆ. ತೆಲುಗು ಭಾಷಿಕರು 'ಪಕ್ಕ ಪಕ್ಕನ' ಎಂದು ಉಚ್ಚಾರಿಸುತ್ತಾರೆ.

ಉದಾ :- ಅಲ್ಲಿ ಊರಾಗ ಬಗಲಬಗಲಗೆ ಮನಿ ಕಟ್ಟಿರ್‌ತಾರ, ಇಲ್ಲಿ ಅಂಗಿಲ್ಲ.

೪೬. ಬಾಡಗೆ :- ಬರಹದ ಕನ್ನಡದ 'ಬಾಡಿಗೆ' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರು 'ಬಾಡಗೆ' ಎಂದು ಉಚ್ಚಾರಿಸುತ್ತಾರೆ. ತೆಲುಗು ಭಾಷಿಕರಲ್ಲಿ 'ಬಾಡಿಗ' ಎಂದು ಉಚ್ಚಾರಿಸುತ್ತಾರೆ. ಪದಮಧ್ಯ ಪರಿಸರದಲ್ಲಿ 'ಅ' ಕಾರಕ್ಕೆ 'ಇ' ಕಾರಗಳು 'ಡ' ಕಾರಕ್ಕೆ 'ಇ' ಕಾರ ಮೈಗೂಡಿಸಿಕೊಂಡು 'ಬಾಡಿಗ' ಎಂದು ಉಚ್ಚಾರಣೆಗೊಳ್ಳುತ್ತಿದೆ.

ಉದಾ :- ಏನಿಲ್ಲ ಅವ್‌ನಿಗೆ, ಬಾಡಗೆ ಮನಿ ಇರೋದು.

೪೭. ಮಾನಕಾಯಿ/ಹಾಂ :- ಬರಹದ ಕನ್ನಡದಲ್ಲಿ 'ಮಾವಿನಕಾಯಿ' ಎಂದ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರು 'ಮಾನಕಾಯಿ' ಎಂದು ಉಚ್ಚಾರಿಸುತ್ತಾರೆ. ತೆಲುಗು ಭಾಷಿಕರು 'ಮಾಮಿಡಿ ಕಾಯಿ' ಎಂದು ಉಚ್ಚಾರಿಸುತ್ತಾರೆ.

ಉದಾ :- ಉಲಿ ಅಯ್‌ತೆ ಮಾನಕಾಯಿ, ಅದಕೆ ಉಪ್ಪುಕಾರ ಆಗಿರದು.

೪೮. ಮುಸಡ :- ಇಂಗ್ಲೀಶ್ ನಲ್ಲಿ 'ಮಸ್‌ಕಟೊ' ಎಂಬ ಪದಕ್ಕೆ ಉರ್ದುಭಾಷಿಕರು 'ಮುಸಡ' ಎಂದು ಬಳಸುತ್ತಾರೆ. ಜೊತೆಗೆ 'ಸುಕಡ' ಎಂತಲೂ ಉಚ್ಚಾರಿಸುತ್ತಾರೆ. 'ಸುಕಡ' ಎಂದರೆ 'ಸೊಳ್ಳೆ' ಎಂದರ್ಥ. ಇದಕ್ಕೆ ಕನ್ನಡದಲ್ಲಿ 'ಚುಕ್ಕಾಡಿ' ಎಂತಲೂ ಕರೆಯಲಾಗುತ್ತದೆ. ತೆಲುಗು ಭಾಷಿಕರು 'ಸುಕ್ಕಡ', 'ಚುಕ್ಕಾಡಿ' ಎಂತಲು ಉಚ್ಚಾರಿಸುತ್ತಾರೆ.

ಉದಾ :- ಬಲ್ಲಾರಿಲ್ಲಿ ಮುಸಡ ಯಾಕಿಲ್ಲ ? ಮಸ್ತ್ ಅಯ್‌ದಾವ.

೪೯. ಮೂಲಂಗಿಕಾಯಿ :- ಬರಹದ ಕನ್ನಡದ 'ಮೂಲಂಗಿ' ಎಂಬ ಪದಕ್ಕೆ ಬಳ್ಳಾರಿಯ ಉರ್ದುಭಾಷಿಕರು 'ಮೂಲಂಗಿಕಾಯಿ' ಎಂದು ಉಚ್ಚಾರಿಸುತ್ತಾರೆ. ಒಂದು ವೈಶಿಷ್ಟವೆಂದರೆ ಗಡ್ಡೆಗೂ ಮತ್ತು ಕಾಯಿಗೂ ತುಂಬಾ ವ್ಯತ್ಯಾಸವಿದೆ. 'ಕಾಯಿ' ಎಂದರೆ ಗಿಡಿಮರಗಳಲ್ಲಿ ಭೂಮಿಯಿಂದ ಅಥವಾ ಮಣ್ಣಿನಿಂದ ಹೊರಗೆ ಬಿಡುವ ಪದಾರ್ಥ. ಅಂದರೆ ಹಣ್ಣಿನ ಹಿಂದಿನ ರೂಪ, ಗಡ್ಡೆ ಎಂದರೆ ಗಿಡ-ಬಳ್ಳಿಗಳಲ್ಲಿ ಬೇರಿನಲ್ಲಿ ಭೂಮಿಯ ಒಳಗೆ ಮಣ್ಣಿನಲ್ಲಿ ಇರುವಂತಹ ಗಂಟುಗಳು, ಆದರೆ ಬಳ್ಳಾರಿ ನಗರದ ಉರ್ದುಭಾಷಿಕರಲ್ಲಿ ಈ ಎರಡರ ಭೇದ ಇಲ್ಲದೆ ಪದ ಪ್ರಯೋಗವು ವಿಶಿಷ್ಟವೆನಿಸುತ್ತದೆ. ತೆಲುಗು ಭಾಷಿಕರು 'ಮುಲಂಗಿಗಡ್ಡ' ಎಂದು ಉಚ್ಚಾರಿಸುತ್ತಾರೆ.

ಉದಾ :- ಇದ ಬೆಲ್‌ಗಿರದಾ, ಮೂಲಂಗಿಕಾಯಿ ನಿನಿಗೆ ಗೊತ್ತಿಲ್ಲೇನು.!

೫೦. ಮುದೇರ್‌ಗೆ :- ಬರಹದ ಕನ್ನಡದಲ್ಲಿ 'ಮುದುಕರು' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರು 'ಮುದೇರ್‌ಗೆ' ಎಂದು ಉಚ್ಚಾರಿಸುತ್ತಾರೆ. ತೆಲುಗು ಭಾಷಿಕರಲ್ಲಿ 'ಮುದುಕರು', 'ಮುದುಕಡು' ಎಂದು ಉಚ್ಚಾರಿಸುತ್ತಾರೆ.

ಉದಾ :- ಮುದೇರ್‌ಗೆ ರೊಟ್ಟಿ ಬೇಕಿಲ್ಲ, ಮುದ್ದಾ ಮುದ್ದ ಬೇಕು.

೫೧. ಮೋಟಮಂದಿ :- ಬರಹದ ಕನ್ನಡದ 'ಅನಕ್ಷರಸ್ತರು' ಎಂಬ ಪದಕ್ಕೆ (ಅವಿದ್ಯಾವಂತರು) ಬಳ್ಳಾರಿನಗರದ ಉರ್ದುಭಾಷಿಕರು ಮತ್ತು ತೆಲುಗು ಭಾಷಿಕರು 'ಮೋಟಮಂದಿ', 'ಮೋಟಜನ' ಎಂದು ಉಚ್ಚಾರಿಸುತ್ತಾರೆ. 'ಮೋಟ' ಎಂಬುದು ಆಡುಮಾತಿನಲ್ಲಿ 'ಅರ್ಧವಾದ', 'ಕೈಗೆಸಿಗದ' ಎಂಬರ್ಥದಲ್ಲಿ, ಬೈಯುಗಳಲ್ಲಿ ಬಳಕೆಯಾಗುತ್ತದೆ. ಹಾಗೂ ಮೋಟ ಎಂದರೆ ಆಗಲಾರದು, ಎಂಬ ಅರ್ಥವೂ ಉಂಟು ಆದರೆ ಇಲ್ಲಿ ಅವಿದ್ಯಾವಂತರಿಗೆ 'ಮೋಟಜನ', 'ಮೋಟಮಂದಿ' ಎಂದು ಸಂಬೋಧನೆ ವೈಶಿಷ್ಠೆಯಾಗಿದೆ.

ಉದಾ :- ನಾವು ಮೋಟಮಂದಿ ನಮಿಗೇನು ಏಳಕ ಬರ್‌ತೇತಿ, ಓದ್ ಕಲ್ತರನ್ ಕೇಳ್‌ರಿ ಎಳ್‌ತಾರ.

೫೨. ಮಕ್ಳು/ಮಕ್ಲು :- ಬರಹದ ಕನ್ನಡದಲ್ಲಿ "ಮಕ್ಕಳು" ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಮಕ್ಲು' ಎಂದು ಉಚ್ಚಾರಣೆಗೊಳ್ಳುತ್ತದೆ. 'ಳ್'

ಕಾರ 'ಕ್' ಕಾರದಲ್ಲಿ ಲೀನಗೊಂಡು ಉಚ್ಚಾರಗೊಳ್ಳುತ್ತಿದೆ. ತೆಲುಗು ಭಾಷಿಕರಲ್ಲೂ ಇದೇ ಮಾದರಿಯನ್ನು ಅನುಸರಿಸಲಾಗಿದೆ.

ಉದಾ :– ಸಾಲಿಂದ ಬಂದ್‌ಮೇಲೆ ಮಕ್ಳುಗೆ ದೂದ್ ಕೊಡ್‌ಬೇಕು.

೫೩. ಮಂತಿಗಿ :–

ಬರಹದ ಕನ್ನಡದ "ಮನಸ್ಸಿಗೆ" ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರು "ಮಂತಿಗಿ" ಎಂಬ ಪದವನ್ನು ಉಚ್ಚಾರಮಾಡುತ್ತಾರೆ. ತೆಲುಗು ಭಾಷಿಕರಲ್ಲಿ 'ಮನಸಾಗ' ಎಂದು ಉಚ್ಚಾರಿಸುತ್ತಾರೆ.

ಉದಾ :– ತನ್ದೆ ತಾಯ್ ಅಂತ ನಿಮ್ ಮಂತಿಗಿ ಇಟ್‌ಕೊಂಡಿರಬೇಕು

೫೪. ಮಗಿಗೆ :–

ಬರಹದ ಕನ್ನಡದಲ್ಲಿ "ಮಗನಿಗೆ" ಎಂಬ ಪದಕ್ಕೆ ಬಳ್ಳಾರಿನಗರದ ಉರ್ದು ಭಾಷಿಕರಲ್ಲಿ "ಮಗಿಗೆ" ಎಂದು ಉಚ್ಚಾರಣೆಗೊಳ್ಳುತ್ತದೆ. ತೆಲುಗು ಭಾಷಿಕರಲ್ಲಿ 'ಮಗಗೆ' ಎಂದು ಉಚ್ಚಾರಣೆಗೊಳ್ಳುತ್ತದೆ. ಇಲ್ಲಿಯೂ 'ನ್' ಕಾರ ಲೋಪವಾಗಿ ಉಚ್ಚಾರಣೆಗೊಂಡಿದೆ.

ಉದಾ :– ಅವ್ನ ಮಗಿಗೆ ಎಲ್ಲ ಗೊತ್ತು, ಮತ್ತ್ಯೇಳ್ ಬೇಕಾ ?

೫೫. ಯತ್ಯಾಸ :–

ಬರಹ ಕನ್ನಡದಲ್ಲಿ 'ವ್ಯತ್ಯಾಸ' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಯತ್ಯಾಸ' ಎಂದು ಉಚ್ಚಾರಗೊಳ್ಳುತ್ತದೆ. ಸಾಮಾನ್ಯವಾಗಿ ಉರ್ದುಭಾಷಿಕರಲ್ಲಿ ಪದದ ಪ್ರಾರಂಭದ ಅಕ್ಷರದಲ್ಲಿನ ಒತ್ತಕ್ಷರಗಳು ಉಚ್ಚಾರಣೆಗೊಳ್ಳುವುದು ತುಂಬಾ ವಿರಳ

ಉದಾ :– ಸ್ನಾನ>ಸಾನ, ಸ್ಮಶಾನ>ಶಶಾನ, ಸ್ಕೂಲ್>ಇಸ್‌ಕೂಲ್, ಇತ್ಯಾದಿ. ತೆಲುಗು ಭಾಷಿಕರಲ್ಲಿಯೂ 'ಯತ್ಯಾಸ' ಎಂಬ ಪದದ ಬಳಕೆ ಇದ್ದರೂ 'ತೇದ' ಎಂಬ ಪದದ ಉಚ್ಚಾರಣೆಯಲ್ಲಿದೆ. ಆರಂಭದ ವ್ಯಂಜನ 'ವ' ಕಾರ ಲೋಪವಾಗಿದೆ.

ಉದಾ :– ನಿನ್ ಮಾತ್ ಬೇಸೇಯ್‌ತಿ, ಯೇನ್ ಯತ್ಯಾಸ ಅಂತ ಗೊತ್ತಿಲ್ಲೇನು ?

೫೬. ಯಮಕಿ :–

ಬರಹ ಕನ್ನಡದ 'ಎಲುಬು' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಯಮಕಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಬಳ್ಳಾರಿನಗರದ ಭಾಷಿಕರಲ್ಲಿ ಸಾಮಾನ್ಯವಾಗಿ 'ಯ್' ಕಾರ 'ಎ' ಕಾರವಾಗಿ ಪರಿವರ್ತನೆಗೊಳ್ಳುತ್ತದೆ.

ಉದಾ :- ಎರಡು>ಯಲ್ಡು, ಎಂಬತ್ತು>ಯಂಬತು, ಎಂದು>ಯಂದು, ಏಕೆ>ಯಾಕೆ, ಇತ್ಯಾದಿ. ತೆಲುಗು ಭಾಷಿಕರಲ್ಲಿ 'ಎಮಕಿ' ಎಂದು ಉಚ್ಚಾರಗೊಳ್ಳುತ್ತಿದೆ.

ಉದಾ :- ಅಂಗಾಮ್‌ದಾಗ ಯಮಕಿ ಮುರ್‌ಕಂಡು ದುಡ್ಡ್ ಇಗ್ ಇಂಗ್ ಆಗ್ಯಾನ.

೫೭. ಯಣ :- ಬರಹ ಕನ್ನಡದ 'ಹೆಣ' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಯಣ' ಎಂದು ಉಚ್ಚಾರಣೆಗೊಳ್ಳುತ್ತಿದೆ. 'ಹ್' ಕಾರದ ಬದಲಿ 'ಯ್' ಕಾರ ಬಳಕೆಗೊಂಡಿರುವುದು ಕಂಡುಬರುತ್ತದೆ. ತೆಲುಗು ಭಾಷಿಕರಲ್ಲಿ ತಾಲವ್ಯ 'ಣ್' ಕಾರದ ಬದಲು ಮೂರ್ಧನ್ಯ 'ನ್' ಕಾರ ಉಚ್ಚಾರಣೆಯಾಗುತ್ತದೆ. ಅಂದರೆ 'ಯನ್' ಎಂದು ಬಳಕೆಯಾಗುತ್ತದೆ.

ಉದಾ :- ಒನ್‌ದ ಯಣ ಉಳಕಂದ್ರೆ ಬಲ್ಲಾರೆಗೆ ಯಲ್ಡ ಸೌರಬೇಕು.

೫೮. ರಕ್ತೆ :- ಬರಹ ಕನ್ನಡದ 'ರಕ್ತ' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ ರಕ್ತೆ ಎಂದು ಉಚ್ಚಾರಣೆಗೊಳ್ಳುತ್ತದೆ. ಪದಾಂತ್ಯ ಪರಿಸರದಲ್ಲಿ 'ಅ' ಕಾರ 'ಎ' ಕಾರವಾಗಿ 'ರಕ್ತೆ' ಎಂದು ಉಚ್ಚಾರಣೆಯಾಗಿದೆ. ತೆಲುಗು ಭಾಷಿಕರಲ್ಲಿ 'ರಕ್ತಮು' ಎಂದು ಬಳಕೆಗೊಳ್ಳುತ್ತಿದೆ.

ಉದಾ :- ಸಾಂಪೂ ಎಲ್ಲೆ ಮಿಸನ್ನಾಗ ಬಂದು ಎಲ್ಲ ರಕ್ತೆ ಆಗೇತೆ.

೫೯. ಲಕ್ಸ :- ಬರಹದ ಕನ್ನಡದ 'ಲಕ್ಷ' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ ಲಕ್ಸ ಎಂದು ಉಚ್ಚಾರಣೆಗೊಳ್ಳುತ್ತದೆ. ಹಾಗೆಯೇ ತೆಲುಗು ಭಾಷಿಕರಲ್ಲಿ 'ಲಚ್ಚ' ಎಂದು ಬಳಕೆಗೊಳ್ಳುತ್ತದೆ. ವತ್ತಕ್ಷರದಲ್ಲೂ 'ಷ' ಕಾರಕ್ಕೆ 'ಸ' ಕಾರ ಬಳಕೆಯಲ್ಲಿರುವುದು ವಿಶೇಷವಾಗಿದೆ.

ಉದಾ :- ಆಂದ್ರಲಿಂದ ಏಸು ಮಂದಿ ಬಂದಾರ ಲಕ್ಸ್ ಲಕ್ಸ್ ರುಪ ನಮ್ ಯನ್‌ಮಕ್ಲುಲಿಗೆ ಸಾಲ ಕೊಟ್ಟಾರ.

೬೦. ಲಚ್ಚ :- ಬರಹದ ಕನ್ನಡದಲ್ಲಿ 'ನೊಣ' ಎಂಬ ನಾಮಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಲಚ್ಚ' ಎಂದು ಪದ ಉಚ್ಚಾರಣೆಗೊಳ್ಳುತ್ತದೆ. 'ಲಚ್ಚ' ಎಂಬ ಪದ ಉರ್ದುಭಾಷೆಯದಾಗಿದ್ದು, ತೆಲುಗು ಭಾಷಿಕರು 'ಚೀಮುಲು' , 'ಈಗಲೂ' ಎಂದು ಬಳಸುತ್ತಾರೆ.

ಉದಾ :- ಅನ್ನ್ನಿ ಅಯ್‌ತಲ್ಲ ಲಚ್ಚ ಬಂದವ, ಅವು ಅಂಗ ಬರದು.

೬೧. ವೀರೆಕಾಯಿ :- ಬರಹದ ಕನ್ನಡದಲ್ಲಿ 'ಈರೇಕಾಯಿ' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ವೀರೆಕಾಯಿ' ಎಂದು ಉಚ್ಚಾರಣೆಗೊಳ್ಳುತ್ತದೆ. 'ಈರೇಕಾಯಿ' ಎಂಬುದೊಂದು ತರಕಾರಿ, ಪದಾದಿಯ 'ಈ' ಕಾರದ ಬದಲು 'ವ್' ಕಾರಬಂದು 'ವೀರೆಕಾಯಿ' ಆಗಿದೆ. ತೆಲುಗು ಭಾಷಿಕರು 'ಬೀರೆಕಾಯಿ' ಎಂದು ಉಚ್ಚಾರಿಸುತ್ತಾರೆ. ಇಲ್ಲಿಯೂ 'ಈ' ಕಾರದ ಬದಲು 'ವ' ಕಾರ ಆದೇಶವಾಗಿದೆ.

ಉದಾ :- ಒನ್ ಕಿಲೊ ವೀರೆಕಾಯಿಗೆ ಏಟು ರೊಕ್ಕ ಕೊಡಾಕು ?

೬೨. ಸಾವಂತಿಪೂಲ್ :- ಬರಹದ ಕನ್ನಡದಲ್ಲಿ 'ಸಾವಂತಿಗೆಹೂವು' ಎಂಬ ಪದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಸಾವಂತಿಪೂಲ್' ಎಂದು ಉಚ್ಚಾರಿಸುತ್ತಾರೆ. ಹೂವು ಬದಲಿಗೆ 'ಪೂಲ್' ಪದ ಬಳಕೆಗೊಂಡಿದೆ. ತೆಲುಗು ಭಾಷಿಕರಲ್ಲಿ 'ಚಾವಂತಿಗೆಪೂವ' ಎಂದು ಉಚ್ಚಾರಣೆ ಇದೆ. 'ಸ್' ಕಾರಕ್ಕೆ 'ಚ್' ಕಾರ ಬಳಕೆ ಕನ್ನಡ ಮತ್ತು ತೆಲುಗುವಿನಲ್ಲಿ ಸಾಮಾನ್ಯವಾದುದು.

ಉದಾ :- ಬಾಸ್ಕಿಕಲ್ಲಿ ಬ್ಯಾಡಂದ್ರೆ ಸಾವಂತಿ ಪೂಲ್ ತಗಲ್ಲಿ ನಾಕ್ ರುಪ ಕೊಡ್‌ತೀನಿ.

೬೩. ಸಾಂಪೂ :- ಬರಹದ ಕನ್ನಡದ ಪದ 'ಹಾವು' ಎಂಬುದಕ್ಕೆ ಬಳ್ಳಾರಿನಗರದ ಉರ್ದುಭಾಷಿಕರು 'ಸಾಂಪೂ' ಎಂದು ಉಚ್ಚಾರಿಸುತ್ತಾರೆ. ತೆಲುಗು ಭಾಷಿಕರು 'ಪಾಮು' ಎಂದು ಬಳಸುತ್ತಾರೆ. ಉರ್ದುಭಾಷಿಕರ 'ಸಾಂಪೂ' ಉರ್ದು ಪದವಾಗಿದ್ದರೆ. ತೆಲುಗರ 'ಪಾಮು' ಎಂಬ ತೆಲುಗು ಪದವನ್ನ ಬಳಸಿಕೊಳ್ಳುತ್ತಾರೆ. ಕೆಲವೊಮ್ಮೆ 'ಪಾವು' ಎಂಬ ಉಚ್ಚಾರಣೆಯು ಇದೆ.

ಉದಾ :- ದೊಡ್‌ದು ಸಾಂಪೂ, ಚಂಡ್ ಕಿತ್‌ವೊಗಂಗ ಹೊಡ್‌ದ ಸಲೀಂ

೬೪. **ಸೌರ/ಸಾವ್ರ :–** ಬರಹದ ಕನ್ನಡದಲ್ಲಿ 'ಸಾವಿರ' ಎಂಬ ಪದವು ಬಳ್ಳಾರಿನಗರದ ಉರ್ದುಭಾಷಿಕರಲ್ಲಿ 'ಸೌರ' ಎಂದು ಉಚ್ಚಾರಣೆಗೊಳ್ಳುತ್ತದೆ. ತೆಲುಗು ಭಾಷಿಕರು 'ಸಾರ' ಎಂದಷ್ಟು ಬಳಸುತ್ತಾರೆ.

ಉದಾ :– ಎಸು ಮಂದಿ, (ಕ್ರೈಸ್ತರು) ಸೌರ ಸೌರ ಸಾಲ ಕೊಟ್ಟಾರ ನಮ್‌ಮಂದಿಗೆ.

೬೫. **ಸಿಮ್‌ಅ :–** ಕನ್ನಡದ 'ಸಿಂಹ' ಎಂಬ ಪದಕ್ಕೆ ಉರ್ದುಭಾಷಿಕರು 'ಸಿಮ್‌ಹ'/ 'ಸಿಮ್‌ಅ' ಎಂದು ಉಚ್ಚಾರಿಸುತ್ತಾರೆ. ಅವರ್ಗೀಯ 'ಹ್' ಕಾರ ಹ್ರಸ್ವಸ್ವರವಾಗಿ ಮಾರ್ಪಟ್ಟಿದೆ. ತೆಲುಗು ಭಾಷಿಕರಲ್ಲಿ 'ಸಿಂಬಾ' ಎಂದು ಉಚ್ಚಾರಣೆಗೊಳ್ಳುತ್ತಿದೆ. 'ಹ್' ಕಾರ 'ಬಾ' ಕಾರವಾಗಿ ಪರಿವರ್ತನೆಗೆ ಬಂದಿರುವುದು ತುಂಬಾ ವೈಶಿಷ್ಟ್ಯೆಯಾಗಿದೆ.

ಉದಾ :– ಜೂದಲಿ ಸಿಮ್‌ಅ ಇತ್ತಲ್ಲ ಮಕ್ಳು ಎದರ್ ಬಿಟ್ಟವ, ಮತ್ತೆ ಇಂಗೇಸಿ ಬಂದ್ವಿ.

ಒಟ್ಟಾರೆ ಬಳ್ಳಾರಿ ನಗರದಲ್ಲಿರುವ ಉರ್ದುಭಾಷಿಕರು ಕನ್ನಡವನ್ನು ಬಳಸುವಾಗ ಎರಡು ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಒಂದು ಕನ್ನಡ ಪದವನ್ನು ಬಳಸುವ ಜಾಗಕ್ಕೆ ಉರ್ದುಪದವನ್ನು ಬಳಕೆ ಮಾಡುವುದು ಎರಡು ಬರಹದ ಕನ್ನಡಕ್ಕಿಂತ ಭಿನ್ನವಾಗಿ ಬಳಸುವುದು. ಅಂದರೆ ಪ್ರತಿಯೊಂದು ಸಾಮಾಜಿಕ ವರ್ಗಗಳು ತಮ್ಮದೆ ಆದೆ ಪದಕೋಶವನ್ನು ಹೊಂದಿರುತ್ತವೆ. ಎಂಬುದಕ್ಕೆ ಉರ್ದು ಮತ್ತು ತೆಲುಗು ಭಾಷಿಕರು ಮಾತನಾಡುವ ಕನ್ನಡದ ಸ್ವರೂಪ ಸ್ಪಷ್ಟಪಡಿಸುತ್ತದೆ. ಈ ಎಲ್ಲಾ ಅಂಶಗಳಿಂದ ಉರ್ದುಭಾಷಿಕರು ಕರ್ನಾಟಕದಲ್ಲಿ ಒಂದು ವಿಶಿಷ್ಟ ಸಮುದಾಯವಾಗಿದ್ದು, ಕನ್ನಡದ ಬಳಕೆಯಿಂದ ಒಂದು ವಿಶಿಷ್ಟವಾದ ಸಾಮಾಜಿಕ ಪ್ರಭೇದವೆನಿಸಿದೆ.

ಅಧ್ಯಾಯ – ೩

ಳ್ಳಾರಿ ನಗರದ ತೆಲುಗು ಭಾಷಿಕರ ಕನ್ನಡದ ಚ್ಚಾರಣೆಯಲ್ಲಿ ಪದಗಳು ಮತ್ತು ಪ್ರಯೋಗಾರ್ಥ

[illegible]

[illegible]

[illegible]

ಅಧ್ಯಾಯ – ೩

ಬಳ್ಳಾರಿ ನಗರದ ತೆಲುಗು ಭಾಷಿಕರ ಕನ್ನಡದ ಉಚ್ಚಾರಣೆಯಲ್ಲಿ ಪದಗಳು ಮತ್ತು ಪ್ರಯೋಗಾರ್ಥ

ಬಳ್ಳಾರಿ ಜಿಲ್ಲೆ ಮತ್ತು ನಗರ ಪೂರ್ಣವಾಗಿ ತೆಲುಗು ಪ್ರಭಾವಕ್ಕೊಳಪಟ್ಟಿದೆ. ಈ ಜಿಲ್ಲೆಯು ಆಂಧ್ರಪ್ರದೇಶದ ಜನರೊಡನೆ ಬಹುಕಾಲದಿಂದ ಸಂಪರ್ಕ ಇದ್ದುದರಿಂದ ಈ ಪ್ರದೇಶದಲ್ಲಿ ಸಾಕಷ್ಟು ತೆಲುಗರು ನೆಲೆಸಿದ್ದಾರೆ. ಈ ಹಿನ್ನೆಲೆಯಿಂದ ಒಕ ರೂಪಾಯಿ, ಡಬ್ಬು, ಪಿಳ್ಳೆ, ವಾಮು, ಪೊಗರು, ಎಮ್ಮೆ, ಕಟ್ಟುವಾಳ್ಳು, ಸೇದ್ಯಂ, ಪಾಪಿಡಿ, ಉಡ್ಕು, ಬುರುದ, ಎಂದುಕು, ಕಮ್ಮಗ, ಕುನೆಮ್ಮನಂಗ, ಇದ್ದಿಲನ್ನು ಬಗ್ಗು ಎಂದು ಉಚ್ಚರಿಸುತ್ತಾರೆ. ಬೆರಣಿಯನ್ನು 'ಕುಳ್ಳು' ಎನ್ನುತ್ತಾರೆ. ಹೀಗೆ ಹೆಚ್ಚಿನ ಪ್ರಮಾಣದಲ್ಲಿ ಪದಗಳು ಬಳ್ಳಾರಿ ಕನ್ನಡದಲ್ಲಿ ಉಚ್ಚಾರಣೆಯಲ್ಲಿವೆ.

ಇದಲ್ಲದೆ ಬಳ್ಳಾರಿ ನಗರ ಕನ್ನಡ ಒಂದು ವಿಶಿಷ್ಟ 'ಪ್ರಾದೇಶಿಕ ಉಪಭಾಷೆ' ಎಂದು ನಿರ್ಧರಿಸಲು ಕೆಲವು ಹೊಸ ಪದಗಳು ಬಳ್ಳಾರಿ ನಗರ ಕನ್ನಡದ ಉಚ್ಚಾರಣೆಯಲ್ಲಿವೆ. ಓಸು, ಯೆಸೊಂದು, ಯೇಸು, ವಂಟುಂಟ್ಲೆ, ಉಂಬಾನ, ತಿಂಬಾನ, ಜಗ್ಗಿ, ಆಗದಿದ್ರೆಗಿನ, ಅವುಟ್ರನ, ಇವಟ್ರನ, ಜಿಗುದು, ಜರ ಮೇಲು, ಸೆದ್ದೇವ್ ಕೆಲ್ಸ, ಗಡ ಗಡ, ಗಣ್‌ಮಕ್ಳು, ಯಣ್‌ಮಕ್ಳು, ರೊಕ್ಕ, ಕುಂದ್ರು, ನಿಂದ್ರು, ಬಸ್ ಬರಲಿಕ್ಕೆ ಅತ್ತಿದೆ, ಮರ ಇಳಿಲಿಕ್ಕೆ ಅತ್ಯಾನ, ಆ ಉಡ್ಗಿ ಅಡ್ಗಿ ಮಾಡಲಿಕ್ಕೆ ಅತ್ಯಾಳ, ಉಳ್ಳಾಗಡ್ಡಿ, ನಿಂತಗಮ್‌ತಾನ, ಯದ್ಕ ಮುಂತಾದ ಪದಗಳು ಉಚ್ಚಾರಣೆಯಲ್ಲಿರುವುದು ಗಮನಿಸುವಂತಹ ಅಂಶ.

ಬಳ್ಳಾರಿ ನಗರ ಕನ್ನಡದ ಉಚ್ಚಾರಣೆಯಲ್ಲಿ ಪದಗಳು ಮತ್ತು ಅವುಗಳ ಪ್ರಯೋಗಾರ್ಥದ ಹಿನ್ನೆಲೆಯಿಂದ ವಿಶ್ಲೇಷಣೆ ಮಾಡಲಾಗಿದೆ. ಪದಗಳ ವಿಶಿಷ್ಟ ಉಚ್ಚಾರಣೆಗೆ ಕಾರಣಗಳನ್ನು ಖಚಿತತೆಗಿಂತ ಸಾಧ್ಯತೆಗೆ ಹೆಚ್ಚು ಒತ್ತು ನೀಡಲಾಗಿದೆ.

೧. ಅಡ್ಕ :- ಬರಹದ ಕನ್ನಡದಲ್ಲಿ ಕೈಲಾಗದವನು 'ಹೇಡಿ' ಎನ್ನುವ ಅರ್ಥದಲ್ಲಿ ಬಳಕೆಯಲ್ಲಿರುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಅಡ್ಕ' ಎಂದು ಉಚ್ಚಾರಣೆಯಲ್ಲಿದೆ. ಕನ್ನಡದ ನಿಘಂಟುವಿನಲ್ಲಿ 'ಅಡಕವಂತ' ಎಂದರೆ ಸಂಯಮದಿಂದ ವರ್ತಿಸುವವನು, 'ವಿಧೇಯ' ಎನ್ನುವ ಅರ್ಥವನ್ನೊಳಗೊಂಡಿದೆ. ಆದರೆ ಬಳ್ಳಾರಿ ನಗರ ಕನ್ನಡದಲ್ಲಿ 'ಅಡ್ಕ' ಎನ್ನುವ ಪದ ವ್ಯಂಗ್ಯಾರ್ಥದಲ್ಲಿ ಬಳಕೆಯಲ್ಲಿದೆ.

ಉದಾ :- ಅಡ್ಕ ನನ್ನ ಮಗನೆ, ನಿನಿಗೆ ಅದನ ಮಾಡಕ ಅಕ್ಕೇತಾ.

೨. ಅಯ್‌ದಾನ :- ಬರಹದ ಕನ್ನಡದಲ್ಲಿ 'ಇದ್ದಾನೆ' ಎನ್ನವುದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಅಯ್‌ದಾನ' ಎಂದು ಉಚ್ಚಾರಣೆಯಲ್ಲಿದೆ. ಇಲ್ಲಿ 'ಇ' ಕಾರದ ಸ್ಥಾನದಲ್ಲಿ 'ಅ' ಕಾರವು ಬಂದು, ಪದಮಧ್ಯ ಪರಿಸರದ ದ್ವಿತ್ವ ಲೋಪವಾಗಿದೆ. 'ಅಯ್‌ದಾನ' ಎನ್ನುವ ಪದ ಬಳಕೆ ಬಳ್ಳಾರಿ ನಗರ ಕನ್ನಡದ ವೈಶಿಷ್ಟ್ಯ

ಉದಾ :- ಆವಾಗ ಇವ್ನು ಅಲ್ಲೆ ಅಯ್‌ದಾನ ಅಂತಿನಿ

೩. ಅವ/ಇವ :- ಬರಹದ ಕನ್ನಡದ 'ಅವುಗಳು/ಇವುಗಳು' ಎಂಬ ಸ್ವರನಾಮಗಳಿಗೆ ಬಳ್ಳಾರಿ ನಗರ ಭಾಷಿಕರಲ್ಲಿ ಅವ/ಇವ ಎಂದು ಉಚ್ಚಾರಣೆಗೊಳ್ಳುತ್ತವೆ. ಧಾರವಾಡ ಕನ್ನಡದಲ್ಲಿ 'ಅವ/ಇವ' ಎಂದರೆ 'ಅವನು/ಇವನು' ಎಂದರ್ಥ, ಆದರೆ ಬಳ್ಳಾರಿ ನಗರ ಭಾಷಿಕರಲ್ಲಿ ಸ್ವರನಾಮಗಳಾದ ಅವುಗಳು/ಇವುಗಳು ಪದಗಳಲ್ಲಿ 'ಗಳು' ಲೋಪವಾಗಿ ಅವ/ಇವ ಮಾತ್ರ ಉಚ್ಚಾರಣೆ ಆಗುತ್ತಿವೆ.

ಉದಾ :- ನೀನ್ ಹೇಳಿದ್ದು 'ಅವ' ಏನು ಇಷ್ಟತನ ತಂದಾಕಿದ್ದು 'ಇವ'

೪. ಅವಟ್ರುನ :- 'ಅವುಟ್ರುನ/ ಎನ್ನುವ ಪದವು ನಾಮಪದದಲ್ಲಿ ಮಾತ್ರ ಬಳಕೆಯಲ್ಲಿದೆ. ಬರಹದ ಕನ್ನಡದಲ್ಲಿ ಈ ಪದ 'ಅವುಗಳನ್ನು' ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ. 'ಅವು' ಎನ್ನುವ ಪದ ಸಾಮಾನ್ಯವಾಗಿ ಬರಹದ ಕನ್ನಡ ಹಾಗೂ ಬಳ್ಳಾರಿ ಕನ್ನಡದಲ್ಲಿ ಬಳಕೆಯಲ್ಲಿದೆ. ಆದರೆ ಬಹುವಚನ ಪ್ರತ್ಯಯಗಳು ಬದಲಾಗಿ ಬಳ್ಳಾರಿ ನಗರ ಕನ್ನಡದಲ್ಲಿ 'ಟ್ರನ್' ಎನ್ನವ ವಿಶಿಷ್ಟ ರೂಪ ಬಳಕೆಯಲ್ಲಿರುವುದು ಇಲ್ಲಿಯ ವಿಶೇಷ.

ಉದಾ :- ಇಕಡ್‌ಗೆ ಇದಾವಲ್ಲ ಅವಟ್ರುನು ತೆಗೆದು ಬಿಡು

[illegible]

೫. ಆಗದಿದ್ರೆಗಿನ :- ಬಳ್ಳಾರಿ ನಗರ ಕನ್ನಡದಲ್ಲಿ ಕ್ರಿಯಾಪದದ ನಂತರ 'ಗಿನ' ಎನ್ನುವ ಪ್ರತ್ಯಯ ಬಳಕೆಯಾಗುವುದು ಒಂದು ವೈಶಿಷ್ಟ್ಯ. ಬರಹದ ಕನ್ನಡದಲ್ಲಿ ಆಗದಿದ್ದರೆ ಎನ್ನುವುದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಆಗದಿದ್ದರೆಗಿನ' ಎಂದು ಉಚ್ಚಾರಣೆಗೊಳ್ಳುತ್ತದೆ. 'ಗಿನ' ಎನ್ನವುದು ವಿಶಿಷ್ಟವಾಗಿ ಬಳಕೆಯಾಗುತ್ತಿರುವ ಪ್ರತ್ಯಯು. ಇದೇ ರೀತಿ ಬರದಿದ್ರೆಗಿನ. ಹೋಗದಿದ್ರೆಗಿನ. ಕೊಡದಿದ್ರೆಗಿನ, ಎನ್ನುವ ಪದಗಳು ಬಳಕೆಯಾಗುವುದನ್ನು ಕಾಣಬಹದು, 'ಗಿನ' ಎನ್ನುವ ಪ್ರತ್ಯಯ ಆಗಬೇಕು, ಕೊಡಲೇಬೇಕು ಎನ್ನವ ಅರ್ಥವನ್ನು ಸೂಚಿಸುವುದಕ್ಕೆ ಬಳಕೆಯಾಗುತ್ತಿರಬಹುದು.

ಉದಾ :- ಆಗ್‌ದಿದ್ರೆಗಿನ ಏನ್ ಮಾಡದು ಎಲ್ಲ ದೇವ್ರು ಇಚ್ಛೆ

೬. ಆತಡವು :- ಬರಹದ ಕನ್ನಡದಲ್ಲಿ 'ಆ ಸಲ' ಎನ್ನುವ ಪದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಆತಡವು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಆದರೆ ಬರೇ 'ತಡ' ಎಂದರೆ ವಿಳಂಬ ಎಂದು ಅರ್ಥ, 'ತಡ' ಮತ್ತು 'ತಡವು' ಭಿನ್ನವಾಗಿ ಬಳಕೆಯಾಗಿರುವುದು ಬಳ್ಳಾರಿ ನಗರ ಕನ್ನಡದ ವೈಶಿಷ್ಟ್ಯ

ಉದಾ :- ೧ ಆತಡವು ಬಂದ್ಹಾಂಗ ಮಲಿ(ಮಳಿ) ಈ ತಡವು ಬರಲಿಲ್ಲ

೭. ಇಸ್‌ಗೋತಿನಿ :- ಬರಹ ಕನ್ನಡದಲ್ಲಿ 'ತೆಗೆದುಕೊಳ್ಳುತ್ತೇನೆ' ಎಂಬ ಪದ್ಕಕ್ಕೆ ಬಳ್ಳಾರಿ ನಗರ ಭಾಷಿಕರು 'ಇಸ್‌ಗೋತಿನಿ' ಎಂದು ಉಚ್ಚಾರಿಸುತ್ತಾರೆ, ಇಲ್ಲಿ 'ತೆಗೆದು' ಎನ್ನುವ ಪದಕ್ಕೆ ಬದಲಾಗಿ 'ಇಸ್' ಎನ್ನುವ ಪದ ಪ್ರಯೋಗದಲ್ಲಿದೆ. 'ಕೊಳ್ಳುತ್ತೇನೆ' ಎಂಬ ಪದದ ಬದಲು 'ಗೋತಿನಿ' ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ನಾನ್ ಬಂದು ಮ್ಯಲೆ 'ಇಸ್‌ಗೋತಿನಿ' ಅಂತ ಹೋಗ್ ಹೇಳು!

೮. ಇವ್‌ಟ್ರನ :- 'ಇವುಟ್ರುನ' ಎನ್ನುವ ಪದವು ನಾಮಪದದಲ್ಲಿ ಮಾತ್ರ ಬಳಕೆಯಲ್ಲಿದೆ. ಬರಹದ ಕನ್ನಡದಲ್ಲಿ ಈ ಪದ 'ಇವುಗಳನ್ನು' ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ. 'ಇವು' ಎನ್ನುವ ಪದ ಸಾಮಾನ್ಯವಾಗಿ ಬರಹದ

ಕನ್ನಡ ಹಾಗೂ ಬಳ್ಳಾರಿ ನಗರ ಕನ್ನಡದಲ್ಲಿ ಬಳಕೆಯಲ್ಲಿದೆ. ಆದರೆ ಬಹುವಚನ ಪ್ರತ್ಯಯಗಳು ಬದಲಾಗಿ ಬಳ್ಳಾರಿ ನಗರ ಕನ್ನಡದಲ್ಲಿ 'ಟ್ರನ್' ಎನ್ನುವ ವಿಶಿಷ್ಟ ರೂಪ ಬಳಕೆಯಲ್ಲಿರುವುದು ಇಲ್ಲಿಯ ವಿಶೇಷ

ಉದಾ :– ಇವುಟ್ರನ ತೆಗದ್ರೆ ಬೈಲ್ ಆಕ್ಕೇತಿ ತಡಿ.

೯. ಇತ್ಲಾಗ :–

ಬರಹದ ಕನ್ನಡದಲ್ಲಿ 'ಈ ಕಡೆ' ಎನ್ನುವುದಕ್ಕೆ ಬಳ್ಳಾರಿ ನಗರ ಭಾಷಿಕರಲಿ 'ಇತ್ಲಾಗ' ಎಂದು ಉಚ್ಚಾರಣೆಗೊಳ್ಳುತ್ತದೆ. 'ಇತ್ಲಾಗ' ಎಂಬುದಕ್ಕೆ ಆಡುನುಡಿಯಲ್ಲಿ 'ಹಿತ್ತಲಲ್ಲಿ' ಎಂಬ ಅರ್ಥವೂ ಇದೆ. 'ಆಕಡೆ' ಎನ್ನುವುದಕ್ಕೆ 'ಅತ್ಲಾಗ' ಎಂಬಂತಹ ಅರ್ಥದಲ್ಲಿಯೂ ಬಳಕೆಯಲ್ಲಿದೆ.

ಉದಾ :– ಅತ್ಲಾಗ ಇತ್ಲಾಗ್ ಆಗ್‌ಲಲ್ಲ ಯಾಕ್ ಓಡ್ಯಾತಿ.

೧೦. ಉಡ್ಕು :–

ಬರಹದ ಕನ್ನಡದಲ್ಲಿ ಈ ಪದಕ್ಕೆ 'ಕುಡಿ' ಎಂದು ಅರ್ಥ. ಆದರೆ ಬಳ್ಳಾರಿ ನಗರ ಕನ್ನಡದಲ್ಲಿ 'ಉಡ್ಕು' ಎಂದು ಬಳಕೆಯಾಗುತ್ತಿದೆ. ತೆಲುಗಿನಲ್ಲೂ, 'ಬಿಸಿ' ಎನ್ನುವುದಕ್ಕೆ 'ಉಡುಕು' ಎಂದು ಬಳಕೆಯಲ್ಲಿದೆ. ಆದ್ದರಿಂದ ತೆಲುಗಿನ ಪ್ರಭಾವದಿಂದ ಬಳ್ಳಾರಿ ನಗರ ಕನ್ನಡದಲ್ಲಿ 'ಉಡ್ಕು' ಎನ್ನುವ ಪದವು ಉಚ್ಚಾರಣೆಗೊಳ್ಳುತ್ತಿರಬಹುದು

ಉದಾ :– ಇನ್ನು ರವೋಟು ಉಡ್ಕ ಮಾಡು ಅಂಗಾರ ಬೇಸ್ಯಾಕತೆ

೧೧. ಉದ್ರಿನನ್ನಮಗ :–

ಬರಹದ ಕನ್ನಡದಲ್ಲಿ "ವ್ಯವಹಾರ ಸರಿ ಇಲ್ಲದವನು" ಎಂಬ ಅರ್ಥದಲ್ಲಿ ಬಳ್ಳಾರಿ ನಗರ ಭಾಷಿಕರಲ್ಲಿ 'ಉದ್ರಿ ನನ್‌ಮಗ' ಎಂಬ ಬೈಯುವ ಶಬ್ದ ಬಳಕೆಯಲ್ಲಿದೆ. ಬರಹದ ಕನ್ನಡದಲ್ಲಿ 'ಉದ್ರಿ' ಎಂದರೆ 'ಬಾಕಿ/ಸಾಲ' ಎಂದರ್ಥ, ಇದೇ ಅರ್ಥದಲ್ಲಿ 'ತಪ್ಪು ಜೀವನ' ನಿರ್ವಹಿಸುವ ಪೂರ್ಣ ನಂಬಿಗಸ್ತನಲ್ಲದ ವ್ಯಕ್ತಿಗೆ 'ಉದ್ರಿ ನನ್‌ಮಗ' ಎಂಬ ಅರ್ಥದಲ್ಲಿ ಉಚ್ಚಾರಣೆ ಬಳ್ಳಾರಿ ನಗರದ ಭಾಷಿಕರಲ್ಲಿ ಬಳಕೆಯಲ್ಲಿರುವುದು ವೈಶಿಷ್ಟ್ಯೆಯಾಗಿದೆ.

ಉದಾ :– ನಾನು ಮದ್ಲೆ ಹೇಳ್ದೆ 'ಆ' ಉದ್ರಿನನ್‌ಮಗ'ನ್ನ ನಮ್ ಬ್ಯಾಂಡಂತ.

೧೨. ಉಣುಬಾ :– ಬರಹದ ಕನ್ನಡದಲ್ಲಿ ಈ ಪದಕ್ಕೆ 'ಊಟ ಮಾಡೋಣ ಬಾ' ಎನ್ನುವ ಅರ್ಥ ಇದೆ. ಬಳ್ಳಾರಿ ನಗರ ಕನ್ನಡದಲ್ಲಿ ಈ ಪದವನ್ನು ಭಿನ್ನವಾಗಿ ಬಳಕೆ ಮಾಡುವುದನ್ನು ನಾವು ಕಾಣಬಹುದು. 'ಉಣ್ಣು, ಉಂಬು' ಎನ್ನುವ ಎರಡೂ ಪದಗಳು ಊಟದ ಅರ್ಥವನ್ನು ಸೂಚಿಸುತ್ತವೆ.

ಉದಾ :– ಅವ್ರೋತ್ ಉಣುಬಾ ಅಂತ ಕರ್‌ದ್ರೆ ಯಾಕ ಬರ್‌ಲಿಲ್ಲ

೧೩. ಉರ್ಲಗಡ್ಡೆ :– ಬರಹದ ಕನ್ನಡದಲ್ಲಿ 'ಆಲುಗಡ್ಡೆ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಉರ್ಲಗಡ್ಡೆ' ಎಂದು ಬಳಕೆಯಾಗುತ್ತಿದೆ. ಈ 'ಉರ್ಲಗಡ್ಡೆ' ಎನ್ನುವ ಪದವು ವ್ಯವಹಾರಿಕ ತೆಲುಗಿನ ಪ್ರಭಾವದಿಂದ ಬಂದಿರಬಹುದು. ವ್ಯವಹಾರಿಕ ತೆಲುಗಿನಲ್ಲಿ 'ಉರ್ಲಗಡ್ಡೆ' ಎಂದು ಬಳಕೆಗೊಳ್ಳುತ್ತಿದೆ. ಅದೇ ಪದವು ಬಳ್ಳಾರಿ ವ್ಯವಹಾರಿಕ ಕನ್ನಡದಲ್ಲಿ 'ಉರ್ಲಗಡ್ಡೆ' ಎಂದು ಉಚ್ಚಾರಣೆಗೊಳ್ಳುತ್ತಿದೆ.

ಉದಾ :– ಪೂರಿಗೆ ಉರ್ಲುಗಡ್ಡೆ ಪಲ್ಯನ ಚಂದ

೧೪. ಉಳ್ಳಾಗಡ್ಡೆ :– ಬರಹದ ಕನ್ನಡದಲ್ಲಿ 'ಈರುಳ್ಳಿ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಉಳ್ಳಾಗಡ್ಡಿ' ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :– ಉಳ್ಳಾಗಡ್ಡೆ ವೊಲಕ್ಕ ನೀರಾಸಕ ಹೋಗ್ಯಾರ

೧೫. ಉಳ್ಕಿದ್ದು :– ಬರಹದ ಕನ್ನಡದಲ್ಲಿ 'ಉಳಿದದ್ದು' ಎನ್ನುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಉಳ್ಕಿದ್ದು' ಎಂದು ಉಚ್ಚಾರಣೆಗೊಳ್ಳುತ್ತಿದೆ. 'ದ' ಕಾರದ ಬದಲು 'ಕ' ಕಾರ ಆದೇಶವಾಗಿ ಉಚ್ಚಾರಣೆಯಲ್ಲಿರುವುದು ಬಳ್ಳಾರಿ ನಗರ ಕನ್ನಡದ ವೈಶಿಷ್ಟ್ಯ

ಉದಾ :– ಇನ್ನು ಯೇಟ್ ದಿನ ಬೇಕು ಉಳ್ಕಿದ್ದು ಕೊಡಕ

೧೬. ಏಗತಾನ :– ಬರಹದ ಕನ್ನಡದಲ್ಲಿ 'ನಿರ್ವಹಿಸುತ್ತಾನೆ' ಎನ್ನುವ ಅರ್ಥವನ್ನು ಸೂಚಿಸುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಏಗತಾನ' ಎಂದು ಉಚ್ಚಾರಣೆಗೊಳ್ಳುತ್ತಿದೆ. ನೆರೆಯ ರಾಜ್ಯದ ತೆಲುಗಿನ ಪ್ರಭಾವದಿಂದ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ ಬಂದು ಸೇರ್ಪಡೆಯಾಗಿದೆ. 'ನಿರ್ವಹಿಸುತ್ತಾನೆ' ಎನ್ನುವುದನ್ನು ತೆಲುಗಿನಲ್ಲಿ 'ಏಗ್‌ತಾಡು' ಎಂದು ಬಳಕೆಯಲ್ಲಿದೆ. ಅದು ಬಳ್ಳಾರಿ ನಗರ ಕನ್ನಡದಲ್ಲಿ 'ಏಗ್‌ತಾನ' ಎಂದು ಉಚ್ಚಾರಣೆಯಲ್ಲಿರುವುದನ್ನು ಗಮನಿಸುವಂತಹ ಅಂಶ.

ಉದಾ :– ಅವನ ಏಣ್ತಿ ರೊಂಕಲಾಡಿ, ಯಂಗ ಏಗ್‌ತಾನ ಆಕಿತಾಗ.

೧೭. ಒನ್‌ದ ಮಾಡಕ/ ಕಾಲ್‌ಮಡಿ :- ಬರಹದ ಕನ್ನಡದಲ್ಲಿ 'ಮೂರ್ತವಿಸರ್ಜನೆ' ಬಳ್ಳಾರಿ ನಗರ ಭಾಷಿಕರು 'ಒನ್‌ದ ಮಾಡಕ/ ಕಾಲ್‌ಮಡಿ' ಎಂಬ ವಿಶಿಷ್ಟಪದಗಳನ್ನು ಉಚ್ಚಾರಿಸುತ್ತಾರೆ. 'ಮೂತ್ರ' ಎಂಬುದಕ್ಕೆ 'ಒನ್‌ದ' ಶಬ್ದ ಬಳಕೆಯಾದರೆ, 'ವಿಸರ್ಜನೆಗೆ' 'ಮಾಡು' ಎಂಬ ಪದ ಬಳಕೆಯಲ್ಲಿದೆ. ಆದರೆ 'ಕಾಲ್‌ಮಡಿ' ಎಂಬ ಪದ ಇನ್ನು ವೈಶಿಷ್ಟ್ಯಪೂರ್ಣವಾಗಿದೆ. ಕಾಲುಗಳನ್ನು ಮಡಚಿಮಾಡುವ ಕ್ರಿಯೇ ಮೂರ್ತ ವಿಸರ್ಜನೆ ಆಗಿರುವುದರಿಂದ, ಆ ಕಾಲನ್ನು ಆಧರಿಸಿ, 'ಕಾಲ್‌ಮಡಿ' ಎಂಬ ಪದ ಉಚ್ಚಾರಣೆಗೊಳ್ಳುತ್ತಿರಬಹುದು.

ಉದಾ :- ಇಗ ಕಾಲ್‌ಮಡ್‌ದ ಬರ್ತಿನಂತೆ ವರಗ್‌ವೋದ್ರು

೧೮. ಕಕ್ಕಿ ಕಕ್ಕ :- ಬಳ್ಳಾರಿ ನಗರ ಕನ್ನಡದ ಉಚ್ಚಾರಣೆಯಲ್ಲಿ ಸಂಬಂಧ ಸೂಚಕ ಪದಗಳು ವಿಶಿಷ್ಟವಾಗಿ ಬಳಕೆಯಲ್ಲಿವೆ. ಬರಹದ ಕನ್ನಡದಲ್ಲಿ 'ಚಿಕ್ಕಮ್ಮ' ಎನ್ನುವುದಕ್ಕೆ 'ಕಕ್ಕಿ' ಎಂದೂ 'ಚಿಕ್ಕಪ್ಪನಿಗೆ', 'ಕಕ್ಕ' ಎಂದೂ ಉಚ್ಚಾರಣೆಯಲ್ಲಿದೆ. 'ಕಕ್ಕ' ಪದವು ಪ್ರಾದೇಶಿಕವಾಗಿ ಬೇರೆ ಅರ್ಥದಲ್ಲಿ ಬಳಕೆಯಲ್ಲಿದೆ.

ಉದಾ :- ಇವ್ರು ಕಕ್ಕ-ಕಕ್ಕಿ ನೋಡು ಬಸ್ ಬಿತ್ತಲ್ಲ ಅವಗ ಸತ್ತಿದ್ದು.

೧೯. ಕದಿಲೋಗ :- ಬರಹದ ಕನ್ನಡದಲ್ಲಿ 'ಕದಲು' ಎಂದರೆ ಸರಿಸುವುದು, ಸ್ಥಾನ ಬದಲಾಯಿಸುವುದು. ಆದರೆ ಬಳ್ಳಾರಿ ನಗರ ಕನ್ನಡದಲ್ಲಿ 'ಕದಿಲೋಗ' ಎಂದು ಬೈಗುಳ ರೂಪ ಪಡೆದುಕೊಂಡಿದೆ. 'ಕದಲು ಹೋಗು' ಎಂದರೆ ಸುಡುಗಾಡಿಗೆ 'ಕದಲು' ಎಂಬ ಅರ್ಥದಲ್ಲಿ ಬೈಗುಳ ಸ್ವರೂಪವನ್ನು ಪಡೆದುಕೊಂಡಿದೆ. ನೇರವಾಗಿ ಸಾಯು ಎನ್ನದೇ ಪರೋಕ್ಷವಾಗಿ ಸಾಯು ಎನ್ನುವ ಬೈಗುಳ ರೂಪದಲ್ಲಿ ಬಳಕೆಯಲ್ಲಿದೆ.

ಉದಾ :- ಇವ್ನ ವಂಶ್ ಕದಿಲೋಗ! ಇಂಗ್ ಮಾಡಕ ಮನಸರ ಯಂಗ್ ಬಂತು.

೨೦. ಕಂತ್ರಿ :- ಬರಹದ ಕನ್ನಡದಲ್ಲಿ 'ಕುತಂತ್ರ' ಎಂಬ ಪದಕ್ಕೆ ಬದಲಾಗಿ ಬಳ್ಳಾರಿ ನಗರದಲ್ಲಿ 'ಕಂತ್ರಿ' ಎಂಬ ಪದ ಉಚ್ಚಾರಣೆಯಲ್ಲಿದೆ. 'ಕುತಂತ್ರ' ಎಂದರೆ ದುರಾಲೋಚನೆ, 'ಕೆಟ್ಟವಿಚಾರ' ಎಂದರ್ಥ, ಕಂತ್ರಿ ಎಂದರೆ

ಇದೇ ಅರ್ಥದಲ್ಲಿ ಬಳ್ಳಾರಿ ನಗರದಲ್ಲಿ ಉಚ್ಚಾರಣೆಯಲ್ಲಿದೆ. ಕುತಂತ್ರ>ಕುತಂತ್ರಿ>ಕಂತ್ರಿಯಾಗಿ ಉಚ್ಛಾರಣೆಗೊಳ್ಳುತ್ತಿರಬೇಕು. 'ಕುತಂತ್ರ', ದಲ್ಲಿಯ 'ಉ' ಮತ್ತು 'ತ್' ಕಾರಗಳು ಲೋಪವಾಗಿ 'ತ್ರ' ವು 'ತ್ರಿ' ಯಾಗಿ ಪರಿವರ್ತನೆಗೊಂಡಿರಬೇಕು. ಈ ಪದವನ್ನು ಅಪಹಾಸ್ಯ ಮತ್ತು ಜಗಳಗಳ ಸಂದರ್ಭದಲ್ಲಿ ವಿಶೇಷವಾಗಿ ಬಳಸಲಾಗುತ್ತಿದೆ.

ಉದಾ :– ನೀನ್ ಕಂತ್ರಿನನ್ ಮಗ ಅಂತ ನನಿಗೆ ಗೊತ್ತಿಲ್ ಅಂತ ತಿಳಿದಿಯೇನು ?

೨೧. ಕಮ್ಮಗ :–

ಬರಹದ ಕನ್ನಡದಲ್ಲಿ 'ಚೆನ್ನಾಗಿ' ಎನ್ನುವುದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಕಮ್ಮಗ' ಎನ್ನುವ ಪದವು ಉಚ್ಛಾರಣೆಯಲ್ಲಿದೆ. ಈ 'ಕಮ್ಮಗ' ಎನ್ನುವ ಪದವು ತೆಲುಗಿನ ಪ್ರಭಾವದಿಂದ ಬಳ್ಳಾರಿ ನಗರ ಕನ್ನಡದಲ್ಲಿ ಬಳಕೆ ಗೊಳ್ಳುತ್ತಿದೆ. ಏಕೆಂದರೆ ಚೆನ್ನಾಗಿ ಎನ್ನುವುದಕ್ಕೆ ತೆಲುಗಿನಲ್ಲಿ 'ಕಮ್ಮಗ' ಎನ್ನುವ ಪದವು ಬಳಕೆಯಲ್ಲಿದೆ. ಆದರೆ ಬಳ್ಳಾರಿ ವ್ಯವಹಾರಿಕ ಕನ್ನಡದಲ್ಲಿ 'ಕಮ್ಮಗ' ಎನ್ನುವ ಪದವು ಎರಡು ಅರ್ಥದಲ್ಲಿ ಬಳಕೆಯಲ್ಲಿದೆ. 'ಚೆನ್ನಾಗಿಲ್ಲ' ಎಂದು ವ್ಯಂಗ್ಯವಾಗಿ ಹೇಳುವುದಕ್ಕೆ ಎರಡೂ ಅರ್ಥಗಳಲ್ಲಿ 'ಕಮ್ಮಗ' ಎನ್ನುವ ಪದವನ್ನು ಬಳಸುವುದನ್ನು ನಾವು ಗಮನಿಸಬಹುದು.

ಉದಾ :– ಸಂಬಾರ್ ಕಮ್ಮಗ ಅಯ್ ತೆ, ಆದ್ರೆ ಸ್ವಲ್ಪ ಉಪ್ಪು ಆಕಾಕಾಗಿತ್ತು./ ನೀನಂತು ಕಮ್ಮಗ ಮಾಡ್ತಿಬಿಡು.

೨೨. ಕಮ್ಮಿ :–

ಬರಹದ ಕನ್ನಡದಲ್ಲಿ 'ಕಡಿಮೆ' ಎನ್ನುವುದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಕಮ್ಮಿ' ಎಂದು ಉಚ್ಛಾರಣೆಯಾಗುತ್ತಿದೆ. ಇಲ್ಲಿ 'ಡ' ಕಾರ ಲೋಪವಾಗಿದೆ. ಇಲ್ಲಿ 'ಕಮ್ಮಿ' ಮತ್ತು 'ಕಡಿಮೆ' ಎನ್ನುವ ಎರಡೂ ಪದಗಳೂ ಬಳಕೆಯಾಗುತ್ತಿರುವುದು ಒಂದು ವಿಶೇಷ.

ಉದಾ :– ಅದನ್ನ ಕಟ್ಟಾಕ ಕಮ್ಮಿ ಅಂದ್ರು ಒಂದು ಲಕ್ಸ ಬೇಕು.

೨೩. ಕಾಟಿಗರು :–

ಬರಹದ ಕನ್ನಡದಲ್ಲಿ 'ಕೆಳವರ್ಗ' ಎಂದು ಉಚ್ಛಾರಣೆಗೊಳ್ಳುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಕಾಟಿಗರು' ಎಂದು ಉಚ್ಛಾರಣೆಗೊಳ್ಳುತ್ತಿದೆ. ಮಾಂಸವನ್ನು ಕಡಿದು ಜೀವನ ನಡೆಸುವವರನ್ನು ತೆಲುಗಿನಲ್ಲಿ 'ಕಟ್ಟುಗವಾಳ್ಳು' ಎಂದು ಬಳಕೆಯಲ್ಲಿದೆ. ಅದೇ ಪದ ಬಳ್ಳಾರಿ ನಗರ ಕನ್ನಡದಲ್ಲಿ ಕೆಳವರ್ಗದ ಜನಕ್ಕೆ

ಸಂಬೋಧಿಸುತ್ತಾರೆ. 'ಕಾಟಿಗರು' ಎಂದರೆ ಹಿಂಸೆಯನ್ನು ಮಾಡುವವರು. ಮಾಂಸವನ್ನು ತಿನ್ನುವವರು ಎನ್ನುವ ಅರ್ಥದಲ್ಲಿ ಬಳಕೆಯಾಗುತ್ತಿದೆ.

ಉದಾ :– ಕಾಟಿಗರೆಲ್ಲ ಸೇರಿಕೊಂಡು ಇವೊತ್ತು ಬ್ಯಾಟಿಗೆ ಹೋಗ್ಯಾರಂತೆ.

೨೪. ಕ್ವಾ :– ಬರಹದ ಕನ್ನಡದಲ್ಲಿ 'ತೆಗೆದು ಕೊ' ಎಂಬ ಪದಕ್ಕೆ ಬಳ್ಳಾರಿ ನಗರದ ಭಾಷಿಕರಲ್ಲಿ 'ಕ್ವಾ' ಎಂಬ ಪದ ಉಚ್ಚಾರಣೆಯಲ್ಲಿದೆ. ಪಡೆದುಕೊಳ್ಳುವ ಒಂದು ಕ್ರಿಯೆಗೆ 'ಕ್ವಾ' ಎಂದಷ್ಟೆ ಇರುವ ಈ ಪದದ ಉಚ್ಚಾರಣೆ ತುಂಬ ವೈಶಿಷ್ಟ್ಯೆಯಾಗಿದೆ, ಇಂತಹ ಹಲವು ಪದಗಳು ಬಳ್ಳಾರಿ ನಗರ ಭಾಷಿಕರಲ್ಲಿ ಚಾಲ್ತಿಯಲ್ಲಿವೆ. ಕ್ವಾಪ, ಕ್ವಾರ, ಕ್ವಾಲೆ, ಕ್ವಾ ಅಜ್ಜ ಕ್ವಾಮಗ..... ಎಂಬ ಉಚ್ಚಾರಣೆಗಳುಂಟು

ಉದಾ :– ಅವತ್ತು ಕ್ವಾ, ಕ್ವಾ ಅಂದ್ರು ಇಸ್‌ಗೊಲಿಲ್ಲ ಯಾಕ ?

೨೫. ಕಾಯಿಪಲ್ಯ :– ತರಕಾರಿ ಮೂಲತಃ ಉರ್ದು ಶಬ್ದವಾದರೂ ಉರ್ದು ಪ್ರಭಾವ ಹೆಚ್ಚಾಗಿರುವ ಉತ್ತರ ಕರ್ನಾಟಕ ಪ್ರಾಂತ್ಯದಲ್ಲಿ 'ಕಾಯಿಪಲ್ಯ' ಎಂದು ಉಚ್ಚಾರಣೆಯಲ್ಲಿದೆ. ಮತ್ತು ರಸ್ತೆಯನ್ನು ದಾರಿ, ರೋಡು ಎಂದು ಉಚ್ಚರಿಸುತ್ತಾರೆ. ಹಾಗೆಯೆ ಬೆಳಿಗ್ಗೆ ಎದ್ದ ಕೂಡಲೇ ಹಲ್ಲುಜ್ಜು ಎಂದು ಹೇಳುವುದಿಲ್ಲ. ಹಲ್ಲು ತಿಕ್ಕೊಂಡು ಕೈ ಕಾಲ್ಮುಕ ತೊಳ್ಕ ಎಂದು ಸಂಭೋದಿಸುತ್ತಾರೆ.

ಉದಾ :– ಅಂಗಡಿಲಿಂದ ಕಾಯಿಪಲ್ಯ ತಂದು ಇದನ್ನ ಮಾಡಿಡು.

೨೬. ಕುನೆಮ್ಮನಂಗ :– ಬರಹದ ಕನ್ನಡದಲ್ಲಿ 'ಮುದ್ದಾಗಿ' ಎನ್ನುವುದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಕುನೆಮ್ಮನಂಗ' ಎನ್ನುವ ಪದವು ಬಳಕೆಯಲ್ಲಿದೆ. ಈ 'ಕುನೆಮ್ಮನಂಗ' ಎನ್ನುವ ಪದವು ತೆಲುಗಿನ ಪ್ರಭಾವದಿಂದ ಬಳ್ಳಾರಿ ನಗರ ಕನ್ನಡದಲ್ಲಿ ಬಳಕೆಗೊಳ್ಳುತ್ತಿದೆ. ಏಕೆಂದರೆ 'ಮುದ್ದಾಗಿ' ಎನ್ನುವುದಕ್ಕೆ ವ್ಯವಹಾರಿಕ ತೆಲುಗಿನಲ್ಲಿ 'ಕುನೆಮ್ಮಗ' ಎನ್ನುವ ಪದ ಬಳಕೆಯಲ್ಲಿದೆ. ಆದ್ದರಿಂದ ಬಳ್ಳಾರಿ ನಗರ ಕನ್ನಡದಲ್ಲಿ 'ಕುನೆಮ್ಮನಂಗ' ಎನ್ನುವ ವಿಶಿಷ್ಟ ಪದ ಉಚ್ಚಾರಣೆಯಲ್ಲಿದೆ.

ಉದಾ :– ಆ ಕೂಸು ಎಷ್ಟು ಕುನೆಮ್ಮನಂಗ ಅಯ್‌ತೆ ನೋಡು.

೨೭. ಕುಂದ್ರು /ಕುಂತ್ಗ :– ಬರಹದ ಕನ್ನಡದಲ್ಲಿ 'ಕುಳಿತುಕೊ' ಎನ್ನುವ ಈ ಪದಗಳು ಬಳ್ಳಾರಿ ನಗರ ಕನ್ನಡದಲ್ಲಿ 'ಕುಂದ್ರು' 'ಕುಂತ್ಗ' ಎಂದು ಬಳಕೆಯಾಗುತ್ತಿದೆ. ಅದೇ ರೀತಿ 'ನಿಂತುಕೊಳ್ಳು' ಎನ್ನುವುದಕ್ಕೆ 'ನಿಂದ್ರು' 'ನಿಂತ್ಕೊ' ಎನ್ನುವ ಪದಗಳು ಬಳಕೆಯಾಗುತ್ತಿವೆ.

ಉದಾ :– ಕುಂತ್ಗ ಕುಂತ್ಗಅಂದ್ರು , ನಾನೇ ಕೆಲ್ಸ ಅಯ್‌ತಂತ ಬಂದೆ.

೨೮. ಕೂಳ್‌ಬಾತ್ಗ :– ಬರಹದ ಕನ್ನಡದಲ್ಲಿ 'ಕೂಳ್' ಅಂದರೆ 'ಅನ್ನ' ಎಂದರ್ಥ, ಇದು ಹಳೆಗನ್ನಡದ ಪದ, 'ಬಾತ್ಗ' ಎಂದರೆ ಊದಿಕೊಂಡವನು ಬಾವು ಹೊಂದಿದವನು ಎಂಬ ಅರ್ಥಗಳುಂಟು, ಇಲ್ಲಿ 'ಕೂಳ್‌ಬಾತ್ಗ' ಎಂದರೆ ಅತಿ ಆಹಾರ ಸೇವಿಸುವವನನ್ನು ಕುರಿತು ಅಸಹ್ಯ ಪಟ್ಟುಕೊಳ್ಳುವ ಮಾತಾಗಿ ಉಚ್ಚಾರಣೆಗೊಳ್ಳುತ್ತಿದೆ. ಹಳೆಗನ್ನಡದ 'ಕೂಳ್' ಎಂಬ ಪದ ಚಾಲ್ತಿಯಲ್ಲಿ ಇರುವುದರಿಂದ ಬಳ್ಳಾರಿ ನಗರದಲ್ಲಿ ಕನ್ನಡ ಭಾಷೆ ತನ್ನ ಮೂಲರೂಪವನ್ನು ಉಳಿಸಿಕೊಂಡಿದೆ ಎಂದು ಹೇಳಬಹುದು.

ಉದಾ :– ಅವ್‌ನು ಊಟಿಲ್ಲಂದ್ರೆ ತಡ್‌ಕನ್‌ಲ್ಲ ಕೂಳ್‌ಬಾತ್ಗ.

೨೯. ಕೆ.ಟಿ. :– ಬಳ್ಳಾರಿ ನಗರ ಕನ್ನಡದಲ್ಲಿ ವಿಶಿಷ್ಟವಾಗಿರತಕ್ಕಂತಹ ಪದ ಈ 'ಕೆ.ಟಿ.' ಹಳ್ಳಿಯ ಚಹಾದಂಗಡಿಗಳಿಗೆ ಹೋಗಿ ಗಮನಿಸಿದರೆ ಎಲ್ಲಾ ವಯಸ್ಸಿನ ಪುರುಷರೂ ಮತ್ತು ಸ್ತ್ರೀಯರು ಹೋಟೆಲುಗಳಿಗೆ ಹೋಗಿ ಒಂದು 'ಕೆ.ಟಿ.' ಕೊಡು ಎಂದು ಸಂಬೋಧನೆ ಮಾಡುತ್ತಾರೆ. 'ಕೆ.ಟಿ.' ಅಂದರೆ ಏನು ಎಂದು ಸೂಕ್ಷ್ಮವಾಗಿ ಗಮನಿಸಿದರೆ ಕುತೂಹಲವುಂಟು ಮಾಡುವಂತಹ ವಿಚಾರವಾಗಿದೆ.

'ಕಡಕ್' ಎಂದರೆ Strong ಎಂದು ಅರ್ಥ. ಇದು ಬಾದಾಮಿ ಉಪಭಾಷೆಯಲ್ಲಿ ಬಳಕೆಯಾಗುತ್ತಿದೆ. ಮರಾಠಿಯಲ್ಲಿ ಕಡಕ್ ಎಂದರೆ ಬಿಸಿ (Hot) ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ. 'ಟೀ' ಎಂದರೆ 'ಚಹಾ' ಎಂದು ಅರ್ಥ. 'ಕಡಕ್ ಟೀ' ಕೊಡು ಎನ್ನುವ ಅರ್ಥದಲ್ಲಿ 'ಕೆ.ಟಿ.' ಕೊಡು ಎನ್ನುವ ಅರ್ಥದಲ್ಲಿ 'ಕೆ.ಟಿ.' ಕೊಡು ಎಂದು ಬಳ್ಳಾರಿ ಕನ್ನಡದಲ್ಲಿ ಬಳಸುತ್ತಿರಬಹುದು.

(ವಾರಿ ಜಿ.ಎಂ, ೨೦೦೦, ಹಳಗನ್ನಡ ವ್ಯಾಕರಣ ಮತ್ತು ಬಾದಾಮಿ ಉಪಭಾಷೆ, ಪುಟ ೯೫)

೩೦. ಕೊಂಬ :- ಬರಹದ ಕನ್ನಡದ 'ಕಂಬ' ಎಂಬ ಪದದ ಬದಲಿಗೆ ಬಳ್ಳಾರಿ ನಗರದಲ್ಲಿ 'ಕೊಂಬ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇದು ಬಳ್ಳಾರಿ ನಗರದಲ್ಲಿ ತೆಲುಗು ಭಾಷೆಯ ಪ್ರಭಾವದಿಂದ 'ಕ' ವೂ 'ಕೊ' ಪಡೆದಿರಬೇಕು, ಹಾಗಾಗಿ ಕಂಬ>ಕೊಂಬ ಆಗಿದೆ. ಇಂತಹ ಇನ್ನು ಅನೇಕ ಪದಗಳನ್ನು ಗುರುತಿಸಬಹುದು, ಕಲ್ಲು>ಕೊಲ್ಲು, ಕಬ್ಬಿಣ>ಕೊಬ್ಬಿಣ, ಗಬ್ಬು>ಗೊಬ್ಬು,
ಉದಾ :- 'ನಿಮ್ ಮನಿ ಕೊಂಬ ರವುಟು ಬಾಗೆತೆ'

೩೧. ಕೊಡಪಾನ/ಅರವಿ :- ಬರಹದ ಕನ್ನಡದಲ್ಲಿ 'ಬಿಂದಿಗೆ' ಎನ್ನುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಕೊಡಪಾನ' ಮತ್ತು 'ಅರವಿ' ಎಂದು ಬಳಕೆಗೊಳ್ಳುತ್ತಿದೆ.
ಉದಾ :- ನೀರ್ ಬಂದವು ಕೊಡಪಾನ ತಗಂಡ್‌ಬೋಗು.

೩೨. ಕೋರ್ :- ಬರಹದ ಕನ್ನಡದಲ್ಲಿ 'ಸಾಗುವಳಿ' ಎನ್ನುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಕೋರ್' ಎಂದು ಬಳಕೆಯಾಗುತ್ತಿದೆ.
ಉದಾ :- ಕೋರ್ ಮಾಡಿದ್ರು ಕೊಡ್ಲಿ ತಗಂಡ್ರು ಅಂತರಲ್ಲ ಅಂಗಾತು.

೩೩. ಕೌದಿ :- ಹಳೆಯ ಬಟ್ಟೆಗಳಿಂದ ತಯಾರಿಸಿದ 'ರಗ್ಗು' ಇದನ್ನು ಹಾಸಿಕೊಳ್ಳಬಹುದು, ಹೊದ್ದುಕೊಳ್ಳಬಹುದು. ಈ 'ಕೌದಿ' ಯನ್ನು ಹೊಲೆದು ಕೊಡುವವರು ಜೋಗಿ ಜನಾಂಗದವರು. ಇತ್ತೀಚಿಗೆ 'ಕೌದಿ' ಯನ್ನು ಉಪಯೋಗಿಸುವವರೂ ಹೊಲೆಯುವುದನ್ನು ಕಲಿತಿದ್ದಾರೆ. 'ಕೌದಿ' ಬಳ್ಳಾರಿ ನಗರ ಕನ್ನಡದಲ್ಲಿ ಬಳಕೆಯಾಗುವ ವಿಶಿಷ್ಟ ಪದ.
ಉದಾ :- ಮಗಗ ಕೌದಿ ಮೈಲೆ ಹಾಕು.

೩೪. ಕ್ವಾಮಟ್ರು :- ಬರಹದ ಕನ್ನಡದಲ್ಲಿ 'ಕರಿ' ಕಪ್ಪುಬಣ್ಣದವರು ಪದಕ್ಕೆ ಬಳ್ಳಾರಿ ನಗರದಲ್ಲಿ ಒಂದು ಸಂಕುಚಿತ ಅರ್ಥ ಹೊಂದಿ 'ಕ್ವಾಮಟ್ರು' ಎಂದು ಉಚ್ಚಾರಣೆಯಲ್ಲಿದೆ, 'ಕ್ವಾಮಟ್ರು' ಎಂದರೆ ವಿಶೇಷವಾಗಿ ವೈಶ್ಯ ಜನಾಂಗಕ್ಕೆ ಅನ್ವಯಿಸಿ ಹೇಳಲಾಗುತ್ತಿದೆ. ಈ ಶೆಟ್ಟಿ ಜನಾಂಗ ಸಾಮಾನ್ಯವಾಗಿ ಕಪ್ಪು ಬಣ್ಣ ಹೊಂದಿದವರಾಗಿರುವುದರಿಂದ ಕಪ್ಪು>ಕೊಪ್ಪು ಆಗಿ ನಂತರ 'ಕ್ವಾಮಟ್ರು' ಆಗಿ ಉಚ್ಚಾರಣೆಗೊಳ್ಳುತ್ತಿದೆ.
ಉದಾ :- ಆ ಕ್ವಾಮಟ್ರು ಮನ್ಯಾಗ ಪೂಜಿ ಇಟ್‌ಗೊಂಡರಂತೆ

೩೫. ಗಡಗಡ, ಬಡಬಡ,ಬಿರಿಬಿರಿ:- ಇವು ಬಳ್ಳಾರಿ ನಗರ ಕನ್ನಡದ ಉಚ್ಚಾರಣೆಯಲ್ಲಿವೆ. ಈ ಪದಗಳೆಲ್ಲ ತೀವ್ರಾರ್ಥವನ್ನು ತಿಳಿಸುವ ಅವ್ಯಯಗಳಾಗಿ ಬಳಕೆಯಲ್ಲಿವೆ.
ಉದಾ :- ಪೊತ್ತು ಮುಗಾಕತೇತಿ ಗಡಗಡಬಾ/ ಎಲ್ರು ಕಲ್ತು ಬಡಬಡ್ ಮುಗಿಸಿದ್ವಿ./ ಬಿರಿಬಿರಿ ಬಾ ಟೇಮ್ ಅಕ್ಕೆತಿ.

೩೬. ಗಡಾರೆ :–

ಬರಹದ ಕನ್ನಡದಲ್ಲಿ 'ಹಾರೆ' ಎನ್ನುವ ಪದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಗಡಾರೆ', 'ಗಡಾರಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇದು ತೆಲುಗಿನ ಪ್ರಭಾವದಿಂದ ಬಂದಿರಬಹುದು.

ಉದಾ :– ನಿಮ್ ಮನ್ಯಾಗ ಗಡಾರೆ ಇದ್ರ ಕೊಡ್ರಿ, ಕೊಲ್ಲು ಎಬ್ಬಿಸಿ ಕೊಡ್ತಿನಿ.

೩೭. ಗಣ್ ಮಕ್ಳು :–

ಬರಹದ ಕನ್ನಡದಲ್ಲಿ 'ಗಂಡುಮಕ್ಕಳು' ಎನ್ನುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಗಣ್‌ಮಕ್ಳು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇಲ್ಲಿ 'ಡ' ಕಾರ ಲೋಪವಾಗಿ ಅದೇ ವರ್ಗದ ಪಂಚಮಾಕ್ಷರ ಆದೇಶವಾಗಿ ಉಚ್ಚಾರಣೆ ಆಗುತ್ತಿರುವುದು ವೈಶಿಷ್ಟ್ಯವಾಗಿದೆ.

ಉದಾ :– ಆ ದೇವ್ರುಗೆ ಗಣ್‌ಮಕ್ಳು ಮಾತ್ರಂತೆ ಹೋಗದು.

೩೮. ಗಲ್ಗಂಟೆ :–

ಎತ್ತಿನ ಕೊರಳಿಗೆ ಕಟ್ಟುವ ಗಂಟೆಯನ್ನು 'ಗಲ್ಗಂಟೆ' ಎಂದು ಕರೆಯುತ್ತಾರೆ. ಇದೇ ಗಂಟೆ ದೇವರ ಗುಡಿಯಲ್ಲಿದ್ದರೆ ಗಲ್ಗಂಟೆ ಎಂದು ಬಳಕೆಯಲ್ಲಿ ಇಲ್ಲ. ಬರೆ 'ಗಂಟೆ' ಎಂದು ಉಚ್ಚರಿಸುತ್ತಾರೆ. ಮದುವೆ ಮತ್ತು ಜಾತ್ರೆಯ ಸಂದರ್ಭಗಳಲ್ಲಿ ಎತ್ತುಗಳಿಗೆ ಸಿಂಗಾರಮಾಡಿ 'ಗಲ್ಗಂಟೆ' ಗಳನ್ನು ಕಟ್ಟಿಕೊಂಡು ಹೋಗುತ್ತಾರೆ. ದಾರಿಯಲ್ಲಿ ಎತ್ತುಗಳು ಓಡುವಾಗ ಗಂಟೆಗಳು 'ಗಲ್ ಗಲ್' ಎಂಬ ಶಬ್ದ ಕೇಳಿ ಬರುತ್ತದೆ. ಗಳಲಿಗೆ ಕಟ್ಟುವ ಗಂಟೆ ಮತ್ತು ಈ 'ಗಲ್ ಗಲ್' ಎನ್ನುವ ಅನುಕರಣೆ ಶಬ್ದದಿಂದ 'ಗಲ್ಗಂಟೆ' ಎಂಬ ಹೆಸರು ಬಂದಿರಬಹುದು.

ಉದಾ :– ಬೆಕ್ಕಿಗೆ ಗಲ್ಗಂಟೆ ಕಟ್ಟೋರ್ಯಾರು.

೩೯. ಗಿರ್ಕಿ ಕಾಲ್ಮರಿ :–

ಬರಹದ ಕನ್ನಡದಲ್ಲಿ 'ಶಬ್ದ ಮಾಡುವಂತ ವಿಶೇಷ ಚಪ್ಪಲಿ' ಎಂದು ಅರ್ಥ. 'ಚಪ್ಪಲಿ' ಎನ್ನುವ ಪದವನ್ನು 'ಕಾಲ್ಮರಿ' ಎಂದು ಉಚ್ಚಾರಣೆ ಮಾಡುವುದು ವಿಶೇಷ. ಅದರ ಜೊತೆಗೆ 'ಗಿರ್ಕಿ ಕಾಲ್ಮರಿ' ಎನ್ನುವ ಪದ ಇನ್ನೂ ವಿಶಿಷ್ಟವಾಗಿದೆ. ಈ ಚಪ್ಪಲಿಯನ್ನು ಹಾಕಿಕೊಂಡು ನಡೆಯುವಾಗ 'ಗಿರಕ್ ಗಿರಕ್' ಎನ್ನುವ ಶಬ್ದ ಬರುತ್ತದೆ. 'ಗಿರ್ ಗಿರ್' ಎನ್ನುವ ಶಬ್ದ ಬಳ್ಳಾರಿ ನಗರ ಕನ್ನಡದಲ್ಲಿ ಬಳಕೆಗೊಳ್ಳುತ್ತಿರಬಹದು.

ಉದಾ :– ಅವ್‌ನು ಯಾ ಮದ್ವಿಗೆ ಹೋದ್ರು ಗಿರ್ಕಿ ಕಾಲ್ಮರಿ ಹಾಕ್ಕೊಂಡು ಹೋಗದು.

೪೦. ಚಂತಾಂಡು/ಚಮ್‌ತಾಂಡು :- ಬರಹದ ಕನ್ನಡದಲ್ಲಿ 'ಬಹಿರ್ದೆಸೆ' ಎಂಬ ಪದಕ್ಕೆ ಬಳ್ಳಾರಿ ನಗರ ಭಾಷಿಕರು 'ಚವ್‌ತಾಂಡು' ಎಂದು ಬಳಕೆಮಾಡುತ್ತಾರೆ. ಮಲವಿಸರ್ಜನೆಗಾಗಿ ಚಂಬಿನಲ್ಲಿ ನೀರನ್ನು ಒಯ್ಯುವುದಕ್ಕೆ 'ಚಮ್‌ತಾಂಡು' ಎಂದು ವಿಶೇಷವಾಗಿ ಬಳಕೆಯಾಗುತ್ತದೆ. ಚೆಂಬು> ಚೆಮ್, ತೆಗೆದುಕೊಂಡು>ತಾಂಡು ಆಗಿ ಉಚ್ಚಾರಣೆಗೊಳ್ಳುತ್ತದೆ.

ಉದಾ :- ನಾನ್ ಚಮ್‌ತಾಂಡು ಹೋಗಿ ಬಂದು ಬರ್ತೀನಿ ನಡಿ ಅಂದ್ರು

೪೧. ಚೊಮ್/ ಚೊಂಬು :- ಬರಹದ ಕನ್ನಡದಲ್ಲಿ ಈ ಪದಕ್ಕೆ 'ಚೆಂಬು' ಎಂದು ಅರ್ಥ. ಆದರೆ ಬಳ್ಳಾರಿ ನಗರ ಕನ್ನಡದಲ್ಲಿ 'ಚೊವ್' 'ಚೊಂಬು' ಎಂದು ಬಳಕೆಯಾಗುತ್ತಿದೆ. ಪದಾದಿಯ 'ಎ' ಕಾರವು 'ಒ' ಕಾರವಾಗಿದೆ.

ಉದಾ :- ಒಂದ್ ಚೊಮ್ ತುಂಬ ನೀರ್ ಕೊಡು.

೪೨. ಜಗ್ಗಿ :- ಬರಹದ ಕನ್ನಡದಲ್ಲಿ 'ಬಹಳ' ಎನ್ನುವ ಅರ್ಥದಲ್ಲಿ ಈ ಪದವು ಬಳಕೆಯಲ್ಲಿದೆ. ಆದರೆ ಬಳ್ಳಾರಿ ನಗರ ಕನ್ನಡದಲ್ಲಿ ಈ ಪದವನ್ನು ಭಿನ್ನವಾಗಿ ಬಳಕೆ ಮಾಡುವುದನ್ನು ಕಾಣಬಹುದು. 'ಜಗ್ಗಿ, ಸ್ಯಾನ, ತಪಾತರ, ಬರ್ತಿ' ಈ ಎಲ್ಲಾ ಪದಗಳು 'ಬಹಳ' ಎನ್ನುವ ಅರ್ಥವನ್ನೇ ಸೂಚಿಸುತ್ತವೆ. ಈ ರೀತಿ ವಿಭಿನ್ನ ಪದಗಳು ಬಳಕೆಗೊಳ್ಳುತ್ತಿರುವುದು ಬಳ್ಳಾರಿ ವ್ಯವಹಾರಿಕ ಕನ್ನಡದ ಉಚ್ಚಾರಣೆಯ ವೈಶಿಷ್ಟ್ಯವಾಗಿದೆ.

ಉದಾ :- ಈ ಜಾತ್ರೆಗೆ ಜಗ್ಗಿ ಜನ ಸೇರ್‌ತೇತಿ.

೪೩. ಜಾಲಿ :- ಬರಹದ ಕನ್ನಡದಲ್ಲಿ 'ಜಾಲಿ' ಎಂದರೆ ಬಲೆಗಾರ, ಮೀನುಗಾರ, ಜಾಲವುಳ್ಳ, ಎಂಬ ಅರ್ಥಗಳುಂಟು ಆದರೆ ಬಳ್ಳಾರಿ ನಗರ ಭಾಷಿಕರಲ್ಲಿ 'ಜಾಲಿ' ಎಂದರೆ 'ಮಜಮಾಡು', 'ಆನಂದಪಡು' ಎಂದು ಉಚ್ಚಾರಣೆಗೊಳ್ಳುತ್ತದೆ. ಆಡುನುಡಿಯಲ್ಲಿ 'ಜಾಲಿ'-ಎಂದರೆ ಮುಳ್ಳು, ಮುಳ್ಳುಗಳುಳ್ಳ ಗಿಡ, ಎಂಬ ಅರ್ಥಗಳಿವೆ. ಆದರೆ ಬಳ್ಳಾರಿ ನಗರದ ಭಾಷಿಕರಲ್ಲಿ 'ಜಾಲಿ' ಎಂಬ ಪದ 'ಸಿರಿವಂತಿಕೆ' ಎಂಬಂತೆಯೂ ಬಳಕೆಯಲ್ಲಿರುವುದು ಗಮನಿಸುವಂತಹ ಅಂಶ

ಉದಾ :- ೧. ಆತ ಜೀವನದಲ್ಲಿ ಜಾಲಿಯಾಗಿದ್ದಾನೆ.

೨. ಪಿಕ್‌ನಿಕ್ ಹೋದಾಗ ತುಂಬ ಜಾಲಿ ಮಾಡ್ವಿ

೪೪. ಜಿಗೂದು :- ಬರಹದ ಕನ್ನಡದಲ್ಲಿ ಈ ಪದಕ್ಕೆ 'ಜೋರಾಗಿ' ಎಂದು ಬಳಕೆಯಲ್ಲಿದೆ. ಆದರೆ ಬಳ್ಳಾರಿ ನಗರ ಕನ್ನಡದಲ್ಲಿ 'ಜಿಗೂದು' ಆಗಿ ಉಚ್ಚಾರಣೆಗೊಳ್ಳುತ್ತಿದೆ.

ಉದಾ :- ಆ ದಿಬ್‌ದಿಂದ ಜಿಗೂದು ಹಾರು

೪೫. ಜಮ :- ಬಳ್ಳಾರಿ ನಗರ ಕನ್ನಡದ ಉಚ್ಚಾರಣೆ ಪ್ರಕ್ರಿಯೆಯಲ್ಲಿ ವರ್ಣಪಲ್ಲಟ ಕಂಡುಬರುತ್ತದೆ. 'ಜಮ' ಪದವು ಬರಹದ ಕನ್ನಡದಲ್ಲಿ 'ಮಜ' ಎಂಬಾರ್ಥದಲ್ಲಿ ಬಳಕೆಯಲ್ಲಿದೆ. ಈ ಮಾದರಿಯ ವರ್ಣ ಪಲ್ಲಟ ಬಳ್ಳಾರಿ ನಗರ ಕನ್ನಡದ ಮತ್ತೊಂದು ವೈಶಿಷ್ಟ್ಯ.

ಉದಾ :- ಹಬ್ಬದಾಗ ಮೂರ್ ದಿನಾನು ಜಮ ಇತ್ತು.

೪೬. ಟೆಂಗಿನಕಾಯಿ/ಟೆಂಕಾಯಿ :- ಬರಹದ ಕನ್ನಡದಲ್ಲಿ 'ತೆಂಗಿನಕಾಯಿ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಟೆಂಗಿನಕಾಯಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇಲ್ಲಿ 'ತ' ಕಾರವು ಲೋಪವಾಗಿ 'ಟ' ಕಾರವು ಆದೇಶವಾಗಿ ಬಂದಿದೆ. ತೆಲುಗಿನಲ್ಲಿ 'ತೆಂಗಿನ ಕಾಯಿ' ಯನ್ನು 'ಟೆಂಕಾಯಿ' ಎಂದು ಕರೆಯುತ್ತಾರೆ. ಇಲ್ಲಿ ತೆಲುಗಿನ 'ಟೆಂ' ಮತ್ತು 'ಕಾಯಿ' ಮಧ್ಯದಲ್ಲಿ ಕನ್ನಡದ 'ಗಿನ' ಸೇರಿಕೊಂಡು 'ಟೆಂಗಿನಕಾಯಿ' ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ನಮ್ ಟೆಂಗಿನಕಾಯಿ ತೊಟದಾಗೂ ಕರಿಪಾಕು ಹಾಕಿವಿ.

೪೭. ತಂಗಡಗಿಡ :- 'ಅಮರೆಗಿಡ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ತಂಗಡಗಿಡ' ಎಂದು ಬಳಕೆಗೊಳ್ಳುತ್ತಿದೆ. ತೆಲುಗಿನ ಪ್ರಭಾವದಿಂದ ಬಳ್ಳಾರಿ ನಗರ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿದೆ. ಏಕೆಂದರೆ ತೆಲುಗಿನಲ್ಲಿ 'ಅಮರೇಗಿಡ' ವನ್ನು 'ತಂಗಡ ಚೆಟ್ಟು' ಎಂದು ಕರೆಯುತ್ತಾರೆ.

ಉದಾ :- ವೊಟ್ಟಿಬ್ಯಾನಿ ಇದ್ದಾಗ 'ತಂಗಡಗಿಡ' ಕುಡಿ ತಿನ್ನಬೇಕು.

೪೮. ತಡಿ :- ಬರಹದ ಕನ್ನಡದಲ್ಲಿ 'ಹಾಸಿಗೆ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ತಡಿ' ಎಂದು ಬಳಕೆಯಾಗುತ್ತಿದೆ. ಈ 'ತಡಿ' ಎನ್ನುವ ಪದವು ಸಂದರ್ಭಕ್ಕೆ ತಕ್ಕಂತೆ ಅರ್ಥಬೇಧವನ್ನು ಪಡೆದುಕೊಂಡಿದೆ. 'ಹಸಿಬಟ್ಟೆ' ಎನ್ನುವುದಕ್ಕೆ 'ತಡಿ ಬಟ್ಟೆ' ಎಂದು ಬಳಸುವುದು ಬಳ್ಳಾರಿಯ ನಗರ ಕನ್ನಡದ ವೈಶಿಷ್ಟ್ಯ.

ಉದಾ :- ಆ ಮನಿ ದೇವ್ರುನ್ಯಾರು ತಡಿಮ್ಯಲ ಮಲಗಲ್ಲ/ನಾನೂ ಬರ್ತಿನಿ ತಡಿ.

೪೯. **ತಲೆಮಟ್ಟಿ :-** ಬರಹದ ಕನ್ನಡದಲ್ಲಿ 'ತಲೆದಿಂಬು' ಎನ್ನುವುದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ತಲೆಮಟ್ಟಿ' ಎಂದು ಉಚ್ಚಾರಣೆಯಾಗುತ್ತಿದೆ. ಈ ಪದವು ಕೂಡ್ಲಿಗಿಯ ಸುತ್ತಮುತ್ತ ಹಳ್ಳಿಗಳಲ್ಲಿ ಇರುವುದನ್ನು ನಾವು ಗಮನಿಸಬಹುದು ಇದು, 'ದಿಂಬು' ಎನ್ನುವ ಪದಕ್ಕೆ ಬದಲಾಗಿ 'ಮಟ್ಟಿ' ಎನ್ನುವ ವಿಶಿಷ್ಟ ಪದವು ಬಳಕೆಯಲ್ಲಿದೆ. 'ತಲೆಗುಂಬು' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ ಬಳಕೆಯಲ್ಲಿದೆ.

ಉದಾ :- ಕುಂತ್ಗಬೇಕಾದ್ರ ಬೆನ್ನಿಗೆ ಒಂದು ತಲೆಮಟ್ಟಿ ಇಟ್ಗ.

೫೦. **ತೆಪರ :-** ಬರಹದ ಕನ್ನಡದಲ್ಲಿ ಅಜ್ಞಾನಿ, 'ತಿಳುವಳಿಕೆ ಹೀನ', ಎಂಬ ಪದಕ್ಕೆ ಬಳ್ಳಾರಿ ನಗರ ಭಾಷಿಕರಲ್ಲಿ 'ತೆಪರ' ಎಂದು ಉಚ್ಚಾರಣೆಗೊಳ್ಳುತ್ತದೆ. 'ತೆಪ್ಪಗೆ' ಎಂದರೆ 'ಮೌನವಾಗಿ' ಎಂಬರ್ಥದಲ್ಲಿ ಒಂದು ಶಬ್ದ ಬಳಕೆಗೊಳ್ಳುತ್ತಿದೆ. ಇದೇ ಅರ್ಥದಲ್ಲಿ 'ತೆಪರ' ಎಂದರೆ ಕಡಿಮೆ ತಿಳುವಳಿಗೆ, ತಿಳುವಳಿಕೆಯಲ್ಲಿ ಸ್ವಲ್ಪ ಕಡಿಮೆ ಎಂಬರ್ಥದಲ್ಲಿ ಇದರ ಉಚ್ಚಾರಣೆ ಬಂದಿರಬೇಕು.

ಉದಾ :- ತೆಪುರುಗ ಅಷ್ಟು ತಿಳಿದಿರಕ್ಕಿಲ್ಲ, ಅಷ್ಟೆಲ್ಲ ಓದ್ಯಾನ.

೫೧. **ತೊಗೆ :-** ಬರಹದ ಕನ್ನಡದಲ್ಲಿ 'ಬೇಳೆ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ತೊಗೆ' ಎಂದು ಬಳಕೆಯಾಗುತ್ತಿದೆ. ಇದರ ಮೂಲ ಪದ 'ತೊವ್ವೆ' ಇದು ಬಳ್ಳಾರಿ ಬ್ರಾಹ್ಮಣರ ಕನ್ನಡದಲ್ಲಿ ವಿಶೇಷವಾಗಿ ಬಳಕೆಯಾಗುತ್ತಿದೆ.

ಉದಾ :- ರೊಟ್ಟಿ ತೊಗೆಬಾನ, ಅನ್ನಸಾರು ಮಾಡಿನಿ ಬರ್ರಿ.

೫೨. **ತೊಟ್ಗು :-** ಬರಹದ ಕನ್ನಡದಲ್ಲಿ 'ಸ್ವಲ್ಪ' ಎನ್ನುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ತೊಟ್ಗು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ ಪದ ೧೨ ನೇ ಶತಮಾನದಲ್ಲಿ ಅಂಬಿಗರ ಚೌಡಯ್ಯನ ವಚನದಲ್ಲಿಯೂ ಬಳಕೆಯಾಗಿದೆಯೆಂಬುದು ಗಮನಿಸಿದರೆ ಬಳ್ಳಾರಿ ನಗರ ಕನ್ನಡದ ಪ್ರಾಚೀನತೆಯು ತಿಳಿಯುತ್ತದೆ.

ಉದಾ :- ಹಾಲಿಗಿ ಹಾಕಾಕ ತೊಟ್ಗು ಯಪ್ಪಿದ್ರೆ ಕೊಡ್ರಿ.

೫೪. ತೊರ್ಗ–ಕಗ್ಗ–ಕಡ್ಡ :–

ಬರಹದ ಕನ್ನಡದಲ್ಲಿ 'ದಡ್ಡ' ಎನ್ನುವುದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ತೊರ್ಗ–ಕಗ್ಗ–ಕಡ್ಡ' ಎನ್ನುವ ಪದಗಳು ಉಚ್ಚಾರಣೆಯಲ್ಲಿವೆ. ಈ ಮೂರು ಪದಗಳು ಬಳ್ಳಾರಿ ನಗರ ಕನ್ನಡದಲ್ಲಿರುವುದು ವೈಶಿಷ್ಟ್ಯ. ದಡ್ಡ ಪದದಲ್ಲಿ 'ದ' ಕಾರ ಲೋಪಗೊಂಡು 'ಕ' ಕಾರ ಆದೇಶವಾಗಿ ಬಂದು 'ಕಡ್ಡ' ಎಂದಾಗಿದೆ. 'ಕಡ್ಡ' ಎನ್ನುವ ಪದದಲ್ಲಿ 'ಡ' ಕಾರ ಲೋಪಗೊಂಡು ಸಜಾತಿಯ ಒತ್ತಕ್ಷರವಾದ 'ಗ್ಗ' ಕಾರ ಆದೇಶವಾಗಿ 'ಕಗ್ಗ' ಎಂದಾಗಿದೆ. 'ತೊರ್ಗ' ಎನ್ನುವ ಪದವೂ ವಿಶಿಷ್ಟವಾಗಿ ಬಳಕೆಯಲ್ಲಿದೆ.

ಉದಾ :– ಬಾಳ ತೊರ್ಗ, ಮಾತೇಕೇಳಲ್ಲ/ ಕಡ್ಡ ನನ್ನ ಮಗ ಇದ್ದಾಂಗ ಅದು ತೇಟ್ ಕಗ್ಗ ಮುಂಡೇದು.

೫೫. ತ್ವಾಟ :–

ಬರಹದ ಕನ್ನಡದಲ್ಲಿ 'ತೋಟ' ಎಂಬ ಪದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ತ್ವಾಟ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಪದಮಧ್ಯ ಪರಿಸರದಲ್ಲಿ 'ಅ' ಕಾರದ ಉಪಧ್ವನಿಯಾಗಿ 'ಅ್ವ' ಆಗಿ ಉಚ್ಚಾರಣೆಯಲ್ಲಿದೆ. ಇದು ಸಾಮಾನ್ಯವಾಗಿ ಕನ್ನಡದ ಎಲ್ಲಾ ಪ್ರಭೇದಗಳಲ್ಲಿಯೂ ಬಳಕೆಯಲ್ಲಿದೆ.

ಉದಾ :– ಇಗ ತ್ವಾಟಕ್ಕೆ ಉರ್ಲುಗಡ್ಡೆ ವೊಲುಕ್ಕೆ ನೀರಾಸಕ ಹೋದ್ರು

೫೬. ನಾದ್ ಇಲ್ದೋನ್ :–

'ನಾದ್ ಇಲ್ದೋನ್' ಎಂದರೆ ಜೀವನದ ವ್ಯವಸ್ಥೆಯಲ್ಲಿ 'ಕ್ರಮ ತಪ್ಪಿದವನು, ಶಿಸ್ತು ತಪ್ಪಿದವನು, ನಾಚಿಕೆ ಇಲ್ಲದೋನು' ಎನ್ನುವ ಅರ್ಥದಲ್ಲಿ 'ನಾದ್ ಇಲ್ದೋನ್' ಎನ್ನುವ ಪದ ಬಳ್ಳಾರಿ ನಗರ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿದೆ.

ಉದಾ :– ಅವನ್ ನಾದ್ ಇಲ್ದೋನ್ ಅವನ್ ಮಾತ ಬಿಟ್ಟಾಕು.

೫೭. ನಾದ್ರು :–

'ಹಜಾಮರು' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ನಾದ್ರು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ 'ನಾದ್ರು' ಮೂಲ ಪದ ನಾಯಿಂದ> ನಾಯಿದ> ನಾದ> ನಾದಿ> ನಾದ್ರು ಎಂದು ಬದಲಾವಣೆಗೊಂಡಿರಬಹುದು.

ಉದಾ :– ಕಣದಾಗಿಂದ ಬರಕರ ಹಂಗ ನಾದ್ರುನ ಕರ್‌ದು ಬಾ.

೫೮. ನಿಂತಗಮ್‌ತಾನ :- ಬರಹದ ಕನ್ನಡದಲ್ಲಿ 'ನಿಂತುಕೊಳ್ಳುತ್ತಾನೆ' ಎನ್ನುವುದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ನಿಂತಗಮ್‌ತಾನ' ಎಂಬ ಪದವು ಉಚ್ಚಾರಣೆಗೊಳ್ಳುತ್ತಿದೆ. 'ಗಮ್' ಎನ್ನುವ ವಿಶಿಷ್ಟ ರೂಪ ಬಳ್ಳಾರಿ ನಗರ ಕನ್ನಡದಲ್ಲಿ ಬಳಕೆಯಲಿದೆ. ಇದೇ ರೀತಿ 'ಕುಂತಗಮ್‌ತಾನ' ಎನ್ನುವ ಪದವೂ ಬಳಕೆಯಲ್ಲಿದೆ.

ಉದಾ :- ಗೂಟದ ಮ್ಯಗ ಹತ್ತಿ ನಿಂತಗಮ್‌ತಾನ ಬಿದ್ರೇಂಗ್ಹ.

೫೯. ಪಂತಿ :- ಬರಹದ ಕನ್ನಡದಲ್ಲಿ 'ಪಂಕ್ತಿ' ಪದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಪಂತಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇಲ್ಲಿ 'ಕ್' ಕಾರ ಲೋಪವಾಗಿದೆ ಇದು ಬಳ್ಳಾರಿ ನಗರ ತೆಲುಗು ಪರಿಸರದ ಪ್ರಭಾವದಿಂದ ಪಂಕ್ತಿ>ಪಂತಿ ಆಗಿರಬೇಕು.

ಉದಾ :- ಇನ್ನಂದು ಪಂತಿಲಿ ಉಣ್‌ವಂತಿ ಬಾ

೬೦. ಪಾಪಿಡಿ :- ಬರಹದ ಕನ್ನಡದಲ್ಲಿ ಈ ಪದಕ್ಕೆ 'ಬೈತಲೆ' ಎಂದು ಕರೆಯುತ್ತಾರೆ. ಆದರೆ ಬಳ್ಳಾರಿ ನಗರ ಕನ್ನಡದಲ್ಲಿ ಈ ಪದ 'ಪಾಪಿಡಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. ನೆರೆಯ ತೆಲುಗಿನ ಪ್ರಭಾವದಿಂದ ಈ ಪದ ಬಂದಿದೆ. ಏಕೆಂದರೆ ತೆಲುಗಿನಲ್ಲಿ 'ಪಾಪಿಡಿ' ಎಂದು ಬಳಕೆಯಲ್ಲಿದೆ. ಅದೇ ಪದ ಬಳ್ಳಾರಿ ನಗರ ಕನ್ನಡದಲ್ಲಿ 'ಪಾಪಿಡಿ' ಎಂದು ಉಚ್ಚಾರಣೆಗೊಳ್ಳುತ್ತಿದೆ.

ಉದಾ :- ಪಾಪಿಡಿ ಸರೀಗೆ ತಕ್ಕಾ

೬೧. ಪ್ಯಾಂಟ್ಗಿ :- ಬರಹದ ಕನ್ನಡದಲ್ಲಿ 'ಮೆಟ್ಟಲು' ಎಂದು ಕರೆಯುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಪ್ಯಾಂಟ್ಗಿ' ಎಂದು ಉಚ್ಚಾರಣೆಯಲ್ಲಿದೆ. ಬಾದಾಮಿ ಉಪಭಾಷೆಯಲ್ಲಿ 'ಪೌಂಟಣಗಿ' ಎಂದು ಬಳಕೆಯಲ್ಲಿದೆ. ಇದು ಬಳ್ಳಾರಿ ನಗರ ಕನ್ನಡದಲ್ಲಿ 'ಣ' ಕಾರ ಲೋಪವಾಗಿ 'ಪೌಂಟಗಿ, ಪ್ಯಾಂಟಗಿ, ಆಗಿರಬಹುದು.

ಉದಾ :- ಮೇಲಕ್ ಹೋಗಕು ಪ್ಯಾಂಟ್ಗಿ ಮಾಡ್ಯಾರೆ. ?

(ವಾರಿ ಜಿ.ಎಂ. ೨೦೦೦, ಹಳಗನ್ನಡ ವ್ಯಾಕರಣ ಮತ್ತು ಬಾದಾಮಿ ಉಪಭಾಷೆ, ಪುಟ ೯೯)

೬೨. ಪಿಳ್ಳೆ :- ಬರಹದ ಕನ್ನಡದಲ್ಲಿ 'ಹುಡುಗಿ' ಎಂದು ಉಚ್ಚಾರಣೆಗೊಂಡರೆ, ಬಳ್ಳಾರಿ ನಗರ ಕನ್ನಡದಲ್ಲಿ 'ಪಿಳ್ಳೆ' ಎಂದು ಉಚ್ಚಾರಣೆಗೊಳ್ಳುತ್ತಿದೆ. ತೆಲುಗಿನಲ್ಲಿ ಹುಡುಗಿಗೆ 'ಪಿಲ್ಲ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಆದ್ದರಿಂದ ತೆಲುಗಿನ ಪ್ರಭಾವದಿಂದ ಬಳ್ಳಾರಿ ನಗರ ಕನ್ನಡದಲ್ಲಿ 'ಪಿಳ್ಳೆ' ಎನ್ನುವ ಪದ ಉಚ್ಚಾರಣೆಗೊಳ್ಳುತ್ತಿರಬಹುದು.

ಉದಾ :- ಪಿಳ್ಳೆ ನೋಡಾಕ ಕಪ್ಪುಕಂಡ್ರು ಚಂದೈತೆ. ?

೬೩. ಪುಂಗಿ ಊದು :- ಬರಹದ ಕನ್ನಡದಲ್ಲಿ ಹಾವನ್ನು ಹಾಡಿಸಲು ಊದುವ ಒಂದು ಸಂಗೀತ ಸಾಧನ, ಅಥವಾ ಕೊಳಲು, ಬಳ್ಳಾರಿ ನಗರದಲ್ಲಿ ಆ ಅರ್ಥದಲ್ಲಿ ಈ ಪದ ಉಚ್ಚಾರಣೆಗೊಳ್ಳುತ್ತಿದೆ. ಮತ್ತು ಕಾರ್ಯ ಸಾಧನೆಯ ಸಮಯವನ್ನು ತೋರಿಸುತ್ತದೆ. 'ಪುಂಗಿಯನ್ನು ಊದಿ' ಹಾವನ್ನು ಆಡಿಸಿದಂತೆ 'ಮಾತಿನ ಪುಂಗಿ ಊದಿ' ಕೆಲಸ ಸಾಧಿಸಿಕೊಳ್ಳುವ ಹಿನ್ನೆಲೆಯನ್ನು ಅರ್ಥೈಸುತ್ತದೆ. ಇದೇ ರೀತಿ ಇನ್ನು ಕೆಲ ಶಬ್ದಗಳು ಅಂದರೆ, ಬಾಲಬಡಿ, ನೀಯ್ಯಿ, ಬೆಣ್ಣೆಹಚ್ಚು... ಎಂಬಂತಹ ಪದಗಳು ಉಚ್ಚಾರಣೆಯಲ್ಲಿವೆ.

ಉದಾ :- ಎಲ್ಲ ಹೇಳ್ ಆಯ್ತು, ಎಷ್ಟಂತ ಅವ್‌ನಿಗೆ ಪುಂಗಿ ಊದದು

೬೪. ಪೊಗ್ರು :- ಬರಹದ ಕನ್ನಡದಲ್ಲಿ ಈ ಪದಕ್ಕೆ 'ಅಹಂಕಾರ' ಎಂದು ಅರ್ಥ, ಆದರೆ ಬಳ್ಳಾರಿ ನಗರ ಕನ್ನಡದಲ್ಲಿ 'ಪೊಗ್ರು' ಎಂದು ಬಳಕೆಯಾಗುತ್ತಿದೆ. ತೆಲುಗಿನಲ್ಲಿ ಕನ್ನಡದ ಅಹಂಕಾರಕ್ಕೆ 'ಪೊಗರು' ಎಂದು ಉಚ್ಚಾರಣೆಯಾಗುತ್ತದೆ. ಆದ್ದರಿಂದ ತೆಲುಗಿನ ಪ್ರಭಾವದಿಂದ ಬಳ್ಳಾರಿ ನಗರ ಕನ್ನಡದಲ್ಲಿ ಈ ಪದ ಉಚ್ಚಾರಣೆಗೊಳ್ಳುತ್ತಿರಬಹದು.

ಉದಾ :- ಪುಗಸಟೆ ಕೂಳ್ ತಿಂದು ಪೊಗ್ರು ಬಂದೇತೆ ?

೬೫. ಬಸ್ ಬರಲಿಕ್ಕೆ ಹತ್ತಿದೆ :- 'ಮರ ಇಳಿಲಿಕ್ಕೆ ಹತ್ತಿದ್ದಾನೆ'. 'ಆ ಹುಡ್ಗಿ ಅಡ್ಗಿ ಮಾಡಲಿಕ್ಕೆ ಹತ್ತಿದ್ದಾಳೆ' ಮುಂತಾದ ಸರಳ ವಾಕ್ಯಗಳು ಬಳ್ಳಾರಿ ನಗರ ಕನ್ನಡದ ಉಚ್ಚಾರಣೆಯಲ್ಲಿ ಕಂಡುಬರುತ್ತವೆ. ಈ ವಾಕ್ಯಗಳಲ್ಲಿ ಉಚ್ಚಾರಣೆಯಲ್ಲಿರುವ 'ಹತ್ತಿದೆ', 'ಹತ್ತಿದ್ದಾನೆ' 'ಹತ್ತಿದ್ದಾಳೆ' ಮುಂತಾದ ಪ್ರಯೋಗಗಳು ಮರಾಠಿಯ ಪ್ರಭಾವದಿಂದ ಬಂದವುಗಳು, ಈ ಮಾದರಿಯ ಪ್ರಯೋಗಗಳು ಕನ್ನಡದ ಜಾಯಮಾನಕ್ಕೆ ಹೊಂದಿಕೆಯಾಗುವುದಿಲ್ಲವಾದ್ದರಿಂದ ಅವು ವಿಜಾತಿಯವಾಗಿ

ಕಾಣುತ್ತವೆ. ಎಂದು ಪ್ರೊ. ಡಿ.ಕೆ. ಭೀಮಸೇನರಾವ್ ಅವರು ಅಭಿಪ್ರಾಯಪಡುತ್ತಾರೆ. (ಪ್ರೊ. ಡಿ.ಕೆ. ಭೀಮಸೇನರಾವ್, ೨೦೦೦, ಅವಲೋಕನ, ಸಂಶೋಧನ, ಪು ೫೯)

೬೬. ಬಾಡೆ :- ಹೆಂಡತಿಯನ್ನು ಬೇರೆಯವರಿಗೆ ಕೊಟ್ಟು ಅದರಿಂದ ಬಂದ ಹಣದಿಂದ ಜೀವನ ನಡೆಸುವವನನ್ನು 'ಬಾಡೆ' ಎಂದು ಬೈಯುತ್ತಾರೆ. ಇದು ಬಳ್ಳಾರಿ ಬೈಗುಳಲ್ಲಿ ಒಂದು ವೈಶಿಷ್ಟ್ಯ. ಆದರೆ ಈಗ ಎಲ್ಲರನ್ನೂ ಆ ರೀತಿ ಬೈಯ್ಯುವುದು ಒಂದು ಸಾಮಾನ್ಯವಾಗಿದೆ. ಇದೊಂದು ಬೈಗುಳ ವಲಯದಲ್ಲಿ ಸಾಮಾನ್ಯ ರೂಪ ಪಡೆದಿದೆ.

ಉದಾ :- ನಾಚಿಗಿಲ್ದನು ಬಾಡೆಸುಳೆಮಗ, ಮತ್ತೆ ಬರ್‍ತಾನ. ?

೬೭. ಬಾನ :- ಬರಹದ ಕನ್ನಡದಲ್ಲಿ 'ಬೋನ' ಎನ್ನುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಬಾನ' ಎಂದು ಉಚ್ಚಾರಣೆಯಾಗುತ್ತಿದೆ. ಇಲ್ಲಿ ಪದಾದಿಯ 'ಓ' ಕಾರವು 'ಆ' ಕಾರವಾಗಿ ಬದಲಾವಣೆಗೊಂಡಿರುವುದು ಗಮನಿಸುವಂತಹ ವಿಚಾರ. ಹಳೆಗನ್ನಡದ 'ಬೋನ' ಎಂಬ ಪದ ಬಳ್ಳಾರಿ ನಗರ ಕನ್ನಡದಲ್ಲಿ ಯಥಾವತ್ತಾಗಿ ಉಳಿದುಕೊಂಡಿರುವುದು ವಿಶೇಷ.

ಉದಾ :- ಬೀಗರ ಬಾನ ತಿಂದು ಬಾಳ ಮಾತಾಡಕತ್ತೀರಿ.

೬೮. ಬಾಪ್ನಯ್ಯ :- 'ಬ್ರಾಹ್ಮಣ' ಎನ್ನುವ ಪದವನ್ನು ಬಳ್ಳಾರಿ ನಗರ ಕನ್ನಡದಲ್ಲಿ ಕೆಳವರ್ಗದ ಜನಾಂಗದವರು 'ಭಾಪ್ನಯ್ಯ' ಎಂದು ಉಚ್ಚಾರಣೆಯಲ್ಲಿ ಬಳಸುವರು. 'ಬಾಪ್ನಯ್ಯ' ಎನ್ನುವುದು ಬಳ್ಳಾರಿ ನಗರ ಕನ್ನಡದ ಉಚ್ಚಾರಣೆಯ ವಿಶಿಷ್ಟ ಪದವಾಗಿ ಬಳಕೆಯಲ್ಲಿದೆ.

ಉದಾ : ಬಾಪ್ನಯ್ಯ ಊರಿಗೆ ಹೋದರು ಬರ್‍ಲಿಲ್ಲ

೬೯. ಬಾಯಿ :- ಬರಹದ ಕನ್ನಡದಲ್ಲಿ ಈ ಪದಕ್ಕೆ 'ಬಾವಿ' ಎಂದು ಕರೆಯುತ್ತಾರೆ. ಆದರೆ ಬಳ್ಳಾರಿ ನಗರ ಕನ್ನಡದಲ್ಲಿ ಈ ಪದವು 'ಬಾಯಿ' ಎಂದು ಬಳಕೆಯಾಗುತ್ತಿದೆ.

ಉದಾ :- ಆಕಿ ಸತಿದ್ದು ಬಾಯಿಗೆ ಬಿದ್ದಲ್ಲೇನು ?

೭೦. ಬಿಕ್ಕ/ಬಿಕ್ಕೆ :- ಬರಹದ ಕನ್ನಡದಲ್ಲಿ 'ಕುಕ್ಕೆ' ಎಂಬ ಪದಕ್ಕೆ ಬಳ್ಳಾರಿ ನಗರ ಭಾಷಿಕರಲ್ಲಿ 'ಬಿಕ್ಕ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಬಿಕ್ಕ ಎಂದರೆ ದನಗಳ ಬಾಯಿಗೆ ಕಟ್ಟುವ ಪುಟ್ಟಿ, ಕುಕ್ಕಿ, ಕಲ್ಲಿ ಎಂದರ್ಥ, ಇಲ್ಲಿಯೂ ಸಹ ಇದೇ ಅರ್ಥದಲ್ಲಿ ಬಳಕೆಯಾಗುತ್ತಿದ್ದರೂ 'ಕ್' ಕಾರಕ್ಕೆ 'ಬ' ಕಾರ ಆದೇಶವಾಗಿ ಬಂದಿರುವುದು ಒಂದು ವೈಶಿಷ್ಟ.

ಉದಾ :- ಗಿಡ ತಿನ್‌ದಂಗೆ ಎತ್‌ಗೊಳಿಗೆ ಬಿಕ್ಕಕಟ್ಟು.

೭೧. ಬುದುರೆ :- ಬಳ್ಳಾರಿ ನಗರ ಕನ್ನಡದ ಉಚ್ಚಾರಣೆ ಪ್ರಕ್ರಿಯೆಯಲ್ಲಿ ವರ್ಣಪಲ್ಲಟ ಕಂಡುಬರುತ್ತದೆ. 'ಬುದುರೆ' ಪದವು ಶಿಷ್ಟ ಕನ್ನಡದಲ್ಲಿ 'ಕೆಸರು' ಎಂಬಾರ್ಥದಲ್ಲಿ ಬಳಕೆಯಲ್ಲಿದೆ. ಇದೇ ಅರ್ಥದಲ್ಲಿ ತೆಲುಗು ಭಾಷೆಯಲ್ಲಿ 'ಬುರುದ' ಎಂದು ಉಚ್ಚಾರಣೆಯಲ್ಲಿದೆ. ಈ ' ಬುರುದ' ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಬುದುರೆ' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಅಲ್ಲಿ ಬುದುರೆ ಅಯ್ ತಿ ಹೋಗಬಾರದು.

೭೨. ಬೇಸ್ :- ಬಳ್ಳಾರಿ ಕನ್ನಡದಲ್ಲಿ 'ಬೇಸ್' ಪದ ವ್ಯಂಜನಾಂತವಾಗಿ ಉಚ್ಚಾರಣೆಯಲ್ಲಿದೆ. ಈ 'ಬೇಸ್' ಪದವು ಉರ್ದುವಿನ 'ಭೇಸ್' ಎಂಬುದರ ರೂಪಾಂತರ ಎಂದು ಪ್ರೊ. ಜಿ.ಕೆ. ಭೀಮಸೇನರಾವ್ ಅವರು ಅಭಿಪ್ರಾಯಪಡುತ್ತಾರೆ.

ಉದಾ :- ನಿನ್ ಹಾಡು ಬೇಸ್ ಇತ್ತು, ಈಗ ಹಾಡು.

೭೩. ಬೋಳೆ :- ಬಳ್ಳಾರಿ ನಗರದ ಇದೊಂದು ವಿಶೇಷ ಪದ, ಬೋಳೆ, ಬೊಳೆ, ಎಂಬ ಪದಗಳಿಗೆ ಬರಹದ ಕನ್ನಡದಲ್ಲಿ ಮಂಕ, ಬ್ರಮೆ, ಎಂಬಂತಹ ಅರ್ಥಗಳುಂಟು, ಆದರೆ ಬಳ್ಳಾರಿ ನಗರ ಭಾಷಿಕರಲ್ಲಿ ಒಂದು ರೀತಿ ಹೀಯಾಳಿಸುವ, ತಲೆ ಬೋಡವಾದ, ಕೈಲಾಗದ ಹೇಡಿ, ಸ್ತ್ರೀ ಸಾಮಾನ ಎಂಬಂತಹ ಅರ್ಥಗಳ ಹಿನ್ನೆಲೆಯಲ್ಲಿ ಬಳಕೆಯಲ್ಲಿದೆ.

ಉದಾ :- ಅಲ್ಲಿಗೆ ಒನ್‌ದ ಸಲ ಹೋದ್ರೆ ಬೊಳೆಗೆ ಎನ್‌ಅಂತ ಗೊತ್ತಕ್ಯತಿ,

೭೪. ಮಗ್ಗ/ಮಗಗ :- ಬರಹದ ಕನ್ನಡದಲ್ಲಿ ಮಗನಿಗೆ ಎನ್ನುವುದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಮಗ್ಗ' 'ಮಗಗ' ಪದಗಳನ್ನು ಬಳಸುತ್ತಾರೆ. ಎರಡೂ ಪದಗಳಲ್ಲಿ ಗಮನಿಸಬೇಕಾದ ಮುಖ್ಯ ಅಂಶ 'ನ' ಕಾರ ಲೋಪವಾಗಿರುವುದು ಮಗನಿಗೆ ಎನ್ನುವುದಕ್ಕೆ 'ಮಗ್ಗ. ಮಗಗ' ಎನ್ನುವುದು ಬಳ್ಳಾರಿ ನಗರ ಕನ್ನಡದ ಉಚ್ಚಾರಣೆಯ ವೈಶಿಷ್ಟ್ಯ.

ಉದಾ : ನಿನ್ನ ಮಗಗ ಕರ್ ಕೊಂಡುಬಾ

೭೫. ಮದ್ಲಿಗಿತ್ತಿ :- 'ಮದುಮಗಳು' ಎನ್ನುವುದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಮದ್ಲಿಗಿತ್ತಿ' ಎನ್ನುವ ಪದವು ಉಚ್ಚಾರಣೆಗೊಳ್ಳುತ್ತಿದೆ. 'ಗಿತ್ತಿ' ಎನ್ನುವುದು ಸ್ತ್ರೀ ಸೂಚಕ ಪದ ಸೇರಿಕೊಂಡು 'ಮದುವಣಗಿತ್ತಿ' ಪದದಿಂದ 'ಮದ್ಲಿಗಿತ್ತಿ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ ಉಚ್ಚಾರಣೆಯಲ್ಲಿದೆ. ಕೋಡೋರ ವಡ್ವಿ ಕೊಡು ಅಂದ್ರ 'ಮದ್ಲಿಗಿತ್ತಿ' ಗುರ್ ಗುಟ್ಟಿದ್ಲಂತ.

ಉದಾ :- ವಸ ಮದ್ಲಿಗಿತ್ತಿ ಕರ್‌ಕಂಡು ಬರಕ ಹೋಗ್‌ಬೇಕು.

೭೬. ಮದ್ಲಿಂಗ :- 'ಮದುವೆ ಗಂಡು' ಎನ್ನುವುದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಮದ್ಲಿಂಗ' ಎನ್ನುವ ಪದವು ಉಚ್ಚಾರಣೆಗೊಳ್ಳುತ್ತಿದೆ. 'ಮದ್ಲಿಂಗ' ಎನ್ನುವ ಪದವು 'ಮದುವಣಿಗ' ಎಂಬ ಪದದ ಪ್ರಭಾವದಿಂದ ಬಂದಿರಬಹುದು.

ಉದಾ :- ಮದ್ಲಿಂಗನ ಕಡೇರು ಯಾರಿದಿರಿ ಬರ್ರಿ.

೭೭. ಮನಾರ :- ಬರಹದ ಕನ್ನಡದಲ್ಲಿ ಈ ಪದ 'ತೃಪ್ತಿಯಾಗುವಷ್ಟು' ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ. ಮದುವೆ ಸಂದರ್ಭಗಳಲ್ಲಿ ಅತಿಥಿಗಳು ಆಗಮಿಸಿದಾಗ ಊಟ ನೀಡುವಾಗ 'ಮನಸಾರೆ' ತಿನ್ನು ಎನ್ನುವ ವಾಡಿಕೆ ಇದೆ. ಈ 'ಮನಸಾರೆ' ಎನ್ನುವ ಪದದಲ್ಲಿ 'ಸ' ಲೋಪವಾಗಿ 'ನ' ಕಾರ ದೀರ್ಘವಾಗಿ ಉಚ್ಚಾರಣೆಯಲ್ಲಿ 'ಮನಾರ' ಆಗಿರಬಹುದು. 'ಮನಸ್ಸು' ಮತ್ತು 'ಮನ' ಎರಡೂ ರೂಪಗಳು ಕನ್ನಡ ಭಾಷೆಯಲ್ಲಿ ಒಂದೇ ಅರ್ಥದಲ್ಲಿ ಬಳಕೆಯಲ್ಲಿರುವುದು ಗಮನಿಸುವಂತಹ ಅಂಶ.

ಉದಾ :- ಮನಾರ ಏಟನ್ನ ತಿನ್ನು ಯಾರ್ ಬ್ಯಾಡಂತರ.

೭೮. ಮಕ :- 'ಮುಖ' ಎನ್ನುವ ಬರಹದ ಕನ್ನಡ ಪದಕ್ಕೆ, ಬಳ್ಳಾರಿ ನಗರದ ಭಾಷಿಕರು 'ಮಕ' ಎಂದು ಉಚ್ಚಾರಣೆಮಾಡುತ್ತಾರೆ. 'ಮ' ಕಾರದ 'ಉ' ಕಾರ ಲೋಪವಾಗಿ ಮಹಾಪ್ರಾಣ 'ಖ' ದ ಬದಲಿಗೆ ಅಲ್ಪಪ್ರಾಣ 'ಕ' ಉಚ್ಚಾರಣೆಗೊಳ್ಳುತ್ತಿದೆ. ಹೀಗಾಗಿ ಮುಖ>ಮಕ ಎಂದಾಗಿದೆ.

ಉದಾ :- ಎಲ್ರೂ ಮಕ್ ಕೈಕಾಲ್ ತೊಕಂಡು ಊಟಕ್ಕ ಬನ್‌ಡ್ರಿ

೭೯. ಮಾವ, ಕಿವುಡ, ಕಿವಿ :- ಈ ಪದಗಳು ಬಳ್ಳಾರಿ ನಗರ ಕನ್ನಡದ ಉಚ್ಚಾರಣೆಯಲ್ಲಿ ಕಂಡುಬರುತ್ತವೆ. ವಿಶೇಷವಾಗಿ ಈ ಪದಗಳಲ್ಲಿ 'ವ' ಕಾರವು ಅನುನಾಸಿಕವಾಗಿ ಉಚ್ಚಾರಣೆಯಲ್ಲಿದೆ.

೮೦. ಯದ್ಕ :- ಬರಹದ ಕನ್ನಡದಲ್ಲಿ 'ಏಕೆ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಯದ್ಕ' ಎಂದು ಬಳಕೆಯಾಗುತ್ತಿದೆ. ತೆಲುಗಿನಲ್ಲಿ 'ಏಕೆ' ಎನ್ನುವುದಕ್ಕೆ 'ಎಂದುಕು' ಎನ್ನುವ ಪದ ಬಳಕೆಯಲ್ಲಿದೆ. ಈ 'ಎಂದುಕು' ಎನ್ನುವ ಪದ 'ಎದುಕ. ಎದಕ, ಎದ್ಕ, ಯದ್ಕ, ಎಂದು ಬಳ್ಳಾರಿ ನಗರ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿದೆ.

ಉದಾ :- ನಿಮ್ಮಪ್ಪ ಹೇಳ್ ಕಳಿಸಿದ್ದು ಯದ್ಕ/ ಯದ್ಕ ಬಂದಿದಿ.

೮೧. ಯಂಡೆ :- ಬರಹದ ಕನ್ನಡದಲ್ಲಿ 'ಸಗಣಿ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಯಂಡೆ' ಎಂದು ಬಳಕೆಯಾಗುತ್ತಿದೆ.

ಉದಾ :- ಬೆಳಿಗ್ಗೆ ಎದ್ದು ಯಂಡೆ ಗಸ ಬಳಿಬೇಕು.

೮೨. ಯಣ್ ಮಕ್ಳು :- ಬರಹದ ಕನ್ನಡದಲ್ಲಿ 'ಹೆಣ್ಣುಮಕ್ಕಳು' ಎನ್ನುವ ಪದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಯಣ್‌ಮಕ್ಳು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇಲ್ಲಿ 'ಹ' ಕಾರ ಲೋಪವಾಗಿ ದ್ವಿತ್ವ 'ಣ' ಕಾರವೂ ಲೋಪವಾಗಿ 'ಎಣ್‌ಮಕ್ಳು' ಎಂದು ಉಚ್ಚಾರಣೆ ಮಾಡುವುದು ಬಳ್ಳಾರಿ ನಗರ ಕನ್ನಡದ ವೈಶಿಷ್ಟ್ಯ.

ಉದಾ :- ಯಣ್‌ಮಕ್ಳು ಬೇಗ ಹೊಂಡ್ರಿ ಗಾಡಿ ಬಂತು.

೮೩. ಯಮ್ಕೆ/ಎಲುಬು :- ಬರಹದ ಕನ್ನಡದಲ್ಲಿ 'ಮೂಳೆ' ಎನ್ನುವ ಪದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಎಮ್ಕೆ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ 'ಯಮ್ಕೆ' ಎನ್ನುವುದು ತೆಲುಗಿನ ಪ್ರಭಾವದಿಂದ ಬಂದಿರಬಹುದು. ಏಕೆಂದರೆ ತೆಲುಗಿನಲ್ಲಿ ಮೂಳೆಗೆ 'ಎಮುಕ' ಎಂದು ಕರೆಯುತ್ತಾರೆ. ಆದ್ದರಿಂದ

ಬಳ್ಳಾರಿ ನಗರ ಕನ್ನಡದಲ್ಲಿ 'ಯಮ್ಕೆ' ಎಂದು ಉಚ್ಚಾರಣೆಯಲ್ಲಿದೆ. ಇದರ ಜೊತೆಗೆ 'ಎಲುಬು, ಎಲ್ಬು' ಎನ್ನುವುದು ಬಳ್ಳಾರಿ ನಗರ ಕನ್ನಡದಲ್ಲಿ ಉಚ್ಚಾರಣೆಯಲ್ಲಿರುವುದು ವಿಶಿಷ್ಟ.

ಉದಾ :– ಮನಿ ಮ್ಯಾಗಿಂದ ಬಿದ್ದು ಯಮ್ಕೆ ಮರ್ ಕೊಂಡಾನ ?

೮೪. ಯಸೊಂದು :– ಬರಹದ ಕನ್ನಡದಲ್ಲಿ 'ಎಷ್ಟೊಂದು' ಎನ್ನುವ ಪದಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ 'ಯಸೊಂದು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಶಿಷ್ಟ ಕನ್ನಡವು 'ಷ' ಕಾರವು ಲೋಪವಾಗಿ 'ಸ' ಕಾರ ಆದೇಶವಾಗಿದೆ. ಮತ್ತು ದ್ವಿತ್ವ 'ಟ' ಕಾರ ಲೋಪವಾಗಿರುವುದನ್ನು ಗಮನಿಸಬಹುದು.

ಉದಾ :– ಬೀಗ್ರು ಯಸೊಂದು ಜನ ಇದಾರ ?

೮೫. ರೊಕ್ಕ :– ಬರಹದ ಕನ್ನಡದಲ್ಲಿ 'ಹಣ' ಎನ್ನುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ರೊಕ್ಕ' ಎಂದು ಬಳಕೆಯಾಗುತ್ತಿದೆ.

ಉದಾ :– ರೊಕ್ಕ ಇದ್ರೆ ಲೆಕ್ಕ, ಇಲ್ಲಂದ್ರ ಬಕ್ಕ.

೮೬. ರೊವಟು :– ಬರಹದ ಕನ್ನಡದಲ್ಲಿ ಈ ಪದಕ್ಕೆ 'ಸ್ವಲ್ಪ' ಎನ್ನುವ ಅರ್ಥ ಇದೆ. ಬಳ್ಳಾರಿ ನಗರ ಕನ್ನಡದಲ್ಲಿ 'ರೊವಟು' ಎಂದು ಉಚ್ಚಾರಣೆಗೊಳ್ಳುತ್ತಿದೆ. 'ಸ್ವಲ್ಪ' ಎನ್ನುವ ಪದಕ್ಕೆ ತೆಲುಗಿನಲ್ಲಿ 'ರೊವಂತ' ಎಂದು ಅರ್ಥವಿದೆ. ತೆಲುಗಿನ ಪ್ರಭಾವದಿಂದ 'ರೊವಟು' ಎನ್ನುವ ಪದ ಬಳ್ಳಾರಿ ನಗರ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿರಬಹುದು.

ಉದಾ :– ನನಿಗೆ ರೊವಟು ಊಟಕ್ಕೆ ಕೊಡು.?

೮೭. ರೊಗ್ತ :– ಬರಹದ ಕನ್ನಡದಲ್ಲಿ 'ರಕ್ತ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ರೊಗ್ತ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇದು ಹೆಚ್ಚಾಗಿ ಅನಕ್ಷರಸ್ತರಲ್ಲಿ, ಹಿಂದುಳಿದ ವರ್ಗಗಳಲ್ಲಿ ಕಂಡುಬರುತ್ತದೆ.

ಉದಾ :– ಪಾಪ ರಾಮಾರೊಗ್ತ ಆಗಂಗೆ ಬಡದ್ರು. ?

೮೮. ವಂಟುಂಟ್ಲೆ :– 'ಕತ್ತಲೆಯಾಗುವ ಮುನ್ನ' 'ಬೆಳಕು ಇರುವಾಗಲೇ' ಎನ್ನುವ ಅರ್ಥದಲ್ಲಿ ಈ ಪದವು ಬಳಕೆಯಾಗುತ್ತದೆ. 'ವತ್ತು ಉಂಟಿರುವಾಗಲೇ' ಎನ್ನುವ ಪದವು ಹ್ರಸ್ವವಾಗಿ 'ವತ್ತುಂಟ್ಲೆ' ಯಾಗಿ 'ವಂಟುಂಟ್ಲೆ' ಯಾಗಿ 'ಹ'

ಕಾರ ಲೋಪಗೊಂಡು 'ವ' ಕಾರ ಆದೇಶವಾಗಿ ಬಂದು 'ವಂಟುಂಟ್ಲೆ' ಎಂದು ಬಳ್ಳಾರಿ ನಗರ ಕನ್ನಡದಲ್ಲಿ ಬಳಕೆಗೊಳ್ಳುತ್ತಿದೆ.

ಉದಾ :– ಬೆಳಿಗ್ಗೆ ವಂಟುಂಟ್ಲೆ ಎದ್ದು ಬಾ.

೮೯. ವಲಕ ವೋಗ್ಬೇಕು :– ಬರಹದ ಕನ್ನಡದಲ್ಲಿ 'ಹೊಲಕ್ಕೆ ಹೋಗಬೇಕು' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ವಲಕ್ ವೋಗ್ಬೇಕು' ಎಂದು ಉಚ್ಚಾರಣೆಗೊಳ್ಳುತ್ತಿದೆ. ಧ್ವನಿನಿಯಮಗಳಲ್ಲಿ ಹೇಳಿದ ಹಾಗೆ 'ಹ' ಕಾರಕ್ಕೆ ಬದಲಾಗಿ 'ವ' ಕಾರ ಉಚ್ಚಾರಣೆಯಲ್ಲಿರುವುದು ಬಳ್ಳಾರಿ ನಗರ ಕನ್ನಡದ ವೈಶಿಷ್ಟ್ಯ.

ಉದಾ :– ಜಲ್ದಿ ಬುತ್ತಿ ಕಟ್ಟು, ನಾನು ವಲಕ್ ವೋಗ್ಬೇಕು.

೯೦. ವಲಲಿಂದ :– ಬರಹದ ಕನ್ನಡದಲ್ಲಿ 'ಹೊಲದಿಂದ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ವಲಲಿಂದ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಇಲ್ಲಿ 'ಹ' ಕಾರದ ಸ್ಥಾನದಲ್ಲಿ 'ವ' ಕಾರ ಆದೇಶವಾಗಿ ಬಂದಿದೆ. ಮತ್ತು ಪ್ರಮಾಣ ಕನ್ನಡದ ತೃತೀಯ ವಿಭಕ್ತಿ 'ದಿಂದ' ಬಳ್ಳಾರಿ ನಗರ ಕನ್ನಡದಲ್ಲಿ ವಿಶೇಷವಾಗಿ 'ಲಿಂದ' ಪ್ರತ್ಯಯ ಉಚ್ಚಾರಣೆಯಲ್ಲಿದೆ. 'ದಿಂದ' ಬದಲು 'ಲಿಂದ' ರೂಪವು ಬಳಕೆಯಾಗುತ್ತಿದೆ. ಇದೇ ರೀತಿ ಇನ್ನೂ ಕೆಲವು ಪದಗಳು ಬಳಕೆಯಾಗುವುದನ್ನು ನಾವು ಕಾಣಬಹುದು. 'ಮನೆಲಿಂದ' ಊರಿಲಿಂದ' ಈ ರೀತಿಯಾಗಿ 'ಲಿಂದ' ರೂಪವು ಬಳ್ಳಾರಿ ನಗರ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿದೆ.

ಉದಾ :– ವಲಲಿಂದ ಬಂದಾ ಬೀಸ್‌ತಿದಿನಿ ಜೋಲ

೯೧. ವಲ್ಲಿ :– ಬರಹದ ಕನ್ನಡದಲ್ಲಿ ಇಂಗ್ಲಿಶ್‌ನ 'ಟವಲ್' ಎನ್ನುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ವಲ್ಲಿ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಬಳ್ಳಾರಿ ನಗರ ಕನ್ನಡದಲ್ಲಿ 'ಟುವಾಲು' ಪದದ ಜೊತೆಗೆ 'ವಲ್ಲಿ' ಎನ್ನುವ ವಿಶಿಷ್ಟ ಪದ ಬಳಕೆಗೊಳ್ಳುವುದನ್ನು ನಾವು ಗಮನಿಸಬಹುದು.

ಉದಾ :– ತೆಲಿಗೆ ವಲ್ಲಿ ಕಟಿಕೊಳ್ಳು–ಚಳಿ ಆಯ್ ತೆ ?

೯೨. ವಳ್ಳಿ ಬಾ :– ಬರಹದ ಕನ್ನಡದಲ್ಲಿ 'ತಿರುಗಿ ಬಾ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ವಳ್ಳಿ ಬಾ' ಎಂದು ಉಚ್ಚಾರಣೆಗೊಳ್ಳುತ್ತಿದೆ.

ಉದಾ :– ಸಾಲಿಲಿಂದ ವಳ್ಳಿ ಬಾ ಆಮೇಗೆ ಹೋಗನಂತೆ ?

೯೩. ವಾಮೆ :- ಬರಹದ ಕನ್ನಡದಲ್ಲಿ ಈ ಪದವನ್ನು 'ಬಣವೆ' ಎಂದು ಕರೆಯುತ್ತಾರೆ. ಆದರೆ ಬಳ್ಳಾರಿ ನಗರ ಕನ್ನಡದಲ್ಲಿ 'ವಾಮೆ' ಎಂದು ಬಳಕೆಯಲ್ಲಿದೆ. ತೆಲುಗಿನಲ್ಲಿ 'ವಾಮು. ವಾಮೆ' ಎಂದು ಬಳಕೆಗೊಳ್ಳುತ್ತಿದೆ. ಆದ್ದರಿಂದ ತೆಲುಗಿನ ಪ್ರಭಾವದಿಂದ 'ವಾಮ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಎ' ಕಾರಾಂತವಾಗಿ 'ವಾಮೆ' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ನಾಯಿ ವಾಮೆ ಮ್ಯಾಲಿ ಮಲ್ ಕಂಡೇತಿ.

೯೪. ವುಂಚೀಕಾಯಿ :- ಬರಹದ ಕನ್ನಡದಲ್ಲಿ 'ಹುಣಸೆ ಕಾಯಿ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ವುಂಚೀಕಾಯಿ' ಎಂದು ಉಚ್ಚಾರಣೆಯಾಗುತ್ತಿದೆ. ಇಲ್ಲಿ 'ಹ' ಕಾರ ಲೋಪವಾಗಿ. ಎರಡನೇ ಸ್ಥಾನದಲ್ಲಿ ಪಂಚಮಾಕ್ಷರ ಆದೇಶವಾಗಿ ಬಂದು 'ಸ' ಕಾರದ ಸ್ಥಳದಲ್ಲಿ 'ಚ' ಕಾರ ಆದೇಶವಾಗಿ ಬಂದಿದೆ. 'ಹುಣಸೇಕಾಯಿ' ಯು 'ವುಂಚೀಕಾಯಿ' ಆಗಿ ಬಳಕೆಗೊಳ್ಳುತ್ತಿರುವುದು ಬಳ್ಳಾರಿ ನಗರ ಕನ್ನಡದ ವೈಶಿಷ್ಟ್ಯ.

ಉದಾ : ನಮ್ ಮರದಾಗ ವುಂಚೀಕಾಯಿ ಭಾರಿ ಬಿಟ್ಟೇತಿ.

೯೫. ಸೀನ್ :- ಬರಹದ ಕನ್ನಡದಲ್ಲಿ 'ಸೀನರಿ' ಎಂದು ಬಳಕೆಯಲ್ಲಿದೆ. ಇದು ಇಂಗ್ಲಿಶ್‌ನ ಪ್ರಭಾವದಿಂದ ಎರವಲು ಪದವಾಗಿ ಬಳಕೆಯಲ್ಲಿದೆ. ಬಳ್ಳಾರಿ ನಗರ ಕನ್ನಡದಲ್ಲಿ ಲೋಪವಾಗಿ ವ್ಯಂಜನಾಂತವಾಗಿ ಬಳಕೆಗೊಳ್ಳುತ್ತಿದೆ.

ಉದಾ :- ೧. ಆ ಸೀನ್ ಚೆನ್ನಾಗಿತ್ತು. ೨. ಆ ಸಿನಿಮಾದಲ್ಲಿ ಒಳ್ಳೆ ಸೀನ್ ಇವೆ.

೯೬. ಸೀಮೆಣ್ಣೆ :- ಮನೆಯಲ್ಲಿ ಬೆಳಕಿಗಾಗಿ ಬಳಸುವ ವಸ್ತುವೇ 'ಚಿಮಣಿ' ಇದು ತೆಲುವಾದ ತಗಡಿನಿಂದ ತಯಾರಾಗಿರುತ್ತದೆ. ಕೆಳಗಡೆ ವಿಸ್ತಾರವಾಗಿದ್ದು, ಮೇಲ್ಭಾಗಕ್ಕೆ ಚಿಕ್ಕದಾಗುತ್ತಾ ಹೋಗುತ್ತದೆ. "ಇಂಗ್ಲಿಶ್‌ನ Chimney ಕುಲುಮೆ ಎಂಜಿನ್ನು ಹೊಗೆಗೊಳವಿ ಇತ್ಯಾದಿ ಅರ್ಥಗಳಿವೆ. ಇದರಿಂದ ಬಹುಶಃ 'ಚಿಮ್ನಿ', 'ಚಿಮಿಣಿ' ಎನ್ನುವ ಪದ ಬಂದಿರಬಹುದು. ಈ ಚಿಮಿಣಿಗೆ ಹಾಕುವ ಎಣ್ಣೆಯೇ 'ಚಿಮಿಣಾದೆಣ್ಣೆ', 'ಚ' ಕಾರದ ಬದಲು 'ಸ' ಕಾರ ಆದೇಶವಾಗಿ ಬಂದು 'ಸಿಮಣಾದೆಣ್ಣೆ' ಆಗಿರಬಹುದು ಅಥವಾ ಬೇರೆ ಸೀಮೆಯಿಂದ ಬಂದು ಬಳಕೆಯಾಗುತ್ತಿರುವ ಎಣ್ಣೆಯೇ 'ಸೀಮೆಣ್ಣೆ' ಆಗಿರಬಹುದು,

ಉದಾ :– ಸೀಮೆ ಬದನಕಾಯಿ' ಎನ್ನುವ ಪದ ಬಳಕೆಯಲ್ಲಿದೆ. ನಮ್ಮ ಸೀಮೆಯಲ್ಲಿ ಬೆಳೆಯದ ವಸ್ತು ಬೇರೆ ಸೀಮೆಯಿಂದ ತರಿಸಿ ಉಪಯೋಗಿಸುತ್ತೇವೆ. ಆದ್ದರಿಂದ ಸೀಮೆ ಬದನೆಕಾಯಿ ಎಂದಾಗಿದೆ. ಅದೇರೀತಿ 'ಸೀಮೆಣ್ಣೆ' ಎನ್ನುವ ಪದವು ಬಳ್ಳಾರಿ ನಗರ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿದೆ.

(ವಾರಿ ಜಿ.ಎಂ. ೨೦೦೦, ಹಳಗನ್ನಡ ವ್ಯಾಕರಣ ಮತ್ತು ಬಾದಾಮಿ ಉಪಭಾಷೆ. ಪುಟ ೯೧)

ಉದಾ : ಮನ್ಯಾಗ ಸೀಮೆಣ್ಣೆ ಆಗ್ಯೋಗೈತೆ.

೯೭. **ಸುಕ್ಕಾಡಿ** :– ಬರಹದ ಕನ್ನಡದಲ್ಲಿ 'ಸೊಳ್ಳೆ' ಎನ್ನುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಸುಕ್ಕಾಡಿ' ಎಂದು ಉಚ್ಚಾರಣೆಗೊಳ್ಳುತ್ತಿರುವುದು ಇಲ್ಲಿಯ ವೈಶಿಷ್ಟ್ಯ.

ಉದಾ :– ಬಸಿಲ್‌ಗಾಲ್ದಗ ಈ ಸುಕ್ಕಾಡಿ ಕಾಟಕ್ಕೆ ಸಾಕ್ ಆಕೈತಿ

೯೮. **ಸುಂಕಿರು** :– ಬರಹದ ಕನ್ನಡದಲ್ಲಿ 'ಸುಮ್ಮನೆ ಇರು' ಎನ್ನುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಸುಂಕಿರು' ಎಂದು ಬಳಕೆಯಾಗುತ್ತಿದೆ.

ಉದಾ :– ಅವ್ನ ಹೇಳತನ ನೀನು ಸುಂಕಿರು.

೯೯. **ಸೋವಿ** :– ಬರಹದ ಕನ್ನಡದಲ್ಲಿ 'ಸೋವಿ' ಎಂದರೆ 'ಅಗ್ಗ' ಸುಲಭ' ಕಡಿಮೆ ಬೆಲೆ ಎಂಬರ್ಥದಲ್ಲಿ ಬಳಕೆಯಲ್ಲಿದೆ.

ಉದಾ :– ಈ ತಡೆವು ತರಕಾರಿ ಬಾರಿ ಸೋವಿ ಇದಾವ

೧೦೦. **ಸೆನ್ಯಾಕ** :– ಬರಹದ ಕನ್ನಡದಲ್ಲಿ 'ಸಮೀಪ' ಎನ್ನುವ ಅರ್ಥದಲ್ಲಿ ಬಳಕೆಯಲ್ಲಿದೆ. ಬಳ್ಳಾರಿ ನಗರ ಕನ್ನಡದಲ್ಲಿ ಉಚ್ಚಾರಣೆಯಲ್ಲಿ 'ಸೆನ್ಯಾಕ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ 'ಸೆನ್ಯಾಕ' ಎನ್ನುವ ಪದ 'ಸನಿಹ' ಎನ್ನುವ ಪದದಿಂದ ಬಂದಿರಬಹುದು. 'ಸನಿಹ, ಸನಿಹಕೆ, ಸನಿಯಕ, ಸೆನ್ಯಾಕ, ಎಂದು ರೂಪಾಂತರ ಹೊಂದಿ ಬಳ್ಳಾರಿ ನಗರ ಕನ್ನಡದಲ್ಲಿ ಉಚ್ಚಾರಣೆಗೊಳ್ಳುತ್ತಿರಬಹುದು.

ಉದಾ :– ನನ್ ಸೆನ್ಯಾಕ ಬಂದಿದ್ರ ಇತ್ತು ಅವ್ನಗತಿ.

೧೦೧. **ಸೆದ್ದೇವ್ ಕೆಲ್ಸ :-** ಬರಹದ ಕನ್ನಡದಲ್ಲಿ 'ವ್ಯವಸಾಯದ ಕೆಲಸ' ಎಂದು ಬಳಕೆಯಲ್ಲಿರುವ ಈ ಪದವು ಬಳ್ಳಾರಿ ನಗರ ಕನ್ನಡದಲ್ಲಿ 'ಸೆದ್ದೇವ್ ಕೆಲಸ' ಎಂದು ಉಚ್ಚಾರಣೆಗೊಳ್ಳುತ್ತಿದೆ. ಈ ಪದವು ತೆಲುಗಿನ ಪ್ರಭಾವದಿಂದ ಬಂದಿದೆ. ಏಕೆಂದರೆ ತೆಲುಗಿನಲ್ಲಿ ಈ ಪದವನ್ನು 'ಸೇದ್ಯಂ' ಎಂದು ಉಚ್ಚಾರಿಸುತ್ತಾರೆ. ಆದ್ದರಿಂದ 'ಸೇದ್ಯಂ' ಎನ್ನುವ ಪದ ಬಳ್ಳಾರಿ ನಗರ ಕನ್ನಡದಲ್ಲಿ 'ಸೆದ್ದೇವ್' ವ್ಯಂಜನಾಂತವಾಗಿ ಉಚ್ಚಾರಣೆಯಲ್ಲಿದೆ.

ಉದಾ :- ಆಯಮ್ಮ ಸೆದ್ದೇವ್ ಕೆಲ್ಸ ಮಾಡ್ತಾತೆ ಬೇಸು ಮಾಡಿಕ್ಯಂಡು ತಿಂತಾತೆ.

೧೦೨. **ಸೆಟಗೊಂಡವೋಗ :-** ಬಳ್ಳಾರಿ ನಗರ ಕನ್ನಡದಲ್ಲಿ ಬೈಗುಳಲ್ಲಿ ಈ 'ಸೆಟಗೊಂಡವೋಗ' ಎನ್ನುವುದು ಬಳಕೆಯಲ್ಲಿದೆ. 'ಸೆಟೆದುಕೊಂಡು ಹೋಗು' ಎನ್ನುವುದು ಇದರ ಅರ್ಥ. ಸತ್ತಾಗ ದೇಹವು ಸೆಟೆದುಕೊಂಡು ಹೋಗುತ್ತದೆ. ಅದಕ್ಕೆ ಹೋಲಿಸಿ ಸಾಯು ಎನ್ನುವ ಬದಲು ಈ ಪದವನ್ನು ಬಳಸುತ್ತಿದ್ದಾರೆ.

ಉದಾ :- ದೈವಕ್ಕ ಮೋಸಮಾಡಿದ್ದಕ್ಕ ಸೆಟಗೊಂಡವೋದ.

ಅಧ್ಯಾಯ – ೪

ಬಳ್ಳಾರಿ ನಗರದ ಉರ್ದುಭಾಷಿಕರ ಕನ್ನಡದ ಉಚ್ಚಾರಣೆಯಲ್ಲಿ ನುಡಿಮಿಶ್ರಣ ರೂಪಗಳು

ಅಧ್ಯಾಯ – ೪

ಬಳ್ಳಾರಿ ನಗರದ ಉರ್ದು ಭಾಷಿಕರ ಕನ್ನಡದ ಉಚ್ಚಾರಣೆಯಲ್ಲಿ ನುಡಿ ಮಿಶ್ರಣ ರೂಪಗಳು

ಒಂದು ಭಾಷೆಯ ವಾಕ್ಯವನ್ನು ಆಡುವಾಗ ಅಥವಾ ಬರೆಯುವಾಗ ಇನ್ನೊಂದು ಭಾಷೆಯ ಭಾಷಿಕಾಂಶಗಳನ್ನು ಬೆರಸುವುದೇ ನುಡಿಮಿಶ್ರಣ, ಇಡೀ ವಾಕ್ಯದ ಹಿಂದಿನ ನಿಯಮ ಒಂದು ಭಾಷೆಯದಾಗಿದ್ದು, ವಾಕ್ಯಾಂಶಗಳು ಮಾತ್ರ ಇನ್ನೊಂದು ಭಾಷೆಯಿಂದ ಬಂದು ಸೇರುತ್ತದೆ.

ಕನ್ನಡದಲ್ಲಿ ಬೇರೆ ಬೇರೆ ಭಾಷೆಗಳ ಪ್ರಭಾವದಿಂದ ಇತ್ತೀಚಿನ ದಿನಗಳಲ್ಲಿ ಹೊಸ ಹೊಸ ರಚನೆಗಳು ಉಚ್ಚಾರಣೆಯಲ್ಲಿವೆ. ಇಂತಹ ಪದಕೋಶದ ಘಟಕಗಳು ದೇಶವೋ, ಅನ್ಯದೇಶವೋ ಎಂಬುದು ಮುಖ್ಯವಾಗದೆ, ಸಂವಹನದ ಅನುಕೂಲತೆಗೆ ಉಚ್ಚಾರಣೆಯಲ್ಲಿರುವುದು ಗಮನಿಸುವಂತಹದ್ದಾಗಿದೆ. ಇಂತಹ ಹೊಸ ಪ್ರಯೋಗ ಬಳ್ಳಾರಿ ನಗರದ ಉರ್ದು ಭಾಷಿಕರ ಕನ್ನಡದಲ್ಲಿ ಕಂಡು ಬರುತ್ತಿದೆ. ಈ ಉರ್ದು ಭಾಷಿಕರು ಕನ್ನಡಿಗರೊಂದಿಗೆ ವ್ಯವಹರಿಸುವಾಗ ಎರಡು ಮಾದರಿ ರೂಪಗಳು ಉಚ್ಚಾರಣೆಯಲ್ಲಿವೆ.

೧)ಮೊದಲನೆಯ ಪದ ಉರ್ದುವಾಗಿದ್ದು ಎರಡನೇ ಪದ ಕನ್ನಡ ಪದವಾಗಿರುವುದು. ಉದಾಹರಣೆಗೆ, ಹಾಂಹಣ್ಣು, ಏಕ್‌ರೂಪಾಯಿ, ಬಾನಗೆ, ಮೈನಕೂಗು, ಜೋರಿಅಂತು, ಝೂಡ್‌ಕೆಳಗೆ, ಪೂಜಲ್‌ಮಾತು, ದೂದ್‌ಕುಡಿತು, ನೀಮ್‌ಮರ, ಅಂಬಾಡ್‌ಸಾರು, ಶಾದಿಲಿಂದ, ಪಾನಿಕೊಡು, ಖಾನಆಯ್ತು, ಸೂರಿಜ್‌ಐತೆ, ಸಾಂಪುಕಹೊಡಿ ಮುಂತಾದ ಕನ್ನಡ ನುಡಿ ಮಿಶ್ರಣ ರೂಪಗಳು ಉಚ್ಚಾರಣೆಯಲ್ಲಿವೆ.

೨) ಹಾಗೆಯೇ ಮೊದಲನೇ ಪದ ಕನ್ನಡವಾಗಿದ್ದು, ಎರಡನೇ ಪದ ಉರ್ದುಪದ ಸೇರಿಕೊಂಡು ಬಳ್ಳಾರಿ ನಗರದ ಕನ್ನಡದಲ್ಲಿ ಉಚ್ಚಾರಣೆಯಲ್ಲಿದೆ. ಉದಾಹರಣೆಗೆ– ಬಸ್‌ಮೇಚಾಡ್, ಜಲ್ದಿಕಾಮ್ ಕರೋ, ಎದುರುಜವಾಬ್, ಜಮಖಾನಬಡೇ ಹೈ, ನಿಮ್ಮಬೇಟ, ನಾಯಿನಿಶಾನಿ, ತೆಂಕರುಝೂಡ್ ಮುಂತಾದ ಕನ್ನಡ ಮತ್ತು ಉರ್ದು ನುಡಿ ಮಿಶ್ರಣ ರೂಪಗಳೂ ಉಚ್ಚಾರಣೆಯಲ್ಲಿವೆ.

ಮೇಲಿನ ಎರಡು ಮಾದರಿಗಳು ನಿರ್ದಿಷ್ಟ ವಲಯದಲ್ಲಿ ಉಚ್ಚಾರಣೆಯಲ್ಲಿವೆ. ಇಂತಹ ನುಡಿ ಮಿಶ್ರಣ ರಚನೆಗಳನ್ನು ಯಾವ ಭಾಷೆಯ ವ್ಯಾಕರಣದಲ್ಲಿ ಸೇರುವುದು ಎನ್ನುವುದು ಪ್ರಸ್ತುತ ಭಾಗದ ಚರ್ಚೆಯಾಗಿದೆ. ಇಲ್ಲಿ ಉಚ್ಚಾರಣೆಯಲ್ಲಿರುವ ಹೊಸ ರಚನೆಗಳು ಅರ್ಥದ ದೃಷ್ಟಿಯಿಂದ ವ್ಯತ್ಯಾಸವಾಗದೇ ಆಡುಗನ ಉದ್ದೇಶಕ್ಕೆ ತಕ್ಕಂತೆ ಉಚ್ಚಾರಣೆಯಲ್ಲಿವೆ. ಇಂತಹ ಹಿನ್ನೆಲೆಯುಳ್ಳ ರಚನೆಗಳ ವಿವರಣೆಗಳನ್ನು ಮುಂದೆ ಸ್ಥೂಲವಾಗಿ ಚರ್ಚೆಮಾಡಲಾಗಿದೆ. ಬಳ್ಳಾರಿ ನಗರದ ಕನ್ನಡದಲ್ಲಿ ಕನ್ನಡ ಮತ್ತು ಉರ್ದು, ಉರ್ದು ಮತ್ತು ಕನ್ನಡ ಎಂಬೆರಡು ಮಾದರಿಯ ರಚನೆಗಳು ಕಂಡುಬರುತ್ತವೆ.

೧. "ಖಾನಗೆ" :- 'ಖಾನ -ಎನ್ನುವುದು ಉರ್ದುಪದ, 'ಗೆ'- ಎನ್ನುವುದು ಕನ್ನಡದ ಚತುರ್ಥಿ ವಿಭಕ್ತಿ ಪ್ರತ್ಯಯ, 'ಖಾನ'-ಎಂದರೆ ಕನ್ನಡದಲ್ಲಿ "ಊಟ"- ಎಂದರ್ಥ, "ಖಾನಗೆ" -ಎಂದರೆ 'ಊಟಕ್ಕೆ'-ಎಂದರ್ಥ, ಆದರೆ ಉರ್ದು ಭಾಷಿಕರ ಕನ್ನಡದಲ್ಲಿ 'ಊಟಕ್ಕೆ' ಬದಲಾಗಿ 'ಊಟಗೆ'- ಎಂದು ಉಚ್ಚಾರಣೆಗೊಳ್ಳುತ್ತದೆ. ಉರ್ದುವಿನ 'ಖಾನ'-ಎಂಬ ಪದಕ್ಕೆ ಕನ್ನಡದ ಚತುರ್ಥಿ ವಿಭಕ್ತಿ ಪ್ರತ್ಯಯ 'ಗೆ' ಸೇರಿ ಖಾನಗೆ ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- 'ಖಾನಗೆ ಹೋಗ್ ಬಾಪ'

೨. ಹಾಂಹಣ್ಣು :- 'ಹಾಂ'-ಎಂಬುದು ಉರ್ದುಪದ, 'ಹಣ್ಣು' ಎಂಬುವುದು ಕನ್ನಡದ ಪದ, 'ಹಾಂಹಣ್ಣು'-ಎಂದರೆ "ಮಾವಿನ ಹಣ್ಣು" - ಎಂದರ್ಥ, ಉರ್ದುವಿನ ಪೂರ್ವಪದವಾದ 'ಹಾಂ' ಎಂಬುದಕ್ಕೆ ಕನ್ನಡದ ಉತ್ತರ ಪದ 'ಹಣ್ಣು' ಸೇರಿಕೊಂಡು 'ಹಾಂಹಣ್ಣು'-ಎಂದು ಉಚ್ಚಾರಣೆಗೊಳ್ಳುತ್ತದೆ. ಹಾಂಹಣ್ಣು ಕೆಲವು ಸಂದರ್ಭದಲ್ಲಿ ಇವರ ಕನ್ನಡದಲ್ಲಿ ಮಾವಿನಅನ್ನು/ಮಾವಿಡಿಅನ್ನು ಎಂದು ಉಚ್ಚಾರಣೆಯಾಗುತ್ತದೆ.

ಉದಾ:- ಹಾಂ ಹಣ್ಣು ದೇಕೋ

೩. ಏಕ್‌ರೂಪಾಯಿ :- ಉರ್ದು ಪದ 'ಏಕ್', 'ರೂಪಾಯಿ'-ಎಂಬುದು ಕನ್ನಡದ ಪದ, 'ಏಕ್‌ರೂಪಾಯಿ'-ಎಂದರೆ, 'ಒಂದು ರೂಪಾಯಿ' ಎಂದರ್ಥ, ಉರ್ದುವಿನ 'ಏಕ್'-ಎಂಬ ಪದಕ್ಕೆ ಕನ್ನಡದ 'ರೂಪಾಯಿ'-ಎಂಬ ಪದ ಸೇರಿಕೊಂಡು "ಏಕ್ ರೂಪಾಯಿ"-ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ಏಕ್ ರೂಪಾಯಗೆ ಏಕ್‌ರಂಗ ತೊಗಲಿ

೪. ರಿಜೀಡ್‌ಗಿಡ :- 'ರಿಜೀಡ್'-ಎಂಬುದು ಉರ್ದುಪದ, 'ಗಿಡ' ಎಂಬುದು ಕನ್ನಡದ ಪದ, "ರಿಜೀಡ್ ಗಿಡ" ಎಂದರೆ 'ಸುಂಕಸಾಲಿ ಮರ'-ಎಂದರ್ಥ, ಈ ಮರವನ್ನು ಗ್ರಾಮ್ಯ ಭಾಷೆಯಲ್ಲಿ 'ಕ್ಯಾನಕಸ್ತ್ರಿಮರ'-ಎಂತಲೂ ಕರೆಯಲಾಗುತ್ತದೆ. ಇಲ್ಲಿ 'ಗಿಡ'-ಎಂದರೆ ಬಳ್ಳಾರಿ ತೆಲುಗು ಭಾಷಿಕರಲ್ಲಿ 'ಮರ' ಎಂದೇ ಅರ್ಥ, ಆದರೆ ಗಿಡಕ್ಕೂ-ಮರಕ್ಕೂ ಕನ್ನಡದಲ್ಲಿ ವ್ಯತ್ಯಾಸ ಉಂಟು, 'ಗಿಡ'-ವೆಂದರೆ ಚಿಕ್ಕದು, ಇನ್ನು ಬೆಳೆಯ ಬೇಕಾದುದು ಎಂದರ್ಥ. ಮರವೆಂದರೆ, ದೊಡ್ಡದು, ಬೆಳೆದದ್ದು ಎಂದಾಗುತ್ತದೆ. ಆದರೆ ಬಳ್ಳಾರಿ ನಗರದ ಭಾಷಿಕರಲ್ಲಿ ಈ ಎರಡರ ವ್ಯತ್ಯಾಸ ಇಲ್ಲ, ಈ ಎರಡೂ ಶಬ್ದಗಳು ಒಂದೇ ಅರ್ಥದಲ್ಲಿ ಬಳಕೆಯಾಗುತ್ತವೆ. ಇದು ತೆಲುಗು ಪ್ರಭಾವದಿಂದಲೇ 'ರಿಜೀಡ್‌ಗಿಡ" ಎಂದಾಗಿದೆ. ಈ 'ರಿಜೀಡ್‌ಗಿಡ'-ಒಂದು ಸಸ್ಯ ಜಾತಿಯ ಮರ. ಉರ್ದುವಿನ 'ರಿಜೀಡ್'-ಶಬ್ದಕ್ಕೆ ಕನ್ನಡದ 'ಗಿಡ'-ಸೇರಿ 'ರಿಜೀಡ್‌ಗಿಡ'-ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ಅಲ್ಲೇತಲ್ಲ ಅದಾ ! 'ರಿಜೀಡ್ ಗಿಡ' ಕಾಂತ್ಯಾ

೫. ಮೈನಕೂಗ್ :- 'ಮೈನ'-ಎಂಬುದು ಉರ್ದುವಿನ ಪದ, ಉರ್ದುವಿನಲ್ಲಿ 'ಮೈನ' ಎಂದರೆ ಕನ್ನಡದಲ್ಲಿ ಇದರ ಅರ್ಥ 'ಕೋಗಿಲೆ' ಎಂದಾಗುತ್ತದೆ. ಉರ್ದುವಿನಲ್ಲಿ 'ಕೋಯಲ್' ಎಂತಲೂ ಕರೆಯಲಾಗುತ್ತಿದೆ. 'ಕೂಗು'-ಎಂಬುದು ಕನ್ನಡದ ಪದ, ಉರ್ದುವಿನ 'ಮೈನ'-ಪದಕ್ಕೆ, ಕನ್ನಡದ 'ಕೂಗು ಸೇರಿಕೊಂಡು' 'ಮೈನಕೂಗು'-ಎಂದಾಗಿದೆ. "ಮೈನಾಕೂಗು-ಎಂದರೆ "ಕೋಗಿಲೆ ಕೂಗುತ್ತದೆ." ಎಂದರ್ಥ ಬಳ್ಳಾರಿ ಉರ್ದು ಕನ್ನಡಿಗರಲ್ಲಿ 'ಮೈನಕೂಗು' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಅಲ್ಲಿ ಮೈನ ಕೂಗ್ ಹೈನ

೬ ಧೂಪ್ ಬಾಲ :- 'ಧೂಪ್' - ಎಂಬುದು ಉರ್ದುವಿನ ಪದ, 'ಬಾಲ' ಎಂದರೆ ಕನ್ನಡದಲ್ಲಿ 'ಬಾಳ' 'ಬಹಳ' ಎಂದರ್ಥ. ತೆಲುಗು ಪ್ರದೇಶದ ವ್ಯಾಪ್ತಿಯಲ್ಲಿ ಬಳ್ಳಾರಿ ನಗರ ಬರುವುದರಿಂದ ಆ ತೆಲುಗು ಭಾಷಿಕರ ಪ್ರಭಾವದಿಂದಾಗಿ 'ಳ'-ಕಾರ 'ಲ' ಕಾರವಾಗಿ ಬಳಕೆಯಾಗಿದೆ. 'ಬಾಲ' ಎಂದರೆ "ಹೆಚ್ಚು" ಎಂದರ್ಥ. ಉರ್ದುವಿನ 'ಧೂಪ್' ಪದಕ್ಕೆ ಕನ್ನಡದಲ್ಲಿ 'ಬಹಳ' ಸೇರಿಕೊಂಡು ಉಚ್ಚಾರಣೆಯಲ್ಲಿದೆ.ಎಂದು ಉಚ್ಚಾರಣೆಯಲ್ಲಿದೆ. 'ಧೂಪ್‌ಬಾಲ' ಎಂದರೆ 'ಬಿಸಿಲು ಬಹಳ' ಎಂದು ಉಚ್ಚಾರಣೆಯಲ್ಲಿದೆ.

೭. ಜೋರಿಅಂತು :- 'ಜೋರಿ' ಎಂಬುದು ಉರ್ದುವಿನ ಪದ, 'ಅಂತು'-ಎಂಬುದು ಕನ್ನಡದಪದ, 'ಜೋರಿ'-ಎಂದರೆ ಕನ್ನಡದಲ್ಲಿ "ಹೆಂಡತಿ"-ಎಂದಾಗುತ್ತದೆ. 'ಅಂತು'-ಎಂದರೆ "ಹೇಳಿತು" 'ಹೇಳಿದರು' ಎಂಬರ್ಥಗಳಿವೆ. 'ಜೋರಿ ಅಂತು' ಎಂದರೆ 'ಹೆಂಡತಿ ಹೇಳಿತು' ಎಂದರ್ಥ. ಉರ್ದುವಿನ 'ಜೋರಿ' ಪದಕ್ಕೆ ಕನ್ನಡದ 'ಅಂತು' ಸೇರಿ 'ಜೋರಿಅಂತು' ಎಂದು ಉರ್ದು ಕನ್ನಡ ಭಾಷಿಕರಲ್ಲಿ ಉಚ್ಚಾರಣೆಯಲ್ಲಿದೆ.

ಉದಾ :- 'ಮನ್ಯಗ ಇಲ್ಲಂತ ನಿಮ್ಮ 'ಜೋರಿಅಂತು'

೮. ಕರೋಬ್‌ತರ :- 'ಕರೋಬ್'-ಎಂಬುದು ಉರ್ದುವಿನ ಪದ, 'ತರ'-ಎಂದರೆ 'ತರಹ'-ಎಂದು, ಇದು ಕನ್ನಡದ ಪದ, "ಕರೋಬ್‌ತರ"-ಎಂದರೆ ಕೆಟ್ಟವನ ತರಹ ಎಂದು ಕನ್ನಡದಲ್ಲಿ ಉಚ್ಚಾರಣೆಯಲ್ಲಿದೆ. ಉರ್ದುವಿನ ಕರೋಬ್ ಪದಕ್ಕೆ ಕನ್ನಡದ 'ತರ' ಎಂಬ ಪದ ಸೇರಿಕೊಂಡು 'ಕರೋಬ್‌ತರ'-ಎಂದು ಬಳಕೆಯಾಗುತ್ತದೆ.

ಉದಾ:- 'ನೋಡಕೆ ಕರೋಬ್ ತರ ಇಲ್ಲ'

೯. ಝಾಡ್‌ಕೆಳಗೆ :- 'ಝಾಡ್'-ಎಂಬುದು ಉರ್ದುವಿನ ಪದ, 'ಕೆಳಗೆ'-ಎಂಬುವುದು ಕನ್ನಡದ ಪದ, ಉರ್ದುವಿನಲ್ಲಿ 'ಝಾಡ್'-ಎಂದರೆ 'ಗಿಡ' ಅಥವಾ 'ಮರ'-ಎಂದಾಗುತ್ತದೆ. " ಝಾಡ್ ಕೆಳಗೆ"-ಎಂದರೆ ಮರದಡಿ, ಮರದ ಕೆಳಗೆ-ಎಂದರ್ಥ, ಉರ್ದುವಿನ 'ಝಾಡ್' ಪದಕ್ಕೆ ಕನ್ನಡದ 'ಕೆಳಗೆ' ಪದ ಸೇರಿಕೊಂಡು 'ಝಾಡ್‌ಕೆಳಗೆ' ಎಂದು ಬಳ್ಳಾರಿ ನಗರದ ಉರ್ದು ಭಾಷಿಕರಲ್ಲಿ ಉಚ್ಚಾರಣೆಗೊಳ್ಳುತ್ತದೆ.

ಉದಾ :- ಭೇಟಾ ಝಾಡ್ ಕೆಳಗೆ ಕುಂದ್ರು

೧೦. ಪೂಜಲ್‌ಮಾತು :- 'ಪೂಜಲ್' ಎಂಬುದು ಉರ್ದುಪದ, 'ಮಾತು'-ಎಂಬುದು ಕನ್ನಡದ ಪದ, ಪೂಜಲ್ ಎಂದರೆ ಕನ್ನಡದಲ್ಲಿ 'ಉಪಯೋಗವಿಲ್ಲದ/ಕೆಲಸಕ್ಕೆ ಬಾರದ ಎಂದರ್ಥ, "ಪೂಜಲ್‌ಮಾತು''-ಎಂದರೆ 'ಉಪಯೋಗವಿಲ್ಲದ ಮಾತು' ಎಂದಾಗುತ್ತದೆ. ಉರ್ದುವಿನ 'ಪೂಜಲ್' ಶಬ್ದಕ್ಕೆ ಕನ್ನಡದ 'ಮಾತು' ಎಂಬ ಪದ ಸೇರಿ 'ಪೂಜಲ್ ಮಾತು' ಎಂದು ಬಳಕೆಯಾಗುತ್ತದೆ.

ಉದಾ :- ಬರಿ ಪೂಜಲ್ ಮಾತು ಬ್ಯಾಡಪ.

೧೧. **ದೂದ್ ಕುಡಿತು :-**

'ದೂದ್'-ಎಂಬುದು ಉರ್ದುವಿನ ಪದ, 'ಕುಡಿತು'-ಎಂಬುದು ಕನ್ನಡದ ಪದ, ಕನ್ನಡದಲ್ಲಿ 'ಹಾಲು'-ಎನ್ನುವುದಕ್ಕೆ ಉರ್ದುವಿನಲ್ಲಿ 'ದೂದ್' ಎನ್ನುತ್ತಾರೆ. 'ದೂದ್ ಕುಡಿತು'-ಎಂದರೆ 'ಹಾಲನ್ನು ಕುಡಿಯಿತು'-ಎಂದರ್ಥ, ಉರ್ದುವಿನ 'ದೂದ್' ಪದಕ್ಕೆ ಕನ್ನಡದ "ಕುಡಿತು ಎಂಬ ಪದ ಸೇರಿಕೊಂಡು ಬಳ್ಳಾರಿ ನಗರದ ಉರ್ದು ಕನ್ನಡ ಭಾಷಿಕರಲ್ಲಿ 'ದೂದ್ ಕುಡಿತು'-ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ಬಿಲ್ಲಿ ದೂದ್ ಕುಡಿತು (ಬೆಕ್ಕು ಹಾಲನ್ನು ಕುಡಿಯಿತು)

೧೨. **ನೀಮ್ ಮರ :-**

'ನೀಮ್'-ಎಂಬುದು ಉರ್ದುವಿನ ಪದ, 'ಮರ'-ಎಂಬುವುದು ಕನ್ನಡದ ಪದ 'ನೀಮ್' ಎಂದರೆ ಕನ್ನಡದಲ್ಲಿ 'ಬೇವು'-ಎಂದರ್ಥ 'ನೀಮ್‌ಮರ'-ಎಂದರೆ 'ಬೇವಿನ ಮರ' ಎಂದಾಗುತ್ತದೆ. ಉರ್ದುವಿನ 'ನೀಮ್' ಪದಕ್ಕೆ ಕನ್ನಡದ ಮರ ಎಂಬ ಪದ ಸೇರಿಕೊಂಡು "ನೀಮ್‌ಮರ" ಎಂದು ಉರ್ದು ಭಾಷಿಕರಲ್ಲಿ ಉಚ್ಚಾರಣೆಗೊಳ್ಳುತ್ತದೆ.

ಉದಾ :- ಇದಾನ ? ನೀಮ್ ಮರ ಗೊತ್ತಿಲ್ಲಾ!

೧೩. **ಅಂಬಾಡ್ ಸಾರು/ಚಾರು :-**

"ಅಂಬಾಡ್"-ಎಂಬುದು ಉರ್ದುವಿನ ಪದ, ಸಾರು ಎಂಬುದು ಕನ್ನಡದ ಪದ, 'ಅಂಬಾಡ'-ಎಂದರೆ ಕನ್ನಡದಲ್ಲಿ 'ಪುಂಡಿಸೊಪ್ಪು' ಅಥವಾ 'ಪುಂಡಿಪಲ್ಯ'-ಎಂದರ್ಥ, 'ಅಂಬಾಡ್ ಸಾರು'-ಎಂದರೆ ಪುಂಡಿಪಲ್ಯ, 'ಪುಂಡಿಪಲ್ಯದ ಸಾರು' ಎಂದರ್ಥ, ಉರ್ದುವಿನ 'ಅಂಬಾಡ್'-ಪದಕ್ಕೆ ಕನ್ನಡದ 'ಸಾರು' ಸೇರಿಕೊಂಡು ಅಂಬಾಡ್ ಸಾರು ಎಂದು ಉಚ್ಚಾರಣೆಯಲ್ಲಿದೆ.

ಉದಾ :- ನಮ್ ಮನೇಗ 'ಅಂಬಾಡ್ ಸಾರ್ ಮಾಡಿದು.

೧೪. **ಮಸಡದಾವ :-**

'ಮಸಡ'-ಎಂದರೆ 'ಸೊಳೆ' ಅಥವಾ 'ಚುಕ್ಕಾಡ' ಎಂದರ್ಥ, ಮಸಡ ಎಂಬುದು ಉರ್ದುವಿನ ಪದ 'ಇದಾವ್' 'ಅದಾವ್' ಎಂಬುದು ಕನ್ನಡದ ಪದ, ಮಸಡದಾವ ಎಂದರೆ 'ಸೊಳ್ಳೆಗಳಿವೆ" –ಎಂದರ್ಥ, ಉರ್ದುವಿನ ಮಸಡ–ಎಂಬ ಪದಕ್ಕೆ ಕನ್ನಡ 'ಅದವ್' ಸೇರಿಕೊಂಡು 'ಮಸಡದಾವ'-ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಬಲ್ಲಾರ‍್ಯಾಗ ಮಸಡದವ, ಯಾಕಿಲ್ಲ !

೧೫. ದಿಮಾಗ್ ಮ್ಯಾಲೆ :- 'ದಿಮಾಗ್'-ಎಂಬುದು ಉರ್ದುಪದ, 'ಮ್ಯಾಲೆ' ಎಂಬುದು ಕನ್ನಡ ಪದ, 'ಮೇಲೆ' ಎಂಬುದಕ್ಕೆ ಬಳ್ಳಾರಿಯ ಆಡು ನುಡಿಯಲ್ಲಿ 'ಮ್ಯಾಲೆ' ಎಂದು ಬಳಕೆಯಾಗುತ್ತದೆ. "ದಿಮಾಗ ಮ್ಯಾಲೆ"-ಎಂದರೆ 'ತಲೆಯಲ್ಲಿ'/ ಮೆದುಳಿನ ಮ್ಯಾಲೆ ಎಂದರ್ಥ, ಅಂದರೆ ಉರ್ದುವಿನ 'ದಿಮಾಗ್'-ಪದಕ್ಕೆ ಕನ್ನಡದ 'ಮ್ಯಾಲೆ'-ಎಂಬ ಪದ ಸೇರಿಕೊಂಡು 'ದಿಮಾಗ ಮ್ಯಾಲೆ'-ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಕತಾ/ಕಥಾ? ದಿಮಾಗ ಮ್ಯಾಲೆ ಬರಬೇಕಲ್ರಿ ! ಏಳಕ

೧೬. ಶಾದಿಲಿಂದ :- 'ಶಾದಿ'-ಎಂಬುದು ಉರ್ದುವಿನ ಪದ, 'ಇಂದ'-ಎಂಬುದು ಕನ್ನಡದ ತೃತೀಯ ವಿಭಕ್ತಿ ಪ್ರತ್ಯಯ, 'ಶಾದಿಲಿಂದ'-ಎಂದರೆ, 'ಮದುವೆಯಿಂದ'-ಎಂದರ್ಥ ಶಾದಿ-ಎಂದರೆ 'ಮದುವೆ' ಉರ್ದುವಿನ 'ಶಾದಿ'-ಎಂಬ ಪದಕ್ಕೆ ಕನ್ನಡದ ತೃತೀಯ ವಿಭಕ್ತಿ ಪ್ರತ್ಯಯ 'ಇಂದ'-ಸೇರಿಕೊಂಡು 'ಶಾದಿಲಿಂದ'-ಎಂದು ಬಳಕೆಯಾಗುತ್ತಿದೆ.

ಉದಾ :- ಶಾದಿಲಿಂದ ಬರಕರ ಬರೇ ಗಲಾಟ.

೧೭. ಪಾನಿಕೊಡು :- 'ಪಾನಿ'-ಎಂಬುದು ಉರ್ದುವಿನಲ್ಲಿ ಪ್ರಸಾರಗೊಳ್ಳುವ ಪದ, 'ಕೊಡು'-ಎಂಬುದು ಕನ್ನಡದ 'ಕ್ರಿಯಾಪದ', 'ಪಾನಿಕೊಡು' ಎಂದರೆ "ನೀರನ್ನು ಕೊಡು"-ಎಂದರ್ಥ, ಉರ್ದುವಿನ 'ಪಾನಿ'-ಎಂಬ ಪದಕ್ಕೆ, ಕನ್ನಡದ 'ಕೊಡು'-ಎಂಬ ಕ್ರಿಯಾಪದವು ಸೇರಿಕೊಂಡು, ಬಳ್ಳಾರಿ ನಗರದ ಉರ್ದು ಭಾಷಿಕರಲ್ಲಿ "ಪಾನಿಕೊಡು"-ಎಂಬ ಮಿಶ್ರನುಡಿ ಉಚ್ಚಾರಣೆಯಲ್ಲಿದೆ.

ಉದಾ :- 'ತೊಡ ಪಾನಿ ಕೊಡು ನಂಗೆ'

೧೮. ಘರ್ ಮೇಲೆ :- ಇಲ್ಲಿ 'ಘರ್'-ಎಂಬುದು ಉರ್ದುವಿನ ಪದವಾದರೆ, 'ಮೇಲೆ'-ಎಂಬುದು ಕನ್ನಡದ ಪದ, 'ಘರ್'-ಎಂದರೆ ಕನ್ನಡದಲ್ಲಿ "ಮನೆ"-ಎಂದರ್ಥ, ಉರ್ದುವಿನ 'ಘರ್'-ಎಂಬ ಪದಕ್ಕೆ, ಕನ್ನಡದ 'ಮೇಲೆ'-ಎಂಬ ಪದ ಹತ್ತಿ "ಘರ್ ಮೇಲೆ" ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ಘರ್ ಮೇಲೆ ಆಯ್ ತಿ ನೋಡು.

೧೯. **ಖಾನ ಆಯ್ತಾ :-** ‘ಖಾನ’-ಎಂದರೆ ‘ಊಟ’-ಎಂದರ್ಥ, ‘ಖಾನ-ಎಂಬುದು ಉರ್ದುವಿನ ಪದ, ‘ಆಯ್ತಾ’-ಎಂಬುದು ಕನ್ನಡದ ಪದ, ‘ಖಾನ ಆಯ್ತಾ’-ಎಂದರೆ ‘ಊಟ ಆಯಿತ’-ಎಂದರ್ಥ ಉರ್ದುವಿನ ‘ಖಾನ’-ಎಂಬ ಪದಕ್ಕೆ ಕನ್ನಡದ ‘ಆಯ್ತಾ’ ಎಂಬ ಪದ ಕೂಡಿಕೊಂಡು ‘ಖಾನ ಆಯ್ತಾ’-ಎಂದು ಉಚ್ಚಾರಣೆಯಲ್ಲಿದೆ.

ಉದಾ :- ನಿಮ್‌ದು ಖಾನ ಆಯ್ತಾ.

೨೦. **ಸೂರಿಜ್ ಐತೆ :-** “ಸೂರಿಜ್ ಐತೆ”-ಎಂದರೆ ‘ಸೂರ್ಯ ಇದ್ದಾನೆ’-ಎಂದರ್ಥ ‘ಸೂರಿಜ್’-ಎಂಬುದು ಉರ್ದುವಿನ ಪದ, ‘ಐತೆ’-ಎಂಬುದು ಕನ್ನಡದ ಪದ ಉರ್ದುವಿನ ‘ಸೂರಿಜ್’-ಪದಕ್ಕೆ ಕನ್ನಡದ ‘ಐತೆ’-ಎಂಬ ಪದ ಮಿಲನಗೊಂಡು “ಸೂರಿಜ್ ಪಿತೆ”-ಎಂದು ಬಳಕೆಯಾಗುತ್ತದೆ.

ಉದಾ :- ಇನ್ನು ಸೂರಿಜ್ ಐತೆಎ ಮುನುಗಿಲ್ಲ

೨೧. **ಬಿಜಿಲಿ ಎಲ್ಲೇತೆ :-** ‘ಬಿಜಿಲಿ’-ಎಂಬುದು ಉರ್ದುಪದ, “ಎಲ್ಲೇತೆ”-ಎಂಬುದು ಕನ್ನಡದ ಪದ, ‘ಬಿಜಿಲಿ ಎಲ್ಲೇತೆ’-ಎಂದರೆ “ಬೆಳಕು ಎಲ್ಲೇತೆ” ಅಥವಾ “ಮಿಂಚು ಎಲ್ಲಿದೆ”-ಎಂದರ್ಥ, ಉರ್ದುವಿನ ‘ಬಿಜಿಲಿ’-ಎಂಬ ಪದಕ್ಕೆ ಕನ್ನಡದ “ಎಲ್ಲೇತೆ”-ಎಂಬ ಪದ ಸೇರಿ ಕೊಂಡು ‘ಬಿಜಿಲಿ ಎಲ್ಲೇತೆ’-ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಇವೊತ್ತು ‘ಬಿಜಿಲಿ ಎಲ್ಲೇತೆ’ ಮಲಿ ಬರಕೆ !

೨೨. **ಸಾಂಪೂಕ ಹೊಡಿ :-** ‘ಸಾಂಪೂ’-ಎಂಬುದು ಉರ್ದು ಪದ, ‘ಹೊಡಿ’-ಎಂಬುದು ಕನ್ನಡದ ಕ್ರಿಯಾಪದ, ‘ಸಾಂಪೂಕ ಹೊಡಿ’-ಎಂದರೆ ‘ಹಾವನ್ನು ಹೊಡಿ’ ಎಂದರ್ಥ, ಇಂಡೋಃ ಆರ್ಯಯನ್ ಭಾಷೆಗಳಲ್ಲಿ ಸಹಾಯಕ ಪದಗಳು ಇರುತ್ತವೆ, ಹಾಗಾಗಿ ಉರ್ದು ಇಂಡೋಃ ಆರ್ಯಯನ್ ಭಾಷಾ ಕುಟುಂಬಕ್ಕೆ ಸೇರಿರುವುದರಿಂದ ‘ಕ’-ಎಂಬ ಸಹಾಯಕ ಪದ ಇಲ್ಲಿ ಬಂದಿದೆ. ಉರ್ದುವಿನ ‘ಸಾಂಪೂ’-ಎಂಬ ಪದಕ್ಕೆ ಕನ್ನಡದ ‘ಹೊಡೆ’-ಎಂಬ ಪದ ಕೂಡಿಕೊಂಡು “ಸಾಂಪುಕಹೊಡಿ”-ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ಭೈಯಾ ಸಾಂಪೂಕ ಹೊಡಿ ಬೇಕು ಬಾಬಾ ಎಲ್ಲಿ !

೨೩. ಜಚಕಿ ಆಯ್‌ತ :-

‘ಜಚಕಿ’-ಎಂಬುದು ಉರ್ದುಪದ, ‘ಆಯ್‌ತ’-ಎಂಬುದು ಉರ್ದುಪದ, ‘ಜಚಕಿ”-ಎಂದರೆ ‘ಹೆರಿಗೆ’-ಎಂದರ್ಥ, ‘ಜಚಕಿ ಆಯ್ತ್ತ’ ಎಂದರೆ ‘ಹೆರಿಗೆ ಆಯಿತೆ’-ಎಂದರ್ಥ, ಉರ್ದುವಿನ ‘ಜಚಕಿ’-ಎಂಬ ಪದಕ್ಕೆ ಕನ್ನಡದ ‘ಆಯ್‌ತ’-ಎಂಬ ಪದ ಸೇರಿ ‘ಜಚಕಿ ಆಯ್‌ತ’ ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ನಿಮ್ ಭೇಟಿಗೆ ಜಚಕಿ ಆಯ್ ತ

ಕನ್ನಡ ಮತ್ತು ಉರ್ದು ಮಾದರಿಗಳು

೧. ಬಸ್ ಮೇ ಚಾಡ್ :- 'ಬಸ್'-ಎಂಬುದು ಇಂಗ್ಲಿಷ್‌ನಿಂದ ಕನ್ನಡಕ್ಕೆ ಬಂದ ಎರವಲು ಪದ, ಇದು ಬಳ್ಳಾರಿ ಉರ್ದು ಭಾಷಿಕರ ಕನ್ನಡದಲ್ಲಿ ಹಾಗಿಯೇ ಬಳಕೆಯಲ್ಲಿದೆ. 'ಮೇ ಚಾಡ್'-ಎಂಬುದು ಉರ್ದು ಪದ, ಇದಕ್ಕೆ ಕನ್ನಡದಲ್ಲಿ 'ಏರು'-ಎಂದರ್ಥ, ಬರಹದ ಕನ್ನಡದಲ್ಲಿ 'ಬಸ್ಸುಏರು', 'ಬಸ್ಸುಹತ್ತು' ಎನ್ನುವ ಅರ್ಥಕ್ಕೆ ಬಳ್ಳಾರಿ ನಗರದ ಉರ್ದು ಭಾಷಿಕರ ಕನ್ನಡದಲ್ಲಿ "ಬಸ್ ಮೇ ಚಾಡ್" ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ಬಸ್ ಮೇ ಚಾಡ್ ಜಲ್ದಿ ಚಲ್ತಾ ಹೈ.

೨. ಅವಸರ ಕರ್‌ನೋ ಕೋ :- 'ಅವಸರ' ಎಂಬುವುದು ಕನ್ನಡದ ಪದ, "ಕರ್‌ನೋಕೋ"-ಎಂಬುದು ಉರ್ದುಪದ, "ಅವಸರ ಕರ್‌ನೋಕೋ" ಎಂದರೆ 'ಅವಸರ ಮಾಡ ಬೇಡ್ರಿ' ಎಂದರ್ಥ, ಕನ್ನಡದ 'ಅವಸರ' ಎಂಬ ಪದಕ್ಕೆ ಉರ್ದುವಿನ 'ಕರ್‌ನೋಕೋ' ಎಂಬ ಪದ ಸೇರಿಕೊಂಡು 'ಅವಸರ ಕರ್‌ನೋಕೋ' ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ಮುಜೆ ನಹಿ ಅವಸರ ಕರ್ ನೋಕೋ

(ನನಿಗೆ ಅವಸರ ಮಾಡಬೇಡ್ರಿ)

೩. ಜಾಸ್ತಿ ಬಾತ್ :- 'ಜಾಸ್ತಿ ಬಾತ್'-ಎಂದರೆ 'ಅತಿಮಾತು', 'ಹೆಚ್ಚುಮಾತು' ಎಂದರ್ಥ, 'ಜಾಸ್ತಿ' ಎಂಬುದು ಕನ್ನಡದ ಪದವಾದರೆ, ಇಲ್ಲಿ 'ಬಾತ್' ಎಂಬುದು ಉರ್ದು ಪದ ಕನ್ನಡದ 'ಜಾಸ್ತಿ' ಎಂಬ ಪದಕ್ಕೆ, ಉರ್ದುವಿನ 'ಬಾತ್' ಎಂಬುದು ಉರ್ದು ಪದ, ಕೂಡಿಕೊಂಡು 'ಜಾಸ್ತಿ ಬಾತ್' ಎಂದು ರೂಪಗೊಂಡು ಬಳಕೆಯಲ್ಲಿದೆ.

ಉದಾ :- ಜಾಸ್ತಿ ಬಾತ್ ನಹಿ, ತುಮೆ ಕ್ಯಾ ಕರ್ತ

೪. ಜಲ್ದಿ ಕಾಮ್ ಕರೋ :- ಕನ್ನಡದ ಪದ 'ಜಲ್ದಿ' ಎಂಬುವುದಾದರೆ, 'ಕಾಮ್‌ಕರೋ' ಎಂಬುದು ಉರ್ದುಪದ, "ಜಲ್ದಿ ಕಮ್ ಕರೋ" ಎಂದರೆ "ಬೇಗ ಕೆಲಸ ಮಾಡು" ಎಂದರ್ಥ, ಕನ್ನಡದ ಪೂರ್ವಪದ ಜಲ್ದಿ ಎಂಬುದಕ್ಕೆ ಉರ್ದುವಿನ 'ಕಾಮ್ ಕರೋ' ಎಂಬ ಪದ ಬೆರೆತು 'ಜಲ್ದಿ ಕಾಮ್ ಕರೋ' ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ಜಲ್ದಿ ಕಾಮ್ ಕರೋಪ ಟೇಮ್ ಇಲ್ಲ !

೫. ಎದುರುಜವಾಬ್ :-

ಅಚ್ಚಗನ್ನಡದ ಶಬ್ದ 'ಎದುರು', ಉರ್ದುಪದ ಜವಾಬ್ "ಎದುರು ಜವಾಬ್" ಎಂದರೆ 'ಎದುರು ಮಾತು " ಪ್ರತ್ಯುತ್ತರ" ಮರುಮಾತು ಎಂಬಂತಹ ಅರ್ಥಗಳುಂಟು, 'ಎದುರು' ಎಂಬ ಕನ್ನಡದ ಪೂರ್ವಪದಕ್ಕೆ 'ಜವಾಬ್' ಎಂಬ ಉತ್ತರ ಪದ ಬೆರೆತುಕೊಂಡಿದ್ದರಿಂದ 'ಎದುರುಜವಾಬ್' ಎಂಬ ನುಡಿಬೆರಕೆ ಬಳಕೆಯಲ್ಲಿದೆ.

ಉದಾ :- ನನ್ಗ ಎದುರು ಜವಾಬ್ ಕೊಡ್ತಾನ ದೋಕಾಬಾದ್.

೬. ಗುಲಾಬ್ ಕ ಪೂಲ್ :-

'ಗುಲಾಬ್' ಎಂಬುದು ಕನ್ನಡದ ಪದ 'ಪೂಲ್' ಎಂಬುವುದು ಉರ್ದುಪದ 'ಗುಲಾಬ್ ಕ ಪೂಲ್' ಎಂದರೆ "ಗುಲಾಬಿಯ ಹೂವೂ" ಎಂದರ್ಥ, 'ಕ' ಎಂಬುದು ಇಂಡೋ ಆರ್ಯಯನ್ ಭಾಷೆಯ ಸಹಾಯಕ ಪದ, 'ಗುಲಾಬ್ ಕ' ಎಂದರೆ "ಗುಲಾಬಿಯ" ಎಂದರ್ಥ ಕನ್ನಡದ "ಗುಲಾಬ್" ಎಂಬ ಪದಕ್ಕೆ ಉರ್ದು ಭಾಷೆಯ 'ಪೂಲ್' ಎಂಬ ಪದ ಬೆರೆತುಕೊಂಡು 'ಗುಲಾಬ್ ಕ ಪೂಲ್' ಎಂದು ಉಚ್ಚಾರಿಸಲ್ಪಡುತ್ತದೆ.

ಉದಾ :- 'ಗುಲಾಬ್ ಕ ಪೂಲ್ ನಹಿ ಹಾತ'

೭. ದೊಡ್ಡಿ ಜಾಕಾತು :-

'ದೊಡ್ಡಿ'-ಎಂಬುದು ಕನ್ನಡದ ಸ್ವೀಕೃತ ಪದ 'ಜಾಕಾತು' ಎಂಬುದು ಉರ್ದುಪದ 'ದೊಡ್ಡಿ ಜಾಕಾತು' ಎಂದರೆ 'ದೊಡ್ಡಿಗೆ ಹೋಗುತ್ತೇನೆ' "ಬಹಿರ್ದೆಸೆಗೆ ಹೋಗುತ್ತೇನೆ" ಎಂದರ್ಥ, ಕನ್ನಡದ 'ದೊಡ್ಡಿ' ಎಂಬ ಸ್ವೀಕೃತ ಪದಕ್ಕೆ ಉರ್ದುವಿನ 'ಜಾಕಾತು' ಎಂಬ ನುಡಿ ಬೆರತು "ದೊಡ್ಡಿ ಜಾಕಾತು" ಎಂದು ಬಳಕೆಗೊಳ್ಳುತ್ತದೆ.

ಉದಾ :- 'ಮೈ ದೊಡ್ಡಿ ಜಾಕಾತು ಆಂ'

೮. ಸುನ್ನ ಮಾಲ್ :-

'ಸುನ್ನ' ಎಂದರೆ 'ಸುಣ್ಣ' ಎಂದರ್ಥ, ಬಳ್ಳಾರಿ ನಗರದಲ್ಲಿ ತೆಲುಗು ಪ್ರಭಾವ ದಟ್ಟವಾಗಿರುವುದರಿಂದ 'ಣ' ಕಾರ ತೆಲುಗಿನಂತೆ 'ನ' ಕಾರವಾಗಿ ಉಚ್ಚರಿಸಲ್ಪಡುತ್ತದೆ. ಸುನ್ನ ಎಂದರೆ ಅಲ್ಲಿ ಸುಣ್ಣ ಎಂದೇ ಅರ್ಥ, ಕನ್ನಡದ ಪದ ಈ ಸುಣ್ಣವಾದರೆ, ಉರ್ದುಪದ 'ಮಾಲ್' ಎಂದರೆ, ಬಳಿ, ಹಚ್ಚು, ಹೊಡಿ, ಎಂಬ ಅರ್ಥಗಳಿವೆ. 'ಸುನ್ನ ಮಾಲ್' ಎಂದರೆ 'ಸುಣ್ಣವನ್ನು ಬಳಿ', 'ಸುಣ್ಣವನ್ನು ಹಚ್ಚು' ಎಂದರ್ಥ, ಕನ್ನಡ 'ಸುನ್ನ' ಎಂಬ ಪದಕ್ಕೆ ಉರ್ದುವಿನ 'ಮಾಲ್' ಎಂಬ ಪದ ಬೆರೆತು 'ಸುನ್ನ ಮಾಲ್' ಎಂದಾಗಿ ಉಚ್ಚರಿಸಲ್ಪಡುತ್ತದೆ.

ಉದಾ :- ಗೋಡೆಗೆ ಸುನ್ನ ಮಾಲ್ ರೆ ಕಾಸಿಂ.

೯. ಜಮಕಾನ್/ಜಮಖಾನ್ ಬಡೇ ಹೈ :- 'ಜಮಕಾನ' ಎಂಬುದು ಕನ್ನಡದ ಸ್ವೀಕೃತ ಪದ. 'ಬಡೇ' ಎಂಬುದು ಉರ್ದುಪದ. 'ಜಮಖಾನಬಡೆ' ಎಂದರೆ 'ಜಮಖಾನ ದೊಡ್ಡದು' ಎಂದರ್ಥ,ಕನ್ನಡದ. 'ಜಮಖಾನ್' ಎಂಬ ಪದಕ್ಕೆ ಉರ್ದುವಿನ 'ಬಡೇ' ಎಂಬ ಪದ ಸೇರಿಸಿ 'ಜಮಖಾನ್ ಬಡೆ' ಎಂದು ಉಚ್ಚಾರಿಸಲಾಗುತ್ತದೆ.

ಉದಾ :- 'ಜಮಖಾನ್ ಬಡೇ ಹೈ'

೧೦. ಶುಭ ಹೋಗಯ್ :- 'ಶುಭ' ಎಂಬುದು ಕನ್ನಡದ ಪದ, 'ಹೋಗಯ್' ಎಂಬುದು ಉರ್ದುಪದ, 'ಶುಭ ಹೋಗಯ್' ಎಂದರೆ 'ಬೆಳಗಾಯಿತು' ಎಂದರ್ಥ ಹಾಗಿಯೇ 'ಒಳ್ಳೆಯದಾಯಿತು' ಎಂತಲೂ ಅರ್ಥೈಹಿಸುತ್ತದೆ. ಕನ್ನಡದ ಶುಭ ಪದಕ್ಕೆ ಉರ್ದುವಿನ 'ಹೋಗಯ್' ಪದ ಬೆರೆತುಕೊಂಡು 'ಶುಭ ಹೋಗಯ್' ಎಂದು ಉಚ್ಚಾರಣೆಯಾಗುತ್ತದೆ.

ಉದಾ :- 'ಶಭಾಶ್ ಬೈಯಾ ಶುಭ ಹೋಗಯ್'

೧೧. ನಿಮ್ ಭೇಟ :- 'ನಿಮ್' ಎಂಬುದು ಕನ್ನಡದ ಪದ, 'ಭೇಟ' ಎಂಬುದು ಉರ್ದುಪದ 'ನಿಮ್ ಭೇಟ' ಎಂದರೆ 'ನಿಮ್ಮ ಮಗ' ಎಂದರ್ಥ ಕನ್ನಡದ 'ನಿಮ್' ಎಂಬ ಪದದ ಜೊತೆ ಉರ್ದುವಿನ 'ಭೇಟ' ಎಂಬ ಪದ ಸೇರಿ 'ನಿಮ್ ಭೇಟ' ಎಂದು ಬಳ್ಳಾರಿ ನಗರದ ಉರ್ದು ಭಾಷಿಕಾ ಕನ್ನಡಿಗರಲ್ಲಿ ಉಚ್ಚಾರಣೆಗೊಳ್ಳುತ್ತದೆ.

ಉದಾ :- ನಿಮ್ ಭೇಟಾಗೆ ಕಲ್ಸು ಕೊಡ್ತಿನಿ.

೧೨. ಬೀದಿ ಭಾಗ್‌ಕ ಜಾಗ್ :- 'ಬೀದಿ' ಎಂಬುದು ಕನ್ನಡದ ಪದ 'ಭಾಗ್‌ಕ ಜಾಗ್' ಎಂಬುದು ಉರ್ದುಪದ, 'ಬೀದಿ ಭಾಗ್ ಕ ಜಾಗ್' ಎಂದರೆ 'ಬೀದಿಯಲ್ಲಿ ಓಡುವುದು' ಎಂದರ್ಥ, ಕನ್ನಡದ ಬೀದಿ ಎಂಬ ಪದಕ್ಕೆ ಉರ್ದುವಿನ ಭಾಗ್ ಕ ಜಾಗ್ ಎಂಬ ಪದ ಮಿಶ್ರಣಗೊಂಡು 'ಬೀದಿ ಭಾಗ್ ಕ ಜಾಗ್' ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ನಹಿ ರೆ ಬೀದಿ ಭಾಗ್ ಕ ಜಾಗ್ ಡೆಂಜರ್,

೧೩. ಬಾಕಲಕ ರಂಗ್ :- 'ಬಾಕಲ್' ಎಂದರೆ ಬಾಗಿಲು 'ಬಾಕಲು' ಎಂದರ್ಥ, ಇದು ಕನ್ನಡದ ಪದ, 'ರಂಗ್' ಎಂಬುದು ಉರ್ದುಪದ, 'ಬಾಕಲಕ ರಂಗ್' ಎಂದರೆ 'ಬಾಗಿಲಿಗೆ ಬಣ್ಣ' ಎಂದರ್ಥ, ಕನ್ನಡದ 'ಬಾಕಲು' ಎಂಬ ಪದಕ್ಕೆ ಉರ್ದುವಿನ 'ರಂಗ್' ಎಂಬ ಪದ ಸೇರಿ 'ಬಾಕಲಕ ರಂಗ್' ಎಂದಾಗಿ ಬಳಕೆಗೊಳ್ಳುತ್ತದೆ.

ಉದಾ :- ಬಾಕಲ್‌ಕ ರಂಗ ಹಚ್ಚಾ ಹೈ (ಬಾಗಿಲಿನ ಬಣ್ಣ ಚೆನ್ನಾಗಿದೆ)

೧೪. ನಾಯಿ ನಿಶಾನಿ :- 'ನಾಯಿ' ಎಂಬುದು ಕನ್ನಡದ ಪದ, 'ನಿಶಾನಿ' ಎಂಬುದು ಉರ್ದುಪದ, 'ನಿಶಾನಿ' ಎಂದರೆ 'ಗುರುತು' ಎಂದರ್ಥ, ಕನ್ನಡದ ನಾಯಿ (ಕುತ್ತ) ಎಂಬ ಪದಕ್ಕೆ ಉರ್ದುವಿನ 'ನಿಶಾನಿ' ಎಂಬ ಪದ ಸೇರಿ 'ನಾಯಿ ನಿಶಾನಿ' ಎಂದು ಬಳಕೆಗೊಳ್ಳುತ್ತದೆ.

ಉದಾ :- ನಾಯಿ ನಿಶಾನಿ ಹಿಡಿತೈತಂಗ ದೇವ್ರು ಗೊತ್ ಹಿಡಿತಾನ.

೧೫. ತೆಂಕರಝಾಡ್ :- 'ತೆಂಕ' ಎಂಬುದು ಕನ್ನಡದ ಪದ, 'ಝಾಡ್' ಎಂಬುದು ಉರ್ದುಪದ 'ತೆಂಕರಝಾಡ್' ಎಂದರೆ 'ತೆಂಗಿನಮರ' ಎಂದರ್ಥ, ಕನ್ನಡದ 'ತೆಂಗಿನ' ಎಂಬ ಪದಕ್ಕೆ ಉರ್ದುವಿನ 'ಝಾಡ್' ಎಂಬ ಪದ ಎದುರಾಗಿ 'ತೆಂಕರಝಾಡ್' ಎಂದು ಉಚ್ಚಾರಣೆಗೊಳ್ಳುತ್ತದೆ.

ಉದಾ :- ನಮ್ ವಲ್ದಗಾ ತೆಂಕರಝಾಡ್ ಆಯ್ ದಾವ

ಅಧ್ಯಾಯ - ೫

ಳ್ಳಾರಿ ನಗರದ ತೆಲುಗು ಭಾಷಿಕರ ಕನ್ನಡದ ಉಚ್ಚಾರಣೆಯಲ್ಲಿ ನುಡಿಮಿಶ್ರಣ ರೂಪಗಳು

ಅಧ್ಯಾಯ – ೫

ಬಳ್ಳಾರಿ ನಗರದ ತೆಲುಗು ಭಾಷಿಕರ ಕನ್ನಡದ ಉಚ್ಚಾರಣೆಯಲ್ಲಿ ನುಡಿಮಿಶ್ರಣ ರೂಪಗಳು

ಕನ್ನಡಭಾಷೆಯಲ್ಲಿ ಬೇರೆ ಬೇರೆ ಭಾಷೆಗಳ ಪ್ರಭಾವದಿಂದ ಇತ್ತೀಚಿನ ದಿನಗಳಲ್ಲಿ ಹೊಸ ರಚನೆಯ ಉಚ್ಚಾರಣೆಯಲ್ಲಿವೆ. ಇಂತಹ ಪದಕೋಶದ ಘಟಕಗಳು ದೇಶ್ಯವೋ ಅನ್ಯದೇಶ್ಯವೋ ಎಂಬುದು ಮುಖ್ಯವಾಗದೆ ಸಂಹವನಕ್ಕೆ ಅನುಕೂಲತೆಗೆ, ಉಚ್ಚಾರಣೆಯಲ್ಲಿರುವುದು ಗಮನಿಸುವಂತಹ ಅಂಶ. ಇಂತಹ ಹೊಸ ಪ್ರಯೋಗ ಬಳ್ಳಾರಿ ನಗರದ ವ್ಯವಹಾರಿಕ ಕನ್ನಡದ ಉಚ್ಚಾರಣೆಯಲ್ಲಿ ಕಂಡುಬರುತ್ತಿದೆ. ಅಂದರೆ ತೆಲುಗರು ಕನ್ನಡಿಗರೊಂದಿಗೆ ವ್ಯವಹರಿಸುವಾಗ ಎರಡು ಹೊಸ ಮಾದರಿ ರೂಪಗಳು ಉಚ್ಚಾರಣೆಯಲ್ಲಿವೆ. ಒಂದು ಮೊದಲನೆಯ ಪದ ಕನ್ನಡವಾಗಿದ್ದು, ಎರಡನೆಯ ಪದ ತೆಲುಗು ಪದವಾಗಿರುವುದು ಉಚ್ಚಾರಣೆಯಲ್ಲಿದೆ. ಉದಾಹರಣೆಗೆ :– ಬಸ್ ಎಕ್ಕು, ಗೊತ್ ಲೇದು, ವಲ್ಲಂಟಾಡು, ಪಕ್ ಇಲ್ಲು, ಯತ್ತೊಕೋಪೊ, ಬಾಳೆಪಂಡ್ಲು, ಕೊಬ್ಬರಿಚೆಟ್ಟು, ಜಾರಿಪಡ್ಡಾಡು, ಕಷ್ಟಪಡಿತೆ, ಬಂಡಿಬಾಟ, ತಲ್ ನೊಪ್ಪಿ, ಪ್ರಾರಂಬಿಂಚು, ದಿಕ್ಕು ಲೇನಿವಾಡು, ಅಕ್ಕಚಲ್ಲಳ್ಳು, ಮಬ್ಬುಲಾಕಿ, ಕಾಯಿಗುರ್ಲು, ವತ್ತಿಪೆಟ್ಟುಕೋ, ಬುದ್ಧಿವಂತಡು, ಅಭಿಪ್ರಾಯಮು, ಉರ್ಲುಗಡ್ಡೆ, ಮುಂತಾದ ಕನ್ನಡ ತೆಲುಗು ನುಡಿಮಿಶ್ರಣ ರೂಪಗಳು ಉಚ್ಚಾರಣೆಯಲ್ಲಿವೆ. ಹಾಗೆಯೇ ಮೊದಲನೆಯ ಪದ ತೆಲುಗುವಾಗಿದ್ದು, ಎರಡನೆಯ ಪದ ಕನ್ನಡಪದ ಸೇರಿಕೊಂಡು ಬಳ್ಳಾರಿ ನಗರದ ವ್ಯವಹಾರಿಕ ಕನ್ನಡದಲ್ಲಿ ಉಚ್ಚಾರಣೆಯಲ್ಲಿದೆ.
ಉದಾಹರಣೆಗೆ :– ಒಕರೂಪಾಯಿ, ಡಬ್ಬು, ಅಯ್ ತ್ಯಾ, ದೊಂಗಕದ್ರೆ, ಟೆಂಕಾಯಿ, ಮುಂತಾದ ಪದಗಳು.

ಮೇಲಿನ ಎರಡು ಮಾದರಿಗಳೂ ನಿರ್ಧಿಷ್ಟವಲಯದಲ್ಲಿ ಉಚ್ಚಾರಣೆಯಲ್ಲಿವೆ. ಇಂತಹ ನುಡಿ ಮಿಶ್ರಣ ರಚನೆಗಳನ್ನು ಯಾವ ಭಾಷಾ ವ್ಯವಹಾರಕ್ಕೆ ಸೇರಿಸುವುದು ಎನ್ನುವುದು ಪ್ರಸ್ತುತ ಭಾಗದ ಚರ್ಚೆಯಾಗಿದೆ. ಇಲ್ಲಿ ಉಚ್ಚಾರಣೆಯಲ್ಲಿರುವ ಹೊಸ ರಚನೆಗಳು ಯಾವ ಭಾಷೆಗೂ ಅರ್ಥದ ದೃಷ್ಟಿಯಿಂದ ವ್ಯತ್ಯಾಸವಾಗದೇ ಆಡುಗನ ಉದ್ದೇಶಕ್ಕೆ ತಕ್ಕಂತೆ ಉಚ್ಚಾರಣೆಯಲ್ಲಿವೆ. ಇಂತಹ ಹಿನ್ನೆಲೆಯುಳ್ಳ ರಚನೆಗಳ ವಿವರಣೆಯನ್ನು ಮುಂದೆ ಚರ್ಚೆಮಾಡಲಾಗಿದೆ.

ಬಳ್ಳಾರಿ ನಗರದ ವ್ಯವಹಾರಿಕ ಕನ್ನಡದಲ್ಲಿ ಉಚ್ಚಾರಣೆಯಲ್ಲಿ ಕನ್ನಡ ಮತ್ತು ತೆಲುಗು, ತೆಲುಗು ಮತ್ತು ಕನ್ನಡ ಎಂಬೆರಡು ಮಾದರಿಯ ರಚನೆಗಳುಳ್ಳ (ನುಡಿ ಮಿಶ್ರಣ) ಪದಗಳೂ ಕಂಡು ಬರುತ್ತವೆ. ಈ ಮಾದರಿಯ ರಚನೆಗಳು ವ್ಯಾಪಕವಾಗಿ ಉಚ್ಚಾರಣೆಯಲ್ಲಿ ಬಳಕೆಯಲ್ಲಿಲ್ಲದಿದ್ದರೂ, ಗಡಿಭಾಗಗಳಲ್ಲಿ ತೆಲುಗರು ಪ್ರಭಾವವಿರುವ ನಿರ್ಧಿಷ್ಟ ವಲಯಗಳಲ್ಲಿ ಬಳಕೆಯಲ್ಲಿವೆ.

೧. ಬಸ್ ಯಕ್ಕು :- 'ಬಸ್' ಇಂಗ್ಲಿಷ್‌ನಿಂದ ಬಂದ ಎರವಲು ಪದ. ಇದು ಬಳ್ಳಾರಿ ನಗರದ ಕನ್ನಡದಲ್ಲಿ ಹಾಗೆಯೇ ಬಳಕೆಯಲ್ಲಿದೆ. 'ಎಕ್ಕು' ಎನ್ನುವದು ತೆಲುಗಿನ ಪದವಾಗಿದೆ. ಇದಕ್ಕೆ ಕನ್ನಡದ ಅರ್ಥ 'ಏರು' ಎಂದಿದೆ. ಬರಹದ ಕನ್ನಡದಲ್ಲಿ 'ಬಸ್ಸು ಏರು' ಎನ್ನುವ ಅರ್ಥಕ್ಕೆ ಬಳ್ಳಾರಿ ನಗರ ಕನ್ನಡದಲ್ಲಿ ಬಸ್ಸು ಯಕ್ಕು ಉಚ್ಚಾರಣೆಯಲ್ಲಿದೆ.

ಉದಾ :- ಬಸ್ಸು ಎಕ್ಕು ಜಲ್ದಿ ವೋತತಿ.

೨. ಗೊತ್ ಲೇದು :- 'ಗೊತ್ತು' ಎನ್ನುವುದು ಕನ್ನಡದ ಪದ 'ಲೇದು' ಎನ್ನುವುದು ತೆಲುಗಿನ ಪದ. ತೆಲುಗಿನ 'ಲೇದು' ಎನ್ನುವುದಕ್ಕೆ ಕನ್ನಡದಲ್ಲಿ 'ಇಲ್ಲ' ಎಂದು ಅರ್ಥ. 'ಗೊತ್ತು' ಎನ್ನುವ ಕನ್ನಡ ಪದಕ್ಕೆ ಲೇದು ಎನ್ನುವ ತೆಲುಗಿನ ಪದ ಸೇರಿಕೊಂಡು 'ಗೊತ್ತು ಲೇದು' ಹಾಗಿ ಉಚ್ಚಾರಣೆಯಲ್ಲಿದೆ.

ಉದಾ :- ಇವತ್ತು ಮಲಿ ಬರ್‌ತೆತೊ ಇಲ್ಲೊ ಗೊತ್‌ಲೇದು.

೩. ವಲ್ಲಂಟಾಡು :- 'ವಲ್ಲೆ' ಎನ್ನುವುದು ಕನ್ನಡ ಪದ. 'ಅಂಟಾಡು' ಎನ್ನುವುದು ತೆಲುಗಿನ ಪದ. ತೆಲುಗಿನ 'ಅಂಟಾಡು' ಎನ್ನುವುದಕ್ಕೆ ಕನ್ನಡದಲ್ಲಿ 'ಅನ್ನುತ್ತಾನೆ'. ಎಂದು ಅರ್ಥವಿದೆ. 'ವಲ್ಲೆ' ಎನ್ನುವ ಕನ್ನಡ ಪದಕ್ಕೆ 'ಅಂಟಾಡು' ಎನ್ನುವ ತೆಲುಗಿನ ಪದ ಸೇರಿಕೊಂಡು ವಲ್ಲಂಟಾಡು ಆಗಿ ಉಚ್ಚಾರಣೆಯಲ್ಲಿ ಇದೆ.

ಉದಾ :- ಪಿಲ್ಲಲು ಊಟಕ ವಲ್ಲಂಟಡು ಮಾಮ.

೪. ಪಕ್ಕ್ ಇಲ್ಲು :- 'ಪಕ್ಕ್ ಇಲ್ಲು' ಎಂದರೆ ಕನ್ನಡದಲ್ಲಿ 'ಬಗಲು ಮನೆ' ,'ಪಕ್ಕದ ಮನೆ' ಎಂಬ ಅರ್ಥಗಳಿವೆ. ಇಲ್ಲು ಎನ್ನುವುದು ತೆಲುಗಿನ ಪದ ಇದಕ್ಕೆ ಕನ್ನಡದ ಅರ್ಥ 'ಮನೆ' ಎಂದು, ಕನ್ನಡದ 'ಪಕ್ಕದ' ಎಂಬ ಪದಕ್ಕೆ ತೆಲುಗಿನ 'ಇಲ್ಲು' ಎಂಬ ಪದ ಸೇರಿಕೊಂಡು 'ಪಕ್ಕ್ ಇಲ್ಲು' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ನಮ್ ಪಕ್ಕ್ ಇಲ್ಲುಲು ಕಲ್‌ತನ ಆಗಿರದು.

೫. ಯತ್ತ ಕೋ ಪೊ :- 'ಯತ್ ಕೋ' ಎನ್ನುವುದು ಕನ್ನಡ ಪದ. 'ಪೋ' ಎನ್ನುವುದು ತೆಲುಗಿನ ಪದ. 'ಪೋ' ಎನ್ನುವುದಕ್ಕೆ ಕನ್ನಡದಲ್ಲಿ 'ಹೋಗು' ಎಂದರ್ಥ 'ಯತ್ ಕೋ' ಅನ್ನುವ ಕನ್ನಡ ಪದಕ್ಕೆ 'ಪೋ' ಎನ್ನುವ ತೆಲುಗಿನ ಪದ ಸೇರಿಕೊಂಡು 'ಯತ್ ಕೋ ಪೋ' ಆಗಿ ಉಚ್ಚಾರಣೆಯಲ್ಲಿದೆ.

ಉದಾ :- ಬಿಸಿಲೆತೆ ಆ ಪಿಲ್ಲಲು ಯತ್‌ಕೋಪೋ.

೬. ಬಾಳೆಪಂಡ್ಲು :- 'ಬಾಳೆ' ಎನ್ನುವುದು ಕನ್ನಡ ಪದ. 'ಪಂಡ್ಲು' ಎನ್ನುವುದು ತೆಲುಗಿನ ಪದ. 'ಪಂಡ್ಲು' ಎನ್ನುವುದಕ್ಕೆ ಹಣ್ಣುಗಳು ಎಂದರ್ಥ. 'ಬಾಳೆ' ಅನ್ನುವ ಕನ್ನಡ ಪದಕ್ಕೆ ಪಂಡ್ಲು ಎನ್ನುವ ತೆಲುಗಿನ ಪದ ಸೇರಿಕೊಂಡು 'ಬಾಳೆ ಪಂಡ್ಲು' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಬಾಳೆಪಂಡ್ಲು ಉನ್ನಾವ, ಎಂದಕು ಒಕ್ಕ.

೭. ಕೊಬ್ಬರಿ ಚೆಟ್ಟು :- 'ಕೊಬ್ಬರಿ' ಎನ್ನುವುದು ಕನ್ನಡ ಪದ 'ಚೆಟ್ಟು' ಎನ್ನುವುದು ತೆಲುಗಿನ ಪದ. ಚೆಟ್ಟು ಎನ್ನುವುದಕ್ಕೆ ಕನ್ನಡದಲ್ಲಿ ಗಿಡ ಎಂದರ್ಥ 'ಕೊಬ್ಬರಿ ಎನ್ನುವ ಕನ್ನಡ ಪದಕ್ಕೆ 'ಚೆಟ್ಟು' ಎನ್ನುವ ತೆಲುಗಿನ ಪದ ಸೇರಿಕೊಂಡು ಕೊಬ್ಬರಿ ಚೆಟ್ಟು ಆಗಿದೆ. ಕೊಬ್ಬರಿ ಚೆಟ್ಟು ಎಂದರೆ ತೆಂಗಿನ ಮರ ಎಂದು ಅರ್ಥ.

ಉದಾ :- ನಿಂಗೆ ಕೊಬ್ಬರಿಚೆಟ್ಟು ಅತ್ತಾಕ ಬರ್ತೆತ.

೮. ಜಾರಿಪಡ್ಡಾಡು :- 'ಜಾರಿ' ಎನ್ನುವುದು ಕನ್ನಡ ಪದ. 'ಪಡ್ಡಾಡು' ಎನ್ನುವುದು ತೆಲುಗು ಪದ. 'ಪಡ್ಡಾಡು' ಎನ್ನುವುದಕ್ಕೆ ಕನ್ನಡದ ಅರ್ಥ 'ಬಿದ್ದಿದ್ದಾನೆ'. ಜಾರಿ ಎನ್ನುವ ಕನ್ನಡ ಪದಕ್ಕೆ 'ಪಡ್ಡಾಡು' ಎನ್ನುವ ತೆಲುಗಿನ ಪದ ಸೇರಿಕೊಂಡು ಜಾರಿ ಪಡ್ಡಾಡು ಎಂದು ಉಚ್ಚಾರಣೆಯಲ್ಲಿರುವುದು ಗಮನಾರ್ಹ ವಿಚಾರ.

ಉದಾ :- ಚರಂಡಿಲು ಮಾಮ ಜಾರಿ ಪಡ್ಡಾಡು.

೯. ಕಷ್ಟಪಡಿತೆ :- 'ಕಷ್ಟ' ಎನ್ನುವುದು ಕನ್ನಡದ ಪದ. 'ಪಡಿತೆ' ಎನ್ನುವದು ತೆಲುಗಿನ ಪದ 'ಪಡಿತೆ' ಎಂದರೆ ಕನ್ನಡದಲ್ಲಿ 'ಬಿದ್ದರೆ' ಎಂದರ್ಥ. 'ಕಷ್ಟ' ಎನ್ನುವ ಕನ್ನಡ ಪದಕ್ಕೆ 'ಪಡಿತೆ' ಎನ್ನುವ ತೆಲುಗಿನ ಪದ ಸೇರಿಕೊಂಡು 'ಕಷ್ಟಪಡಿತೆ' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಸಿನಿಮಾ ಟಿಕಿಟಲು ಕಷ್ಟಪಡಿತೆ ತೀಸ್‌ಕೊಂತನು.

೧೦. ಬಂಡಿಬಾಟ :- 'ಬಂಡಿ' ಎನ್ನುವುದು ಕನ್ನಡದ ಪದ 'ಬಾಟ' ಎನ್ನುವುದು ತೆಲುಗಿನ ಪದ. 'ಬಾಟ' ಎಂದರೆ ಕನ್ನಡದ ಅರ್ಥ 'ದಾರಿ' ಎಂದು 'ಬಂಡಿ' ಎನ್ನುವ ಕನ್ನಡ ಪದಕ್ಕೆ 'ಬಾಟ' ಎಂಬ ತೆಲುಗಿನ ಪದ ಸೇರಿಕೊಂಡು 'ಬಂಡಿಬಾಟ' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಬಂಡಿ ಬಾಟ ಪಕ್ಕಿಲೆ ರಿಜೀಡ್‌ಗಿಡ ಅಯ್‌ತೆ.

೧೧. **ತಲ್ ನೊಪ್ಪಿ** :- 'ತಲೆ' ಎನ್ನುವುದು ಕನ್ನಡದ ಪದ. 'ನೊಪ್ಪಿ' ಎನ್ನುವುದು ತೆಲುಗಿನ ಪದ. ತೆಲುಗಿನ 'ನೊಪ್ಪಿ' ಎಂದರೆ 'ನೋವು' ಎಂದು ಅರ್ಥ. 'ತಲೆ' ಎಂಬ ಕನ್ನಡ ಪದಕ್ಕೆ 'ನೊಪ್ಪಿ' ಎಂಬ ತೆಲುಗಿನ ಪದ ಸೇರಿಕೊಂಡು 'ತಲ್ ನೊಪ್ಪಿ' ಆಗಿ ಉಚ್ಚಾರಣೆಯಲ್ಲಿದೆ.

ಉದಾ :- ಇವತ್ತು ತುಂಬ ಓದಿನಿ ಅದಕ್ಕೆ 'ತಲ್ ನೊಪ್ಪಿ ಬಂದೇತಿ' ಗುಳಿಗೆ ಕೊಡಿ.

೧೨. ಕಾಯಿಗೂರ್ಲು :- 'ಕಾಯಿ' ಎನ್ನುವುದು ಕನ್ನಡದ ಪದ. 'ಗೂರ್ಲು' ಎನ್ನುವುದು ತೆಲುಗಿನ ಪದ 'ಗೊರ್ಲು' ಎನ್ನುವುದಕ್ಕೆ ಕನ್ನಡದಲ್ಲಿ 'ಪಲ್ಯ' ಎಂದು ಅರ್ಥ. 'ಕಾಯಿ' ಎನ್ನುವ ಕನ್ನಡ ಪದಕ್ಕೆ 'ಗೊರ್ಲು' ಎನ್ನುವ ಪದ ಸೇರಿಕೊಂಡು 'ಕಾಯಿಗೊರ್ಲು' ಆಗಿ ಉಚ್ಚಾರಣೆಯಲ್ಲಿದೆ.

ಉದಾ :- ನಮ್ ತ್ವಾಟದಾಗ 'ಕಾಯಿಗೂರ್ಲು' ಅಚ್ಚೀವಿ.

೧೩. **ವತ್ತಿಪಟ್ಟುಕೋ** :- 'ವತ್ತಿ' ಎನ್ನುವುದು ಕನ್ನಡದ ಪದ. 'ಪಟ್ಟು' ಎನ್ನುವುದು ತೆಲುಗಿನ ಪದ. ತೆಲುಗಿನಲ್ಲಿ 'ಪಟ್ಟುಕೋ' ಅಂದರೆ 'ಹಿಡಿಕೊ' ಎಂದು ಅರ್ಥ. ಕನ್ನಡದ 'ವತ್ತಿ' ತೆಲುಗಿನ 'ಪಟ್ಟುಕೊ' ಪದಗಳು ಸೇರಿಕೊಂಡು 'ವತ್ತಿಪಟ್ಟುಕೊ' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಏನಿ ಪತ್ತಿ ಪಟ್ಟುಕೋ ಮೆಲೆ ಅತ್ತಿನಿ.

೧೪. **ಬುದ್ಧಿವಂತಡು** :- 'ಬುದ್ಧಿ' ಎನ್ನುವುದು ಕನ್ನಡದ ಪದ. 'ಅಡು' ಎನ್ನುವುದು ತೆಲುಗಿನ ಪದ. 'ಬುದ್ಧಿವಂತಡು' ಎಂದರೆ 'ಬುದ್ಧಿವಂತ' ಎಂದು ಅರ್ಥ. ಕನ್ನಡದ 'ಬುದ್ಧಿವಂತ' ಪದಕ್ಕೆ ತೆಲುಗಿನ 'ಅಡು' ಸೇರಿಕೊಂಡು 'ಬುದ್ಧಿವಂತಡು' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ನಮ್ ಸಾಲಿಲಿ ಕನ್ನಡ ಟೀಚರ್ ಬುದ್ಧಿವಂತಡು ಉನ್ನಾರು.

೧೫. ಅಭಿಪ್ರಾಯಮು :- 'ಅಭಿಪ್ರಾಯ' ಎನ್ನುವುದು ಕನ್ನಡದ ಪದ. 'ಅಮು' ಎನ್ನುವುದು ತೆಲುಗಿನ ರೂಪ. ತೆಲುಗಿನಲ್ಲಿ 'ಅಭಿಪ್ರಾಯಮು' ಎಂದರೆ ಕನ್ನಡದಲ್ಲಿ 'ಅಭಿಪ್ರಾಯ' ಎಂದು ಅರ್ಥ. 'ಅಭಿಪ್ರಾಯ' ಎನ್ನುವ ಕನ್ನಡ ಪದಕ್ಕೆ 'ಅಮು' ಎನ್ನುವ ತೆಲುಗಿನ ರೂಪ ಸೇರಿ ಅಭಿಪ್ರಾಯಮು ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಎಲ್ರ ಅಭಿಪ್ರಾಯಮು ಒಂದೇ ಇರಲ್ಲ ಬಿಡು .

೧೬. ಪ್ರಾರಂಬಿಂಚು :- 'ಪ್ರಾರಂಭ' ಎನ್ನುವುದು ಕನ್ನಡ ಪದ 'ಇಂಚು' ಎನ್ನುವುದು ತೆಲುಗಿನ ಪದ. 'ಪ್ರಾರಂಬಿಂಚು' ಎನ್ನುವುದಕ್ಕೆ ಕನ್ನಡದಲ್ಲಿ 'ಪ್ರಾರಂಭಿಸು' ಎಂದು ಅರ್ಥ 'ಪ್ರಾರಂಭ' ಎನ್ನುವ ಕನ್ನಡ ಪದಕ್ಕೆ 'ಇಂಚು' ಎನ್ನುವ ತೆಲುಗಿನ ಪದ ಸೇರಿಕೊಂಡು 'ಪ್ರಾರಂಬಿಂಚು' ಎಂದು ಉಚ್ಚಾರಣೆಯಲ್ಲಿದೆ. ಕನ್ನಡದ 'ಇಸು' ಪ್ರತ್ಯಯದ ಕೆಲಸವನ್ನು ತೆಲುಗಿನಲ್ಲಿ 'ಇಂಚು' ಮಾಡುತ್ತದೆ. ಕನ್ನಡ ಮತ್ತು ತೆಲುಗು ಎರಡು ದ್ರಾವಿಡ ಭಾಷೆ ಆಗಿದ್ದರಿಂದ ಕನ್ನಡ 'ಸ' ಕಾರ ತೆಲುಗಿನಲ್ಲಿ 'ಚ' ಕಾರ ವಾಗುತ್ತದೆ. 'ಇಂಚು' ಎಂದು ಉಚ್ಚಾರಣೆಯಲ್ಲಿರುವುದು ಗಮನಾರ್ಹವಾದ ವಿಚಾರ.

ಉದಾ :- ನಾಲು ಪ್ರಾರಂಬಿಂಚುಲು ನೇನು ಪ್ರಾರಂಬಿಂಚುಲ ?

೧೭. ದಿಕ್ಕುಲೇನಿವಾಡು :- 'ದಿಕ್ಕು' ಎನ್ನುವುದು ಕನ್ನಡದ ಪದ 'ಲೇನಿವಾಡು' ಎನ್ನುವುದು ತೆಲುಗಿನ ಪದ. ತೆಲುಗಿನಲ್ಲಿ 'ಲೇನಿವಾಡು' ಎಂದರೆ 'ಇಲ್ಲದವನು' ಎಂದು ಅರ್ಥ 'ದಿಕ್ಕು' ಎನ್ನುವ ಕನ್ನಡ ಪದಕ್ಕೆ 'ಲೇನಿವಾಡು' ಎಂಬ ತೆಲುಗಿನ ಪದ ಸೇರಿಕೊಂಡು 'ದಿಕ್ಕುಲೇನಿವಾಡು' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಏನ್ತಿ ಸತ್ತಾಗಲಿಂದ ಅವನು ದಿಕ್ಕುಲೇನಿವಾಡು ಆಗ್ಯಾನ.

೧೮. ಅಕ್ಕಚೆಲ್ಲಳ್ಳು :- 'ಅಕ್ಕ' ಎನ್ನುವುದು ಕನ್ನಡದ ಪದ. 'ಚೆಲ್ಲಳ್ಳು' ಎನ್ನುವುದು ತೆಲುಗಿನ ಪದ. 'ಚೆಲ್ಲಳ್ಳು' ಎಂದರೆ ಕನ್ನಡದಲ್ಲಿ 'ತಂಗಿ' ಎಂದು ಅರ್ಥ. 'ಅಕ್ಕ' ಎನ್ನುವ ಕನ್ನಡ ಪದಕ್ಕೆ 'ಚೆಲ್ಲಳ್ಳು' ಎನ್ನುವ ತೆಲುಗಿನ ಪದ ಸೇರಿಕೊಂಡು 'ಅಕ್ಕಚೆಲ್ಲಳ್ಳು' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ಅಕ್ಕ ಚೆಲ್ಲಳ್ಳು ಬಾಗುನ್ನರ ಇಲ್ಲಲು

೧೯. ಮಬ್ಬುಲಾಕಿ :- 'ಮಬ್ಬು' ಎನ್ನುವುದು ಕನ್ನಡದ ಪದ. 'ಲಾಕಿ' ಎನ್ನುವುದು ತೆಲುಗಿನ ಪದ. 'ಮಬ್ಬುಲಾಕಿ' ಎಂದರೆ ಕನ್ನಡದಲ್ಲಿ 'ಮಬ್ಬುನೊಳಗೆ' ಎಂದರ್ಥ. 'ಮಬ್ಬು' ಎನ್ನುವ ಕನ್ನಡ ಪದಕ್ಕೆ 'ಲಾಕಿ' ಎಂಬ ತೆಲುಗಿನ ಪದ ಸೇರಿಕೊಂಡು 'ಮಬ್ಬುಲಾಕಿ' ಎಂದು ಉಚ್ಚಾರಣೆಯಲ್ಲಿದೆ.

ಉದಾ :- ನಾಕಿ ಮಬ್ಬುಲಾಕಿ ಇಂದಿಸನ್ ಚೆಯ್‌ತಾಡು.

ತೆಲುಗು ಮತ್ತು ಕನ್ನಡ ಮಾದರಿಗಳು

೧. ಒಕರೂಪಾಯಿ :-

'ಒಕ' ಎನ್ನುವುದು ತೆಲುಗಿನ ಪದ. 'ರೂಪಾಯಿ' ಎನ್ನುವುದು ಕನ್ನಡದ ಪದ. 'ಒಕರೂಪಾಯಿ' ಎಂದರೆ ಒಂದು ರೂಪಾಯಿ ಎಂದು ಅರ್ಥ. 'ಒಕ' ಎನ್ನುವ ತೆಲುಗು ಪದಕ್ಕೆ 'ರೂಪಾಯಿ' ಎನ್ನುವ ಕನ್ನಡದ ಪದ ಸೇರಿಕೊಂಡು 'ಒಕರೂಪಾಯಿ' ಎಂದಾಗಿದೆ.

ಉದಾ :- ಒಕ್‌ರೂಪಾಯಿಲು ಟೀ ಪುಡಿ ಈಯಂಡಿ.

೨. ಡಬ್ಬು ಅಯ್‌ತ್ಯಾ :-

'ಡಬ್ಬು' ಎನ್ನುವುದು ತೆಲುಗಿನ ಪದ. 'ಅಯ್ ತ್ಯಾ' ಎನ್ನುವುದು ಕನ್ನಡದ ಪದ. 'ಡಬ್ಬು ಅಯ್ ತ್ಯಾ' ಎಂದರೆ 'ಹಣ ಇದೆಯಾ' ಎಂದು ಅರ್ಥ. 'ಡಬ್ಬು' ಎನ್ನುವ ತೆಲುಗಿನ ಪದಕ್ಕೆ 'ಅಯ್ ತ್ಯಾ' ಎನ್ನುವ ಕನ್ನಡದ ಪದ ಸೇರಿ ಡಬ್ಬು ಅಯ್‌ತ್ಯಾ ಎಂದಾಗಿದೆ.

ಉದಾ :- ಊರಿಗೆ ಹೋಗಾಕ ಡಬ್ಬು ಅಯ್‌ತ್ಯಾ

೩. ದೊಂಗಕದ್ರೆ :-

'ದೊಂಗ' ಎನ್ನುವುದು ತೆಲುಗು ಪದ. 'ಕದ್ರೆ' ಎನ್ನುವುದು ಕನ್ನಡದ ಪದ. 'ದೊಂಗಕದ್ರೆ' ಎಂದರೆ ಕಳ್ಳಕದ್ರೆ ಎಂದು ಅರ್ಥ. 'ದೊಂಗ' ಎನ್ನುವ ತೆಲುಗಿನ ಪದಕ್ಕೆ 'ಕದ್ರೆ' ಎನ್ನುವ ಕನ್ನಡದ ಪದ ಸೇರಿಕೊಂಡು 'ದೊಂಗಕದ್ರೆ' ಎಂದಾಗಿದೆ.

ಉದಾ : ಚೇನ್ ಸರ ಜೋಪಾನ ದೊಂಗಕದ್ರೆ ಕಷ್ಟ .

೪. ಉರ್ಲಗಡ್ಡೆ :-

'ಉರ್ಲ್ಲು' ಎನ್ನುವುದು ತೆಲುಗಿನ ಪದ. 'ಗಡ್ಡೆ' ಎನ್ನುವುದು ಕನ್ನಡ ಪದ. 'ಉರ್ಲ್ಲುಗಡ್ಡೆ' ಎಂದರೆ 'ಆಲುಗಡ್ಡೆ' ಎಂದು ಕನ್ನಡದಲ್ಲಿ ಅರ್ಥ. ತೆಲುಗಿನ 'ಉರ್ಲ್ಲು' ಎಂಬ ಪದಕ್ಕೆ ಕನ್ನಡದ 'ಗಡ್ಡೆ' ಸೇರಿ 'ಉರ್ಲ್ಲುಗಡ್ಡೆ' ಎಂದಾಗಿದೆ.

ಉದಾ : ಒಂದು ಕೆ.ಜಿ. ಉರ್ಲಗಡ್ಡೆ ತಗಂಡ ಬರಕಂತೆ ಅನ್ನ.

೫. ಟೆಂಕಾಯಿ :-

'ಟೆಂ' ಎನ್ನುವುದು ತೆಲುಗಿನ ಪದ. 'ಕಾಯಿ' ಎನ್ನುವುದು ಕನ್ನಡದ ಪದ. 'ಟೆಂಕಾಯಿ' ಎಂದರೆ 'ತೆಂಗಿನಕಾಯಿ' ಎಂದು ಕನ್ನಡದಲ್ಲಿ ಅರ್ಥ. ತೆಲುಗಿನ 'ಟೆಂ' ಗೆ ಕನ್ನಡದ 'ಕಾಯಿ' ಎನ್ನುವ ಪದ ಸೇರಿ 'ಟೆಂಕಾಯಿ' ಎಂದಾಗಿದೆ.

ಉದಾ :- ಅಮ್ಮ ದೇವ್ರುಗೆ ಒಂದು ಟೆಂಕಾಯಿ ತರಕಂತೆ ಬರಕರ.

ಬಳ್ಳಾರಿ ನಗರ ಮುಖ್ಯಪಟ್ಟಣವಾಗಿದ್ದು. ಆಂಧ್ರಕ್ಕೆ ತೀರ ಸನಿಹವಾಗಿರುವುದರಿಂದ ಅಲ್ಲಿಯ ಜನರ ವ್ಯವಹಾರವು ಬಳ್ಳಾರಿಯೊಂದಿಗೆ ನಡೆಯಬೇಕಾಗಿದೆ. ಬಳ್ಳಾರಿಯಲ್ಲಿನ ಜನರೂ ಕೂಡ ತೆಲುಗು ಭಾಷೆಯೊಂದಿಗೆ ಆ ಜನರಲ್ಲಿ ಸಂಪರ್ಕಿಸುತ್ತಾರೆ. ಆದೋನಿ, ಆಲೂರು, ಕರ್ನೂಲು, ಗುಂತಕಲ್, ಅನಂತಪುರ, ಕಲ್ಯಾಣದುರ್ಗ, ಗುತ್ತಿಯ ಜನಗಳ ತೆಲುಗು ಭಾಷೆಯ ಜನರೊಂದಿಗೆ ಹಲವಾರು ವರ್ಷಗಳಿಂದ ಬಳ್ಳಾರಿಯ ಜನರು ವ್ಯವಹರಿಸುತ್ತಲ್ಲಿದ್ದಾರೆ. ತೆಲುಗು ಭಾಷೆಯನ್ನಾಡುವ ಕುಟುಂಬಗಳೂ ಬಳ್ಳಾರಿಯಲ್ಲಿ ವಾಸವಾಗಿವೆ. ತೆಲುಗು ಭಾಷೆಯನ್ನಾಡುವ ಇಂತಹ ಜನರು ಬಳ್ಳಾರಿಯಲ್ಲಿ ಶೇ. ೧೦ – ೨೧ ರಷ್ಟು ಇದ್ದಾರೆ ಎಂದು ಕೆ.ಎಂ. ವೀರಭದ್ರಶರ್ಮ ಅವರು ಅಭಿಪ್ರಾಯ ಪಡುತ್ತಾರೆ. ಅಂದ ಮೇಲೆ ಬಳ್ಳಾರಿ ನಗರದ ಕನ್ನಡದ ಮೇಲೆ ತೆಲುಗು ಭಾಷೆಯ ಪ್ರಭಾವವು ಸಾಕಷ್ಟು ಬಿದ್ದಿರುವುದು ಸಹಜವಾಗಿದೆ.

ಅಧ್ಯಾಯ – ೬

ಉಪಸಂಹಾರ

ಅಧ್ಯಾಯ – ೬

ಉಪಸಂಹಾರ

ಬಳ್ಳಾರಿ ನಗರ ದ್ವಿಭಾಷಿಕತೆಯಲ್ಲಿ ಒಂದು ವಿಶಿಷ್ಟ ಪ್ರದೇಶವಾಗಿದೆ. ಬರಹ ಕನ್ನಡಕ್ಕಿಂತ ಬಳ್ಳಾರಿನಗರದ ಕನ್ನಡ ಹೇಗೆ ಭಿನ್ನವೆಂದು, ನಿರ್ದೇಶನ ಸಹಿತ ಹೇಳಲಾಗಿದೆ. ಕನ್ನಡ, ತೆಲುಗು, ಹಾಗೂ ಉರ್ದು ಭಾಷೆಗಳು ವಿಶೇಷವಾಗಿ ಇಲ್ಲಿ ಬಳಕೆಯಲ್ಲಿವೆ. ಇಲ್ಲಿನ ಕನ್ನಡ, ತೆಲುಗು ಮತ್ತು ಉರ್ದು ಭಾಷೆಗಳ ಪ್ರಯೋಗಾರ್ಥ, ಅವುಗಳ ಉಚ್ಚಾರಣೆಯಲ್ಲಿ ವೈವಿಧ್ಯತೆ ಕಂಡು ಬರುತ್ತದೆ. ಇಂತಹ ವೈವಿಧ್ಯತೆಯನ್ನು ಕನ್ನಡ ಮತ್ತು ತೆಲುಗು, ಕನ್ನಡ ಮತ್ತು ಉರ್ದು, ಹಾಗೂ ತೆಲುಗು ಮತ್ತು ಕನ್ನಡ, ಉರ್ದು ಮತ್ತು ಕನ್ನಡ ಎಂದು ವರ್ಗೀಕರಿಸಬಹುದು. ತೆಲುಗು ಮತ್ತು ಉರ್ದುಭಾಷಿಕರು ಕನ್ನಡ ನೆಲದಲ್ಲಿ ವ್ಯವಹರಿಸಬೇಕಾದರೆ, ನುಡಿ ಮಿಶ್ರಣದ ವಿಭಿನ್ನಮಾದರಿಗಳು ಬಳಕೆಯಲ್ಲಿವೆ. ಕಥಾಮಾದರಿಗಳು ಪ್ರಸ್ತುತ ಅಧ್ಯಯನದ ಉದ್ದೇಶಕ್ಕೆ ಪೂರಕವಾಗಿವೆ. 'ಅ' ಕಾರಾದಿ ಪದಕೋಶ ಭಾಗ ಬರಹದ ಕನ್ನಡಕ್ಕಿಂತ ಬಳ್ಳಾರಿನಗರದ ಕನ್ನಡ ಹೇಗೆ ಬೇರೆ ಎಂಬುದರ ಸ್ಪಷ್ಟತೆಗಾಗಿ ನೀಡಲಾಗಿದೆ.

ಬಳ್ಳಾರಿನಗರದ ಕನ್ನಡದ ವೈವಿಧ್ಯತೆ ಒಂದು ಪ್ರಾದೇಶಿಕ ಆಡುನುಡಿಯಾಗುವುದರ ಜೊತೆಗೆ ಅನ್ಯಭಾಷಾ ಪ್ರಭಾವ ಆಗಿರುವುದು ನಿದರ್ಶನದ ಮೂಲಕ ಸ್ಪಷ್ಟವಾಗುತ್ತದೆ. ಆದರೆ ಇಲ್ಲಿನ ಪದಕೋಶದಲ್ಲಿ ತೆಲುಗು ಭಾಷಾ ಪ್ರಭಾವ ಎದ್ದು ಕಾಣುತ್ತದೆ. ಕಾರಣ ಬಳ್ಳಾರಿನಗರ ಆಂಧ್ರಪ್ರದೇಶದ ಗಡಿಭಾಗವಾಗಿರುವುದರಿಂದ ದ್ವಿಭಾಷಿಕತೆಯ ವೈಶಿಷ್ಟತೆ ಎದ್ದು ಕಾಣುತ್ತದೆ. ಈ ಹಿನ್ನೆಲೆಯಿಂದ ಬಳ್ಳಾರಿನಗರ ಒಂದು ದ್ವಿಭಾಷಿಕ ಮತ್ತು ಬಹುಭಾಷಿಕ ಕೇಂದ್ರವಾಗಿದೆ.

ಪ್ರಸ್ತುತ ಸಂಪ್ರಬಂಧವನ್ನು ವಿಶ್ಲೇಷಣೆ ಮಾಡುವ ಸಂದರ್ಭದಲ್ಲಿ ಭಾಷಿಕಾಂಶಗಳನ್ನು ಚರ್ಚೆಮಾಡುವಾಗ ಕಾರಣಗಳನ್ನು ಖಚಿತತೆಗಿಂತ ಸಾಧ್ಯತೆಗೆ ಹೆಚ್ಚು ಒತ್ತು ಕೊಡಲಾಗಿದೆ. ಕನ್ನಡ ಭಾಷೆ ದಕ್ಷಿಣ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ್ದಾಗಿದ್ದರೆ, ತೆಲುಗು ಭಾಷೆ ಮಧ್ಯ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ್ದಾಗಿದೆ. ಆದರೆ ಉರ್ದುಭಾಷೆ ಇಂಡೋ ಆರ್ಯನ್ ಭಾಷಾವರ್ಗಕ್ಕೆ ಸೇರಿದ್ದಾಗಿದೆ. ಈ ಮೂರು ಭಾಷೆಗಳಲ್ಲಿ ಕನ್ನಡ ಮತ್ತು ತೆಲುಗು ಒಂದು ಭಾಷಾ ವರ್ಗಕ್ಕೆ ಸೇರಿದರೆ, ಉರ್ದು ದ್ರಾವಿಡೇತರ ಭಾಷಾವರ್ಗಕ್ಕೆ ಸೇರಿದೆ. ಕರ್ನಾಟಕದಲ್ಲಿ ಕನ್ನಡವನ್ನು ಬಿಟ್ಟರೆ ಭಾಷೆಯನ್ನು ಮನೆಮಾತಾಗಿರುವವರ ಸಂಖ್ಯೆಯ ದೃಷ್ಟಿಯಿಂದ ಉರ್ದುಭಾಷಿಕರು ಎರಡನೆಯ ಸ್ಥಾನದಲ್ಲಿದ್ದಾರೆ.

[illegible]

ಬಳ್ಳಾರಿನಗರದಲ್ಲಿ ನೆಲೆಸಿರುವ ತೆಲುಗರು ಎಲ್ಲಾ ಸಂದರ್ಭದಲ್ಲಿ ತಮ್ಮ ಮನೆ ಆವರಣದಲ್ಲಿ ತೆಲುಗು ಭಾಷೆಯನ್ನು ಬಳಸುತ್ತಾರೆ. ಸಾಮಾಜಿಕ ಆವರಣದಲ್ಲಿ ಕನ್ನಡ ಮಿಶ್ರಿತ ತೆಲುಗು ಬಾಷೆಯನ್ನು ಬಳಸುತ್ತಾರೆ. ಅದು ಅನಿವಾರ್ಯವೂ ಕೂಡ. ಅದೇ ರೀತಿ ಉರ್ದುಭಾಷಿಕರು ಸಹ ತಮ್ಮ ಮನೆ ವಾತಾವರಣದಲ್ಲಿ ಉರ್ದುಭಾಷೆಯನ್ನು, ಸಾರ್ವಜನಿಕ ಆವರಣಗಳಲ್ಲಿ ಕನ್ನಡ ಮಿಶ್ರಿತ ಉರ್ದುಭಾಷಾ ರೂಪಗಳನ್ನು ಬಳಸುತ್ತಾರೆ. ಈ ಹಿನ್ನೆಲೆಯಿಂದ ಬಳ್ಳಾರಿನಗರ ದ್ವಿಭಾಷಿಕ ಮತ್ತು ಬಹುಭಾಷಿಕ ಪ್ರದೇಶವಾಗಿದೆ. ದ್ವಿಭಾಷಿಕ ಮತ್ತು ಬಹುಭಾಷಿಕ ಮಾದರಿಗಳಲ್ಲಿ ತೆಲುಗು ಮತ್ತು ಉರ್ದುಭಾಷೆಯ ಉಚ್ಚರಣೆ, ಶಬ್ದಕೋಶ, ವ್ಯಾಕರಣ ವಿಚಾರಗಳಲ್ಲಿ ವಿಶೇಷತೆ ಗೋಚರಿಸುತ್ತದೆ. ಬಳ್ಳಾರಿನಗರದಲ್ಲಿ ತೆಲುಗು ಮತ್ತು ಉರ್ದುಭಾಷಿಕರು ಹಾಗೂ ಕನ್ನಡ ಬಾಷಿಕರು ತಮ್ಮ ತಮ್ಮ ಮನೆಮಾತಿನೊಂದಿಗೆ ತೆಲುಗು ಭಾಷೆಯಲ್ಲಿ ವ್ಯವಹರಿಸುವ ಸಾಮರ್ಥ್ಯ ಹೊಂದಿದವರಾಗಿದ್ದಾರೆ. ಆದರೆ ತೆಲುಗು ಭಾಷಿಕರು ಕನ್ನಡ ಕಲಿಯುವ ಅವಶ್ಯಕತೆಗಿಂತ, ಕನ್ನಡ ಮತ್ತು ಉರ್ದುಭಾಷಿಕರು ತೆಲುಗು ಕಲಿಯುವ ಒತ್ತಡದ ಸನ್ನಿವೇಶ ನಿರ್ಮಾಣವಾಗಿದೆ.

ಅನ್ಯ ಭಾಷೆಯ ಪ್ರಭಾವ ಕೇವಲ ಭಾಷೆಯ ಮೇಲೆ ಆಗದೆ, ಬಳ್ಳಾರಿಯ ಸುತ್ತ ಮುತ್ತ ಪ್ರದೇಶದಲ್ಲಿ ವ್ಯಕ್ತಿನಾಮ ಮತ್ತು ಸ್ಥಳನಾಮಗಳ ಮೇಲೂ ಪ್ರಭಾವವಿರುವುದನ್ನು ಕಾಣಬಹುದು. ಬಳ್ಳಾರಿನಗರದ ಭಾಷಾ ಪರಿಸ್ಥಿತಿ ಹೇಗಿದೆ ಎಂದರೆ ಅಕ್ಷರಸ್ಥ ತೆಲುಗರ ಮಾತು ತೆಲುಗಿನಿಂದ ಇಂಗ್ಲೀಶ್‌ಗೆ ನುಡಿಪಲ್ಲಟವಾದರೆ, ಅನಕ್ಷರಸ್ಥ ತೆಲುಗರ ಮಾತು ತೆಲುಗಿನಿಂದ ಕನ್ನಡಕ್ಕೆ ನುಡಿ ಪಲ್ಲಟ ಗೊಳ್ಳುತ್ತದೆ. ಹಾಗೆಯೇ ಅಕ್ಷರಸ್ಥ ಉರ್ದುಭಾಷಿಕರ ಮಾತು ಉರ್ದುವಿನಿಂದ ಇಂಗ್ಲೀಶ್‌ಗೆ ನುಡಿ ಪಲ್ಲಟವಾದರೆ ಅನಕ್ಷರಸ್ಥ ಉರ್ದುಭಾಷಿಕರ ಮಾತು, ಉರ್ದುವಿನಿಂದ ತೆಲುಗಿಗೆ, ಕನ್ನಡಕ್ಕೆ ನುಡಿಪಲ್ಲಟಗೊಳ್ಳುತ್ತದೆ.

ಬಳ್ಳಾರಿನಗರದಲ್ಲಿ ಉರ್ದು ಮತ್ತು ಕನ್ನಡಭಾಷಿಕರ ಮೇಲೆ ತೆಲುಗು ಹೆಚ್ಚು ಪ್ರಭಾವ ಬೀರುವ ಕಾರಣ ಬಳ್ಳಾರಿ ಜಿಲ್ಲೆ ಮತ್ತು ಆಂಧ್ರಪ್ರದೇಶದ ಕರ್ನೂಲು, ಕಡಪ, ಅನಂತಪುರ ಜಿಲ್ಲೆಗಳು ಒಂದೇ ಆಡಳಿತಕ್ಕೊಳಪಟ್ಟಿರುವ ಸಂಗತಿ ಚಾರಿತ್ರಿಕವಾದುದ್ದಾಗಿದೆ. ಜೊತೆಗೆ ಇದೊಂದು ಗಡಿಭಾಗದ ಜಿಲ್ಲೆಯಾಗಿದೆ. ಈ ಹಿನ್ನೆಲೆಯಿಂದ ದ್ವಿಭಾಷಿಕತೆ ಪ್ರಮಾಣ ಹೆಚ್ಚಿದೆ. ಕೋಲಾರದಲ್ಲಿರುವ ತೆಲುಗಿನ ಪ್ರಭಾವ ಬಳ್ಳಾರಿಯಲ್ಲಿಯೂ ಇದೆ.

ಎರಡನೆಯ ಅಧ್ಯಾಯದಲ್ಲಿ, ಬಳ್ಳಾರಿನಗರದ ಉರ್ದುಭಾಷಿಕರ ಕನ್ನಡದ ಉಚ್ಚಾರಣೆಯಲ್ಲಿ ಪದಗಳು ಮತ್ತು ಪ್ರಯೋಗಾರ್ಥವನ್ನು ಕುರಿತು ನಿದರ್ಶನ ಸಹಿತ ಚರ್ಚಿಸಲಾಗಿದೆ. ಪ್ರಸ್ತುತ ಪ್ರಬಂಧದ ಈ ಭಾಗ ಬರಹದ ಕನ್ನಡಕ್ಕಿಂತ ಹೇಗೆ ಉರ್ದುಭಾಷೆಯ ಕನ್ನಡ ಭಿನ್ನವಾಗಿದೆ ಎಂಬುದನ್ನು ದಾಖಲಿಸಲಾಗಿದೆ. ಈ ಭಾಗದಲ್ಲಿ ಸಂಗ್ರಹಿಸಿ ದಾಖಲಿಸಿರುವ ಪದಗಳು ಬರಹ ಕನ್ನಡಕ್ಕಿಂತ ತುಂಬಾ ವಿಶಿಷ್ಟವಾಗಿ ಬಳಕೆಯಲ್ಲಿದೆ. ಈ ಭಾಗ ಹೆಚ್ಚಿನ ಅಧ್ಯಾಯನಕ್ಕೆ ಮಾರ್ಗದರ್ಶಕವಾಗಿದೆ. ಉದಾಹರಣೆಗೆ 'ನೊಣ' ಎನ್ನುವ ನಾಮಪದಕ್ಕೆ 'ಲಜ್ಜ' ಎಂದು ಉಚ್ಚಾರಣೆಗೊಳ್ಳುತ್ತಿದೆ, 'ಮನಸ್ಸಿಗೆ' ಎನ್ನುವ ಪದ 'ಮಂತಿಗೆ' ಎಂದು ಬಳಕೆಗೊಳ್ಳುತ್ತದೆ. 'ಊಳಿಸುವುದು' ಎಂಬ ಪದಕ್ಕೆ 'ಉಣಸೋದು' ಎಂದು ಉಚ್ಚಾರಣೆಗೊಳ್ಳುತ್ತದೆ. 'ಚಪ್ಪಲು' ಎಂಬ ಪದ ಬರಹದ ಕನ್ನಡಪದಕ್ಕೆ

'ಕಾಲ್‌ಮರಿ' ಎಂದು ಉಚ್ಚಾರಣೆಯಲ್ಲಿದೆ. 'ಗಂಡುಮಕ್ಕಳು' ಎಂಬ ಪದ 'ಗನ್‌ಮಕ್ಲು' ಎಂದು, 'ಜಗಳ' ಎಂಬುದು 'ಗುದಾಟ' ಎಂದು ಉಚ್ಚಾರಣೆಗೊಳ್ಳುತ್ತದೆ. ಹಾಗೆಯೇ 'ಗುಬ್ಬಿ' ಎಂಬುದಕ್ಕೆ 'ದುಬ್ಬಿ', ಎಂದು 'ಸತ್ತೋದ್ರು' ಎಂಬುದಕ್ಕೆ 'ತೀರೋದ್ರು' ಎಂದು, 'ಬಿಕ್ಷೆ' ಎಂಬುದಕ್ಕೆ 'ಬಿಕ್ಜ' ಎಂದು ಬಳಕೆಯಲ್ಲಿದೆ. 'ಪಕ್ಷಿ'>'ಬಕ್ಸಿ', 'ಬಾಗು'>'ಬೊಗ್ಗು', ಇತ್ಯಾದಿ. ಅನಕ್ಷರಸ್ಥರಿಗೆ ಬಳ್ಳಾರಿನಗರದಲ್ಲಿ 'ಮೋಟಮಂದಿ' ಎಂದು ವಿಶೇಷವಾಗಿ ಉಚ್ಚಾರಣೆಗೊಳ್ಳುತ್ತಿದೆ. 'ಮಗುವಿಗೆ' ಎಂಬುದು 'ಮಗಿಗೆ' ಎನ್ನುತ್ತಾರೆ. 'ವ್ಯತ್ಯಾಸ'>'ಯತ್ಯಾಸ', 'ಎಲುಬು'>ಯಮಿಕಿ', 'ಸೊಳ್ಳೆ'>'ಮಸಡ', 'ಸಾವಿರ'>'ಸೌರ' ಇತ್ಯಾದಿ ವಿಶಿಷ್ಠ ಕನ್ನಡ ಪದಗಳ ಬಳಕೆ ಈ ಬಳ್ಳಾರಿನಗರದ ಉರ್ದುಭಾಷಿಕರಲ್ಲಿ ಉಚ್ಚಾರಣೆಗೊಳ್ಳುವುದನ್ನು ಕಾಣಬಹುದು.

'ಆ' ಕಾರವು ಉರ್ದುಭಾಷಿಕರಲ್ಲಿ 'ಅ' ಕಾರವಾಗಿ. 'ಳ' ಕಾರವು 'ಲ' ಕಾರವಾಗಿ. 'ಕ್ಷ' ಕಾರವು 'ಚ' ಕಾರವಾಗಿ. ಬಳಕೆಗೊಳ್ಳುವುದು ಇಲ್ಲಿ ಸಾಮಾನ್ಯ ಸಂಗತಿ. ಅವರ ಮನೆಮಾತಿನ ಪ್ರಭಾವ ಹೇಗೆ ಆಗಿದೆ ಎಂಬುದನ್ನು ಕುರಿತು ಈ ಭಾಗದಲ್ಲಿ ಚರ್ಚಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ ಬಳ್ಳಾರಿನಗರದ ತೆಲುಗು ಭಾಷಿಕರ ಕನ್ನಡ ಉಚ್ಚಾರಣೆಯಲ್ಲಿ ಪದಗಳು ಮತ್ತು ಪ್ರಯೋಗಾರ್ಥವನ್ನು ಕುರಿತು ನಿದರ್ಶನ ಸಹಿತ ಚರ್ಚಿಸಲಾಗಿದೆ. 'ತೆಗೆದುಕೊಳ್ಳುತೇನೆ' ಎಂಬ ಪದಕ್ಕೆ ಬಳ್ಳಾರಿನಗರದ ತೆಲುಗು ಭಾಷಿಕರಲ್ಲಿ 'ಇಸ್‌ಗೋತಿನಿ' ಎಂದು ಉಚ್ಚಾರಣೆಗೊಳ್ಳುತ್ತದೆ. 'ಮೂತ್ರವಿಸರ್ಜನೆ' ಎಂಬಪದಕ್ಕೆ 'ಕಾಲ್‌ಮಡಿ' ಎಂದು ಬಳಸುತ್ತಾರೆ. 'ಕುತಂತ್ರ' ಎಂಬ ಪದಕ್ಕೆ 'ಕಂತ್ರಿ' ಎಂಬ ಪದ ಬಳಕೆಯಲ್ಲಿದೆ. ಹಾಗೆಯೇ ತೆಗೆದುಕೊಳ್ಳುವುದಕ್ಕೆ 'ಕ್ವಾ' ಎಂದಷ್ಟೇ ಉಚ್ಚಾರಿಸುತ್ತಾರೆ. 'ಕೆಳವರ್ಗದಜನ' ಎನ್ನುವುದಕ್ಕೆ 'ಕಾಟಿಗರು' ಎಂದು, 'ಕಂಬಕ್ಕೆ', 'ಕೊಂಬ' ಎಂದು, 'ಸಾಗುವಳಿಗೆ', 'ಕೋರ್' ಎಂದು, 'ಗಂಡುಮಕ್ಕಳು' ಎನ್ನುವುದಕ್ಕೆ 'ಗನ್‌ಮಕ್ಲು' ಎಂದು, 'ಬಹಿರ್ದೆಸೆಗೆ' ಎಂಬ ಪದಕ್ಕೆ 'ಚಮ್‌ತಾಂಡು' ಎಂದು ಉಚ್ಚಾರಿಸುತ್ತಾರೆ. ಇದರಿಂದ ತಿಳಿದುಬರುವ ಭಾಷಿಕ ಸಂಗತಿ ಎಂದರೆ ಬೇರೆಬೇರೆ ಪ್ರಾಂತ್ಯಗಳಿಂದ ವಿದ್ಯಾಭ್ಯಾಸಕ್ಕೊ, ಕೂಲಿಗಾಗಿಯೋ, ಅಥವಾ ಬೇರೆಬೇರೆ ಕಾರಣಗಳಿಂದ ಬರುವ ವಲಸಿಗರು ಇಲ್ಲಿ ಬಂದು ನೆಲೆಸಿದಾಗ ಅಂತಹವರು ವಿಶಿಷ್ಠವಾದ ಪದಗಳನ್ನ ಬಳಕೆಮಾಡುತ್ತಾರೆ. ಹಾಗೆ ಮಾಡುವಾಗ ಕೊಡು ಕೊಳ್ಳುವಿಕೆ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಹಾಗ ಒಂದು ವಲಯದ ಪದಗಳನ್ನು ಮತ್ತೊಂದು ವಲಯದಲ್ಲಿ ಬಳಕೆಮಾಡಲಾಗುವುದು, ಅಂದರೆ ಅವರವರ ಮನೆಮಾತಿನ ಪ್ರಭಾವದಿಂದ ವ್ಯವಹಾರಿಕ ಭಾಷೆಯನ್ನು ಬಳಸುವಾಗ ವೈವಿಧ್ಯತೆ ಕಂಡುಬರುತ್ತದೆ. ಉದಾಹರಣೆಗೆ 'ಜಾಲಿ' ಅಂದರೆ 'ಆನಂದ', 'ತೆಪರ'>'ಅಜ್ಞಾನಿ', 'ಪಿಳ್ಳೆ'>'ಹುಡುಗಿ', 'ಬಿಕ್ಕ'>'ಕುಕ್ಕೆ', 'ಮದ್ಲಿಂಗ'>'ಮದುಮಗ', 'ಎಷ್ಟೊಂದು'>'ಯಸೊಂದು', 'ಬೆಳಗಾಗುತ್ತಲೆ'>'ವಂಟುಂಟ್ಲೆ', 'ಬಣವೆ'>'ವಾಮೆ' ಎಂದು ಉಚ್ಚಾರಣೆಗೊಳ್ಳುವುದು ಸಾಮಾನ್ಯವಾದುದು. ಈ ವಿಚಾರವನ್ನು ಪ್ರಸ್ತುತ ಅಧ್ಯಾಯನದಲ್ಲಿ ವಿಶಿಷ್ಟ ರೀತಿಯ ಪದಗಳ ಉಚ್ಚಾರಣೆ ಮತ್ತು ಪದಪ್ರಯೋಗವನ್ನು ನಿದರ್ಶನ ಸಹಿತ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಬಳ್ಳಾರಿನಗರದ ಉರ್ದುಭಾಷಿಕರ ನುಡಿಮಿಶ್ರಣದ ಪ್ರಕ್ರಿಯೆ ಹೇಗೆ ನಡೆದಿದೆ ಎಂಬುದನ್ನು ಕೊಡಲಾಗಿದೆ. ಈ ನುಡಿಮಿಶ್ರಣ ಪ್ರಕ್ರಿಯೆ ಬಳ್ಳಾರಿನಗರದಲ್ಲಿ ತುಂಬ ವಿಶಿಷ್ಟವಾಗಿದೆ. ಇಲ್ಲಿ ದಾಖಲಿಸಿರುವ ಪದಗಳು ಉರ್ದುಭಾಷಿಕರು ಕನ್ನಡಿಗರೊಂದಿಗೆ ವ್ಯವಹರಿಸುವಾಗ ದಾಖಲೆಮಾಡಿರುವ ಪದಗಳು ಪ್ರಸ್ತುತ ಈ ಭಾಗದಲ್ಲಿ ಎರಡು ಮಾದರಿಯ ನುಡಿಮಿಶ್ರಣ ಪ್ರಕ್ರಿಯೆಯನ್ನು ಕೊಡಲಾಗಿದೆ. ಕನ್ನಡ ಮತ್ತು ಉರ್ದು ಹಾಗೂ ಉರ್ದು ಮತ್ತು ಕನ್ನಡದ ನುಡಿಮಿಶ್ರಣಗಳು. ಇಂತಹ ಪದಗಳನ್ನು ಯಾವ ಭಾಷೆಯ ವ್ಯಾಕರಣದಲ್ಲಿ ಇಟ್ಟು ಚರ್ಚಿಸಬೇಕು ಎಂಬುದು ಗಮನಿಸುವಂತಹ ಅಂಶ.

'ಎದುರುಜವಾಬ್' ಎಂಬ ಪದದಲ್ಲಿ ಅಚ್ಚಗನ್ನಡದ ಶಬ್ದ 'ಎದುರು'. 'ಜವಾಬ್' ಎಂಬುದು ಉರ್ದುಪದ. ಇಲ್ಲಿ 'ಎದುರುಜವಾಬ್' ಎಂದರೆ 'ಎದುರುಮಾತು' ಎಂದರ್ಥ. 'ಎದುರು' ಎಂಬ ಕನ್ನಡದ ಪೂರ್ವ ಪದಕ್ಕೆ 'ಜವಾಬ್' ಎನ್ನುವ ಉರ್ದುವಿನ ಉತ್ತರ ಪದವನ್ನು ಸೇರಿಸಿ 'ಎದುರುಜವಾಬ್' ಎಂದಾಗಿದೆ. ಇದು ಕನ್ನಡ ಉರ್ದುನುಡಿ ಮಿಶ್ರಣಕ್ಕೆ ನಿದರ್ಶನವಾಗಿದೆ. ಇದೇ ಮಾದರಿಯಲ್ಲಿ ಕೆಲವಾರು ಪದಗಳನ್ನು ಇಲ್ಲಿ ಕೊಡಲಾಗಿದೆ. ಅದು ಮುಂದಿನ ಅಧ್ಯಯನಕಾರರಿಗೆ ಆಕರವಾಗಿದೆ.

ಉರ್ದು ಮತ್ತು ಕನ್ನಡ ಪದಗಳ ನುಡಿಮಿಶ್ರಣ ಇನ್ನೊಂದು ವಿಶೇಷ ಮಾದರಿ. ಉದಾಹರಣೆಗೆ 'ಹಾಂಹಣ್ಣು' ಎಂದು ಬಳ್ಳಾರಿನಗರದ ಉರ್ದುಭಾಷಿಕರಲ್ಲಿ ಬಳಕೆಯಾಗುತ್ತದೆ. ಇಲ್ಲಿ 'ಹಾಂ' ಎಂಬುದು ಉರ್ದುಪದ. 'ಹಣ್ಣು' ಎನ್ನುವುದು ಕನ್ನಡ ಪದ ಸೇರಿಕೊಂಡು 'ಹಾಂಹಣ್ಣು' ಎಂದಾಗಿದೆ. 'ಹಾಂಹಣ್ಣು' ಎಂದರೆ ಕನ್ನಡದಲ್ಲಿ 'ಮಾವಿನಹಣ್ಣು' ಎಂದರ್ಥ. ಈ ರೀತಿಯಾಗಿ ಕನ್ನಡ ಮತ್ತು ಉರ್ದು ಹಾಗೂ ಉರ್ದು ಮತ್ತು ಕನ್ನಡ ನುಡಿಮಿಶ್ರಣ ಪ್ರಕ್ರಿಯೆಯನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ಇದೊಂದು ವಿಶಿಷ್ಟವಾದ ಅಧ್ಯಯನವೆಂದೆ ಹೇಳಬಹುದು.

ಐದನೆಯ ಅಧ್ಯಾಯದಲ್ಲಿ ಬಳ್ಳಾರಿನಗರದ ತೆಲುಗು ಭಾಷಿಕರ ನುಡಿಮಿಶ್ರಣದ ಪ್ರಕ್ರಿಯೆಯನ್ನು ನೀಡಲಾಗಿದೆ. ಇಲ್ಲಿನ ದಾಖಲಾದ ಪದಗಳು ತೆಲುಗು ಭಾಷಿಕರು ಕನ್ನಡಿಗರೊಂದಿಗೆ ವ್ಯವಹರಿಸುವಾಗ ದಾಖಲೆಮಾಡಿರುವ ಎರಡು ರೀತಿಯ ವಿಶೇಷ ಮಾದರಿಯ ನುಡಿಮಿಶ್ರಣಗಳನ್ನು ನೀಡಲಾಗಿದೆ. ಕನ್ನಡ ಮತ್ತು ತೆಲುಗು ನುಡಿಮಿಶ್ರಣ ಹಾಗೂ ತೆಲುಗು ಮತ್ತು ಕನ್ನಡ ನುಡಿಮಿಶ್ರಣ.

'ಬಾಳೆಪಂಡ್ಲು' ಎನ್ನುವ ಪದದಲ್ಲಿ 'ಬಾಳೆ' ಎಂಬುದು ಕನ್ನಡದ ಪದ. 'ಪಂಡ್ಲು' ಎನ್ನುವುದು ತೆಲುಗ ಪದ. 'ಪಂಡ್ಲು' ಎಂದರೆ ಹಣ್ಣುಗಳು ಎಂದರ್ಥ. 'ಬಾಳೆ' ಎನ್ನುವ ಕನ್ನಡ ಪದಕ್ಕೆ 'ಪಂಡ್ಲು' ಎನ್ನುವ ತೆಲುಗು ಪದ ಸೇರಿಕೊಂಡು 'ಬಾಳೆಪಂಡ್ಲು' ಎಂದು ಉಚ್ಚಾರಣೆಯಲ್ಲಿದೆ. ಇದೇ ರೀತಿಯ ಹಲವು ಪದಗಳನ್ನು ಇಲ್ಲಿ ನೀಡಲಾಗಿದೆ. ಇನ್ನೊಂದು ಮಾದರಿ ತೆಲುಗು ಮತ್ತು ಕನ್ನಡ ಪದಗಳ ನುಡಿಮಿಶ್ರಣ. 'ಒಕರೂಪಾಯಿ' ಎನ್ನುವುದು

ಬಳ್ಳಾರಿನಗರದ ಬಳಕೆ ಪದ. ಇಲ್ಲಿ 'ಒಕ' ಎನ್ನುವುದು ತೆಲುಗು ಪದ. 'ರೂಪಾಯಿ' ಎನ್ನುವುದು ಕನ್ನಡದ ಪದ. ಈ ಎರಡು ಪದಗಳು ಸೇರಿ 'ಒಕರೂಪಾಯಿ' ಎಂದು ಉಚ್ಚಾರಣೆಗೊಳ್ಳುತ್ತದೆ. 'ಒಕರೂಪಾಯಿ' ಎಂದರೆ 'ಒಂದುರೂಪಾಯಿ' ಎಂದರ್ಥ. ಈ ರೀತಿಯ ಕನ್ನಡ ಮತ್ತು ತೆಲುಗು ಹಾಗೂ ತೆಲುಗು ಮತ್ತು ಕನ್ನಡ ನುಡಿ ಮಿಶ್ರಣ ಪ್ರಕ್ರಿಯೆಯನ್ನು ಈ ಭಾಗದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಇನ್ನು ಕೊನೆಯದಾಗಿ ಅನುಬಂಧದಲ್ಲಿ ನಾಲ್ಕು ಉಪಭಾಗಗಳನ್ನು ನೀಡಲಾಗಿದೆ. ಮೊದಲನೆಯ ಭಾಗದಲ್ಲಿ ಬಳ್ಳಾರಿನಗರದ ಉರ್ದು ಮತ್ತು ತೆಲುಗು ಭಾಷಿಕರು ಪ್ರತಿನಿತ್ಯ ಬಳಕೆಮಾಡುವ ಕನ್ನಡ ಪದಗಳನ್ನು ಪಟ್ಟಿಮಾಡಲಾಗಿದೆ. ಈ ಪಟ್ಟಿಯಲ್ಲಿ ಕನ್ನಡದ ಎಲ್ಲಾ ಪದವರ್ಗಗಳು ಒಳಗೊಂಡಿರುವಂತೆ ನೋಡಿಕೊಳ್ಳಲಾಗಿದೆ. ಮೂಲ ಪದ ಮತ್ತು ಸಮಸ್ತ ಪದ ಎಂದು ವರ್ಗೀಕರಣ ಮಾಡದೆ ದಾಖಲಿಸಲಾಗಿದೆ. ಆದಷ್ಟು ಪದಕೋಶವನ್ನು ತೌಲನಿಕವಾಗಿ ದಾಖಲಿಸಲಾಗಿದೆ. ಜೊತೆಗೆ 'ಅ' ಕಾರಾದಿಯಾಗಿಯು ಜೋಡಿಸಲಾಗಿದೆ. ಈ ಪದಕೋಶದಿಂದ ಬಳ್ಳಾರಿನಗರದಲ್ಲಿ ದಿನನಿತ್ಯ ಉರ್ದು ಮತ್ತು ತೆಲುಗು ಮನೆಮಾತುಳ್ಳವರು ಬಳಸುವ ಕನ್ನಡದ ಸ್ವರೂಪವನ್ನು ಈ ಮೂಲಕ ತಿಳಿಯಬಹುದಾಗಿದೆ.

ಎರಡನೇ ಭಾಗದಲ್ಲಿ ಪ್ರಸ್ತುತ ಸಂಪ್ರಬಂಧದಲ್ಲಿ ವಿಶ್ಲೇಷಿಸಿರುವ ಭಾಷಿಕರ ಮಾಹಿತಿಗೆ ಪೂರಕವಾಗಿ ಉರ್ದು ಮತ್ತು ತೆಲುಗು ಮನೆಮಾತುಳ್ಳವರ 'ಕನ್ನಡ ಕಥಾಮಾದರಿ' ಗಳನ್ನು ನೀಡಲಾಗಿದೆ. ಈ ಕಥಾಮಾದರಿಯಿಂದ ಉರ್ದು ಮತ್ತು ತೆಲುಗು ಬಾಷಿಕರ ಕನ್ನಡ ಬಳಕೆಯ ಸ್ವರೂಪವನ್ನು ತಿಳಿಯಬಹುದು.

ಮೂರನೆಯ ಭಾಗದಲ್ಲಿ ಪ್ರಸ್ತುತ ಸಂಪ್ರಬಂಧಕ್ಕೆ ಮಾಹಿತಿ ನೀಡಿದ ಸೂಚಕರ ಹೆಸರುಗಳನ್ನು ಸಾಮಾಜಿಕ ಭಿನ್ನಾಂಶಗಳ ಅನ್ವಯ ವಿವರಗಳನ್ನು ದಾಖಲಿಸಲಾಗಿದೆ.

ಕೊನೆಯದಾಗಿ ಕ್ಷೇತ್ರಕಾರ್ಯ ಮತ್ತು ಬರವಣಿಗೆ ಸಂದರ್ಭದಲ್ಲಿ ಪ್ರಯೋಜನಕ್ಕೆ ಬಂದ ಗ್ರಂಥಗಳನ್ನು 'ಅ' ಕಾರಾದಿಯಾಗಿ ನೀಡಲಾಗಿದೆ.

ಒಟ್ಟಾರೆ ಪ್ರಸ್ತುತ ಪ್ರಬಂಧವು ಶೈಕ್ಷಣಿಕವಾಗಿ ಪ್ರಯೋಜನಕ್ಕೆ ಬರುತ್ತದೆ. ಇದು ಶೈಕ್ಷಣಿಕವಾಗಿ, ದ್ವಿಭಾಷಿಕತೆ, ಬಹುಭಾಷಿಕತೆ ಪರಿಸರದಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲಿ ಕಂಡುಬರುವ ಕಲಿಕೆಯ ಸಮಸ್ಯೆಗಳಿಗೆ ಇಲ್ಲಿ ಪರಿಹಾರ ಲಭ್ಯವಿದೆ. ಅಲ್ಲದೆ ಪಾಠ್ಯ ಪುಸ್ತಕ ನಿರ್ಮಾಣದಲ್ಲಿ ಈ ಮಾದರಿಯ ಅಧ್ಯಯನದಿಂದ ಶೈಕ್ಷಣಿಕವಾಗಿ ಪ್ರಯೋಜನವಿದೆ. ಅಷ್ಟೇ ಅಲ್ಲದೆ ಭಾಷಾ ಯೋಜನೆ ರೂಪಿಸುವಲ್ಲಿ, ಉಪಭಾಷಾ ಸರ್ವೇಕ್ಷಣಾ ಕಾರ್ಯಮಾಡುವಲ್ಲಿ, ಕನ್ನಡ ಭಾಷಾ ಚರಿತ್ರೆ ಕಟ್ಟುವಲ್ಲಿ, ಪ್ರಸ್ತುತ ಅಧ್ಯಯನವು ಮಹತ್ವದ್ದಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿ ಬಳ್ಳಾರಿ ನಗರದಲ್ಲಿ ಬಳಕೆಯಲ್ಲಿರುವ ಭಾಷಿಕ ಪರಿಸರವು ಒಂದು ದ್ವಿಭಾಷಿಕತೆಯೂ ಹೌದು, ಬಹುಭಾಷಿಕತೆಯೂ ಹೌದು ಎಂದು ನಿರ್ದೇಶಿಸಬಹುದು.

ಅಧ್ಯಾಯ – ೭

ಅನುಬಂಧಗಳು

೧. ಬಳ್ಳಾರಿನಗರದ ಉರ್ದು ಮತ್ತು ತೆಲುಗು ಭಾಷಿಕರ ತೌಲನಿಕ ಪದಕೋಶ

೨. ಕಥಾಮಾದರಿಗಳು

೩. ವಕ್ತೃವಿನ ವಿವರ

೪. ಆಕರ ಗ್ರಂಥಗಳ ಸೂಚಿ

ಅನುಬಂಧ – ೭

ಉರ್ದು ಮತ್ತು ತೆಲುಗು ಭಾಷಿಕರ ತೌಲನಿಕ ಪದ ಕೋಶ

ಬಳ್ಳಾರಿ ನಗರದ ಉರ್ದು ಮತ್ತು ತೆಲುಗು ಭಾಷಿಕರ ಕನ್ನಡದ ಉಚ್ಚಾರಣೆ ಮತ್ತು ಧ್ವನಿ ನಿಯಮಗಳ ಸ್ಪಷ್ಟತೆಗಾಗಿ ಕೆಳಗಿನ ಪದಕೋಶ ಪಟ್ಟಿ ಸಹಾಯಕವಾಗುತ್ತದೆ. ಈ ಪದಕೋಶದಲ್ಲಿ ದಾಖಲಿಸಿರುವ ಭಾಷಿಕ ದತ್ತವನ್ನು ದೇಶ್ಯ, ಅನ್ಯದೇಶ್ಯ ಹಾಗೂ ಸ್ವೀಕೃತವೆಂದು ಗುರುತಿಸದೇ ಸಂಗ್ರಹಿಸಿದಂತೆ ದಾಖಲಿಸಲಾಗಿದೆ ಹಾಗೂ ಸಾಧ್ಯವಾದಷ್ಟು ಅ-ಕಾರಾದಿ ಕ್ರಮಾಂಕವನ್ನು ಅನುಸರಿಸಲಾಗಿದೆ.

ಬರಹದ ಕನ್ನಡ	ಉರ್ದು	ತೆಲುಗು
	ಅ	
ಅವಳು	ಅವಲು	ಅವಲು
ಅಣ್ಣರಿಗೆ	ಅನ್ನರಿಗೆ	ಅನ್ನೊರಿಗೆ
ಅಂದು ಕೊಳ್ಳಿ	ಅನ್‌ಕೋರಿ	ಅನ್‌ಕೋರಿ/ತಿಳ್‌ಕೊಲಿ
ಅಣ್ಣ ತಮ್ಮಂದಿರು	ಅನ್ ತಮ್ಮಂದ್ರು	ಅನ್ನತಮ್ಮುಡು
ಅನ್ನ ಸಾರು	ಅನ್ನ ಬ್ಯಾಲಿ	ಅನ್ನಮ್ ಸಾರು
ಅದೃಷ್ಟ	ಅದ್ರುಸ್ಟ	ಅದ್ರುಸ್ಟಮು
ಅಮ್ಮನದು	ಅಮ್ಮಂದು	ಅಮ್ಮದಿ/ನಯನ
ಅದಕ್ಕೊಸ್ಕರ	ಅಂದ್ರಗೋಸೆ	ಅಂದ್ರಗೊಸೆ
ಅಕ್ಕಿ	ಅಕ್ಕಿಬತ್ತ	ಅಕ್ಕಿ/ಬೀಯಮ್ಮ
ಅನ್ನು	ಅಂಬು	ಅಂಬು
ಅಳು	ಅಳ್ತಾ	ಏಡ್ತ
ಅಂಜೂರ್	ಅಂಜುರ	ಪತ್ತಿಪಂಡು
ಅಂದು	ಅವೊತ್ತು	ಅವೊತ್ತು
ಅಳಿಯ	ದಾಮದ್	ಅಳಿಯ
ಅನ್ನ	ಬಾನ	ಅಂಬಲಿ
ಅತ್ತಿಗೆ/ಅಣ್ಣನ ಹೆಂಡತಿ	ಭಾಬಿ	ವದಿನ
ಅಕ್ಕನ ಗಂಡ/ಮಾಮ	ಭೈ ಜಾನ್	ಮಾಮ/ಅನ್ನ

ಅವಿದ್ಯವಂತರು	ಮೋಟ್ ಜನ	ಮೋಟ ಜನ
ಅರ್ಥಇಲದ್ದು	ಮೋಟಮಾತು	ಮೋಟಮಾತು
ಅನುಭವಿಸು	ವದ್ದಾಡು	ವದ್ದಾಡು
ಅವಕಾಶ	ಶಾನ್ಸ್	ಅವಕಾಸ
ಅವರಾಣಿ	ಹಾವೂಕ ಸಾಂಪು	ಪಾಪುರಾವು
ಅಭ್ಯಾಸ	ಹತಾತ್	ರಾಪ್ತಿ
ಅವುಗಳನ್ನು	ಎಲ್ಲಕಲ್ತು	ಅವುಟ್ರನು
ಅಜ್ಜ	ನಾನಾ	ತಾತಾ
ಅಜ್ಜಿ	ನಾದಿ	ಅವ್ವ/ಯವ್ವ

ಆ

ಆಕಡೆ	ಅತ್ಲಗ	ಅತ್ಲಲು
ಆಲೋಚನೆ	ಅಲಚಿನಿ	ಆಲೋಸಿನಿ/ಚಿಂತ
ಆದಾಯ	ಅಮ್‌ದಾನಿ	ಆದಾಯ
ಆಶೀರ್ವಾದ	ಅಸಿರ್ವಾದ	ಆಸಿರ್ವಾದ
ಆತ್ಮಶುದ್ಧ	ಅತ್ಮವಾಸನ್	ಆತ್ಮನೀಟ
ಆಸ್ಪತ್ರೆ	ಅಸ್‌ಪೆತಾಲ್	ದವಾಖಾನೆ
ಆಗಿವೆ/ಆದವು	ಆದವು	ಮುದವು
ಆಣೆಕಲ್ಲು	ಆನೆಕೊಲ್ಲು	ಆನೆಕೊಲ್ಲು
ಆ ರೀತಿ	ಆತರೆ	ಆತರೆ
ಆಗುತ್ತದೆ	ಆಗ್‌ತೈತಿ	ಆಗ್‌ತೇತಿ/ಅಯಿಂದಿ
ಆರೇಂಜ್	ಆರಂಜ	ಆರೆಂಜ
ಆಲೂಗಡ್ಡೆ	ಉರ್ಲುಗಡ್ಡ	ಉರ್ಲುಗಡ್ಡೆ
ಆಮೆ	ತಾಂಬಿಲ್	ತಂಬೇಲಿ
ಆಕಳು	ಬಯ್‌ಲಾ	ದನ/ಆಕಲು

ಇ.

ಇದೆ	ಅಯ್‌ತಿ	ಅಯ್‌ತೆ
ಇದ್ದಾವೆ	ಅದವು	ಮುದವು
ಇಂಜಿಕ್ಷನ್	ಇಂದಿಶನ್	ಇಂದಿಸನ್/ಸೂದಿ

[illegible]

[illegible]

[illegible]

ಇನ್ನೂರು ರೂಪಾಯಿ	ಇನ್ನೂರೂಪೈ	ಇನ್ನೂರೂಪಾಯಿ/ ಯಲ್ದು ನೂರು
ಇಡ್ಲಿ	ಇಡ್ಲಿ/ಇಡ್ಲಿ	ಇಡ್ಲಿ
ಇದ್ದಳು	ಇದ್ದಲು	ಇದ್ದಲು
ಇಂದ	ಲಿಂದ	ನುಂಡಿ/ನುಂಚಿ
ಇಟ್ಟಿಗೆ	ಎಳ್ಳೆ	ಇಟಿಕಿ
ಇಕ್ಕಳ	ಚುಮಟಾ	ಚಿಮುಲು/ಪಟ್ಟಕಾರ
ಇಪತ್ತು	ಬೀಸ್	
ಇಬ್ಬರು	ಯಲ್ದಜನ	ಯಲ್ದಜನ
ಇದ್ದಾನೆ	ಹಾಜರ್/ಅದಾನ	ಅಯ್‌ದಾನ/ಉನ್ನಾನ
ಇದ್ದಾಳೆ	ಇದಾಲ	ಇದಾಲು/ಎನ್ನಾಲು
ಇಲಿ	ಚುವ್ವಾ.	ಎಲಕ

ಈ.

ಈರೇಕಾಯಿ	ಬೀರೆಕಾಯಿ/ವೀರೆಕಾಯಿ	ಬೀರೆಕಾಯಿ
ಈರುಳ್ಳಿ	ಪ್ಯಾಜ್	ಉಲ್ಲಾಗಡ್ಡೆ/ಉಲ್‌ಗಡ್ಡ

ಉ

ಉಳಿದುಕೋ	ಉಳ್‌ಕೋ	ಉಲ್ ಕೋ
ಉಪ್ಪಿಟ್ಟು	ಉಪ್ಮಾ	ಉಪ್ಮಾ
ಉರ್ದು	ಉರ್‌ದು	ಉರ್ದೆ
ಉತ್ತರದಿಕ್ಕು	ಜಲೀಬ್	ಉತ್ತರಮ್
ಉತ್ತುತ್ತಿ ಹಣ್ಣು	ಹನಾರ್ ಪಾಂಡು/ ಅನರ್ ಪಾಂಡು	ಉತಿತ್ತನ್ನು
ಉಣ್ಣುವುದು	ತಿಂಬೋದು	ತಿಂಬೋದು

ಊ

ಊಟ	ಅನ್ನ/ಬಾನ	ಅಂಬಲಿ/ಭೋಜನ ಮು
ಊಟಕ್ಕೆ	ಊಟಗೆ	ಊಟಕೆ
ಊಳುವುದು	ಉಣಸೋದು	ಗುಂತಾ/ಸಮಾದಿ

ಋ

ಋಣ	ರುನ/ರುಣ	ರುನ

ಎ

ಎದುರು	ಎದುರ್	ಎದರು
ಎತ್ತಿನಗಾಡಿ	ಎತ್‌ಬಂಡಿ	ಎತ್‌ಬಂಡಿ
ಎಚ್ಚರಿಕೆ	ಜವಾಬ್	ಎಚ್ಚರ
ಎಗಲು	ಬಗಲು	ಬಗಲು
ಎಮ್ಮೆ	ಬೈಸು	ಯಮ್ಮಿ
ಎಲುಬು	ಯಮಕಿ/ಯಮುಕಿ	ಯಮಕ
ಎರಡು	ಯಲ್ಡು	ಯಲ್ಡು
ಎಲ್ಲಾ	ಯಲ್ಲಾ/ಎಲ್ಲಾ	ಯಲ್ಲಾ
ಎಬ್ಬಿಸು	ಹಠಾಯಿ	ಎಟ್ಸು
ಎಂದು.	ಯೆಂದು	ಯಂದು/ಎಂದು
ಎಂಬತ್ತು	ಯಂಬತ್ತು/ಯೆಂಬತು	ಯಂಬತು

ಏ.

ಏನು	ಏಮ್	ಏಮ್
ಏಣಿ	ಸಿಡಿ	ನಿಚ್ಚಣಿಕೆ/ನಿಚ್ಚನಿಕೆ

ಐ

ಐದು	ಅಯ್‌ದು/ಐದ್	ಅಯ್‌ದು
ಐವತ್ತು	ಅಯ್‌ವತ್ತು/ಫಚಾಸ್	ಅಯ್‌ವತ್

ಒ.

ಒಳಗೆ	ಒಲಗೆ/ಅಂದರ್	ಒಲಗೆ
ಒಬ್ಬರು	ಒಂದ್ ಮಂದಿ	ಒಕ್‌ಮಂದಿ/ಒಕ್ಕಡ್‌ಮಂದಿ
ಒಬ್ಬರಾಜ	ಒನ್/ಒಂದು ರಾಜ	ಒಬ್‌ರಾಜ
ಒಳ್ಳೆಯದು	ಒಳ್ಳೇದು	ಒಳೋದು
ಒಬ್ಬಾಕಿ	ವಬ್ಬಾಕಿ	ವಬ್ಬಾಕಿ

ಒಂಬತ್ತು	ವಂಬತು	ತುಂಬಿದಿ

ಓ.

ಓತಿಕಾಟ/ಡೊಣ್ಣೆಕಟ	ಗಿರಗೂಟ	ತೊಂಡೆ ಬಿಕ್ಕಿ/ಗಿರಗೂಟ
ಓ.ಪಿ.ಡಿ.	ಒ.ಪಿ.ಡಿ	ಒ.ಪಿ.ಡಿ.

ಔ.

ಔಷಧಿ	ಔಸಿದಿ/ಅವ್ ಸೀದಿ/ಓಸಿದಿ	ಓಚಿದಿ/ಮದ್ದು/ಔಸುಧ

ಕ.ಖ

ಕನ್ನಡಿ	ಆಯಾನ	ಕನ್ಡಿ/ಕನ್ನಡಿಗಿ
ಕನ್ನಡ	ಕನಡ	ಕನಡ
ಕಥೆ	ಕತಾ	ಕತಾ
ಕರಿಬೀಜಣ್ಣು	ಕಬೂಜನ್ನು/ಕರ್ ಬೂಜನ್ನು	ಕರ್ ಬುಚ್ಚು ಪಂಡು
ಕರಿಬೇವು	ಕರೆಪಾಕು	ಕರೆಪಾಕು
ಕರ್ನಾಟಕದಲ್ಲಿ	ಕರ್ ನಾಟದಾಗ	ಕರ್ ನಾಟಗ್ ದಾಗ
ಕರ್ಚಿಕಾಯಿ/ಕರ್ಜಿಕಾಯಿ	ಕರ್ಜಿಕಾಯಿ	ಕರ್ಜಿಕಾಯಿಲು
ಕರಿಗಡಬು	ಕರಿಗಡವು.	ಕರಿಗಡಪು
ಕಟ್ಟಿಗೆ	ಕಟೆಗಿ	ಕಟೆಗ
ಕರಕೊಂಡು ಬಾ	ಕರ್ ಕೊಂಡ್ ಬಾ	ಕರ್ ಕೊಂಬಾ/ಪಿಲ್ಲಿಸಿಕೊಂಡರಾ
ಕಡಿದು	ಕಡ್ ದ್	ಕಡಕ
ಕಡೆ	ಕಡ	ಕಡೆ/ಪನೆ
ಕಣ್ಣಲ್ಲಿ	ಕನ್ನಲಿ	ಕನ್ನಲ್ಲಿ
ಕಲ್ಲು	ಕೊಲ್ಲು	ಕೊಲ್ಲು
ಕಬ್ಬಿಣ	ಕೊಬ್ನ	ಕೊಬ್ನ/ಕೊಬ್ ನ
ಕಳೆ	ಕಳೆ	ಕಲೆ
ಕತ್ತೆ	ಘದ್ದಾ	ಗಾಡಿಗ/ಗಾಡದಿ
ಕಡಲೆಕಾಯಿ	ಪಲಿ	ಸೇಂಗಬುಡ್ಡಿ
ಕಳ್ಳ ಒಕ್ಕಲು	ಬಾರ್ಲಿ	ಬಾರ್ಲಿ
ಕಪ್ಪೆ	ಮಂಡುಕು	ಕೊಪ್ಪೆ

ಕೃಷ್ಣ	ಕಿನ್ನಾ	ಕಿನ್ನಾ
ಕಾಯಿಪಲ್ಯ	ಕಾಯಿಗಡ್ಡೆ/ಸಜ್ಜಿ.	ಕಾಯಿ ಗೂರ್ಲು / ತೊಟ ಕೊರ್ಲು
ಕಾಲಮರಿ	ಲಬರ್	ಕಾಲ್ ಮರಿ
ಕುಂಟ	ಕುಂಟ	ಕುಂಟದು
ಕುಳಿತುಕೋ	ಕುಂದ್ರು/ಬೈಟ್	ಕುಂತ್ಗ
ಕುರ್ಚಿ	ಕುರ್ಸಿ	ಕುರ್ಜಿ
ಕುರಿ	ಗೊರ್ರಿ.	ಪೋತ/ಗೋರ್ರಿ
ಕೆನಾಲು	ಕಿನಾಲು	ಕಿನಾಲ
ಕೆಳವರ್ಗದ ಜನ	ದೇಡಾ	ಕಾಟಿಗರು
ಕೊಂಡಎತ್ತು	ಕುಲ್ಗ	ಕೊಂಡಯೆತ್ತು
ಕೊತ್ತಂಬರಿ	ಕೂತಮ್ರಿ.	ಕುತ್ತಿಮಿರಿ
ಕೊಬ್ಬರಿ	ಕೊಬರಿ	ಕೊಬರಿ
ಕೋಸ್‌ಗಡ್ಡೆ	ಕೋಜ್‌ಗಡ್ಡೆ	ಕ್ಯಾಬೀಜ್
ಕೋಗಿಲೆ	ಕೊಯಿಲ್/ಮೈನ	ಕೊಯಿಲ್
ಕೊಲುಮೆ	ಕೊಲ್ಮಿ	ಕೊಲ್ಮಿ
ಕೊಡಲಿ	ಕುಲಾಡಿ	ಕೊಡ್‌ಲಿ
ಕೋಳಿ	ಮುರುಗಿ	ಕೋಲಿ
ಖಡ್ಗ	ಪಲ್ಲಾ	ಕಡಗ

ಗ

ಗವಾಕ್ಷಿ	ಗವಾಚೆ	ಬಾದಾಳ/ಗವಾಚಿ
ಗಂಡು ಮಕ್ಕಳು	ಗನ್ ಮಕ್ಕಳು	ಗನ್ ಮಕ್ಳು
ಗಟ್ಟಿ	ಗಟಾ	ಗಟ್ಟಿ
ಗರ್ಭವತಿ	ಗರ್ ಬೋವತಿ	ಗರ್ಬ್‌ವತಿ
ಗಂಟೆ	ಗಂಟ	ಗಂಟ
ಗರಗಸ	ರಂಪ/ಹಾರ	ರಂಪ
ಗಾದೆ	ಗಾದಿ	ಗಾದಿ/ಗಾದ/ಗಾದೆ
ಗಾಳಿ	ಹವ	ಗಾಲಿ
ಗುಬ್ಬಿ	ದುಬ್ಬಿ	ಗುಡ್ಲುಗೂಡು

ಗುಣ	ಗುನ	ಗುನ
ಗುಂಪು	ಕೌಲು	ಗುಂಪು
ಗುಡುಗು	ಬಾದಲ್	ಗುಡುಗುಮು
ಗುಲಾಬಿ	ಗುಲಾಬ್	ಗುಲಾಬಿ
ಗೆಟಪ್	ಗೆಟಪ್	ಬಾಗುನ್ನುಂದು
ಗೋಳಾಡಿಸು	ಗೋಲಾಡ್ಸಿ	ಗೋಲಾಡ್ಸಿ
ಗೌರವ	ಗೋರವ/ಗರವ/ಪ್ರೆಮಾಭಿಮಾನ	ಗೊರವ

ಚ

ಚಂಡು	ಚಂಡು	ಸೆಂಡು
ಚಪ್ಪಲಿ	ಚಪುಲಿ	ಚಪುಲಿ
ಚಂದ್ರ	ಚಾನ	ಚಂದ್ರ/ಚಂದ್ರಮು
ಚನ್ನಾಗಿ	ಬೇಸ್	ಮಂಜಿಗ/ಚನಾಗ
ಚಿಕ್ಕಪ್ಪ	ಚಾಚಾ/ಬಿಚ್ಚಾ	ಕಕ್ಕ/ಕಕ್ಕಪ್ಪ
ಚೆಂಬು	ಚಮ್ಮು	ಚಂಬು

ಜ

ಜನ	ಮಂದಿ	ಮಂದಿ
ಜಗಳ	ಗುದಾಟ	ಜಗಡ/ಗುದಾಟ
ಜವಳಿಕಾಯಿ	ಚವಳಿಕಾಯಿ/ಚೊವಳಿಕಾಯಿ	ಜವಲಿಕಾಯಿ/ಚವಲಿಕಾಯಿ
ಜಮ	ಜಮ	ಮಜ
ಜ್ಞಾಪಕ	ದ್ಯಾಸ	ದ್ಯಾಸ/ಗಾಪ್ನಾ
ಜಾಣ	ಉಸಾರ್	ಚಾಣ್ಯ/ಸ್ಯಾನೆ/ಸ್ಯಾಣೆ/ಸ್ಯಾಣ
ಜಿಂಕೆ	ಹಿರನ್	ಚಿಗರಿ
ಜೀರ್ಣ	ಜೇರನ	ಜೇರನು
ಜ್ಯೂಸ್	ಜೂವೂಸು	ಜುಸೆ/ರಸಮು
ಜೋಳದಹೊಲ	ಜೊಲವಲ/ಜೋಳವೊಲಾ	ಜೋಲದವಲ

ತ

ತಲೆಯಲ್ಲಿ	ತಲ್ಯೇಗ	ತಲಿಲು
ತರಕಾರಿ	ತರಕಾರಿ	ಕಾಯಿ ಗೂರ್ಲು
ತಡೆಲಾರದೆ	ತಟ್‌ಕಲ್‌ಲಾರದ	ತಕಲಾರದ
ತಮ್ಮನ ಹೆಂಡತಿ	ಬಾಭಿ	ವದಿನ(ಸೊಸೆ)
ತಂಗಿಗಂಡ	ಭೈಜಾನ್	ಮಾವ
ತತ್ತಿ(ಮೊಟ್ಟೆ)	ಬುಡ್ಡೆ (ಹಂಡೆ)	ಮೊಟ್ಟೆ
ತಬ್ಬಲಿ	ಬೇವರ್ಸಿ	ಅನಾದಿ
ತಂದೆ	ಬಾಬಾ/ಬಾಪೂ	ಅಪ್ಪ
ತಾಯಿ	ಅಮ್ಮ/ಅಮ್ಮೆ	ಅಮ್ಮ
ತಿನ್ನುವುದು	ತಿನ್ನೋದು	ತಿಂಬೋದು
ತಿನ್ನಬೇಕು	ತಿಂಬೇಕು	ತಿಂಬೇಕು
ತಿನ್ನಲಿಕ್ಕಾಗದು	ತಿನ್‌ಲಾರೆ	ತಿನ್ನೇನು/ತಿನ್‌ಲಿಕಗದು
ತಿಳವಳಿಕೆ	ತಿಳಿವರಿಕೆ	ತಿಳುವರಿಕೆ/ತಿಲುವರಿಕೆ
ತಿಳಿಸಂಬಾರು	ರಸಂ	ರಸಮು
ತಿಳಿಲಿಲ್ಲದ್ದು	ಗೊತ್ತಿಲ್ಲಂಬ ಮಾತು	ತಿಳಿಲೇದು
ತುಪ್ಪಾ	ಗೀ	ನಯ್/ನಯ್ಯ
ತುಂಡು	ಉರುಪ್ಪು	ಪೀಸಲುಕ
ತೆಂಗಿನಮರ	ಎಳ್‌ನೀರ್‌ಮರ/ ತೆಂಕಝಾಡ್	ತೆಂಕಕಾಯ್ ಚೆಟ್ಟು / ಕೊಬರಿ ಚೆಟ್ಟು
ತೆಗೆದು	ತಗ್ದು	ತೀಸೆ
ತೆಲುಗು	ತಲಗು/ತಲುಗು	ತಲಗು
ತೆಂಗಿನಕಾಯಿ	ತೆಂಕಾಯಿ/ಟೆಂಕಾಯಿ	ಕೊಬರಿ/ತೆಂಕಕಾಯಿ
ತೆಗೆದುಕೊಂಡು	ಲೇಲೆ	ತಗಂಡು
ತೊಲ	ತಲ	ತಲ
ತೊಗರಿ	ಬ್ಯಾಳೆ	ಬ್ಯಾಲಿ/ತೊಗಬ್ಯಾಲಿ

ದ.ಧ

ದರ್ಗಾ	ಮಜಾರ್	ಮಸೀದು
ದಕ್ಷಿಣ	ಮಾಷೀದ್	ದಚ್ಚನ
ಧನ	ಬೈಲಾ/ಬಯ್ ಲಾ	ದನ
ದಾಳಿಂಬೆ	ಅನರ್	ದಾಲಿಂಬ
ದ್ರಾಕ್ಷಿ	ಹಂಗೂರ್	ದಾರ್ ಚಿ
ದಿನಾಲೂ	ದೀಸಾ	ದಿಸ
ದುಡಿಲಿಕ್ಕೆ	ದುಡ್ಯಾಕೆ	ದುಡ್ ಲ್ಯಾಕ
ದುಂಡು ಮಲ್ಲಿಗೆ	ಗುಂಡಿ ಕಲ್ಲಿ	ಮಲ್ಲಿಗೆ ಪೂವ
ದುಡುದು ತಿನ್ನಬೇಕು	ದುಡದು ತಿಂಬಕಿಲ	ಕಸಟ್ ಬಾಡಿ ತಿನ್ನಂಡಿ
ದೊಡ್ಡದು	ದೊಡ್ ದು	ದೊಡ್ ದು
ದೊಡ್ಡದಿದೆ	ದೊಡದು ಅಯ್ ತೆ	ದೊಡ್ ದ ಆಯ್ ತೆ
ದೊಡ್ಡ	ಪೆದ್ದ	ಪೆದ್ದಾಡು
ದೊಡ್ಡಪ್ಪ	ಬಡೇಬಾ	ದೊಡಪ/ಪೆದ್ದಪ್ಪ
ಧರ್ಮ	ದರ್ಮಾ	ಧರ್ಮ

ನ

ನಕ್ಷತ್ರ	ತಾರ	ಚುಕುಲು
ನಲವತ್ತು	ಚಾಲೀಸ್	ನಾತು
ನಮ್ಮದು	ನಮ್ ದು	ನಾದಿ/ನಮ್ ದು
ನಡ/ಸೊಂಟ	ಕಮ್ಮರ್	ನಡ, ನಡವು
ನಾಯಿ	ಕುತ್ತಾ	ಕುಕ್ಕ/ನಾಯಿ/ನಾಇ
ನಾಲ್ಕು	ನಾಕು/ಚಾರ್	ನಾಕು/ನಾಲ್ಗು
ನ್ಯಾಯ	ನಾಯ	ನಾಯ
ನಾಳೆ	ನಾಲೆ/ಸಬಾ/ಕಲ್	ನಾಲೆ
ನೀರಿಗೆ	ನೀರಿಕೆ	ನೀಲು
ನೀರು	ಪಾನಿ/ನೀರು	ನೀಲು/ನೀರು
ನಿಮಿಷ	ನಿಮಿಸ	ನಿಮಿಸಾಲು
ನುಗ್ಗಿಕಾಯಿ	ನುಗ್ಗಿಪಲ್ಯೆ	ಜೋಲಪಲ್ಲೆಯಿ
ನೇರ	ಖಿಲ್ಲಾ	ನೇರ

ನೊಣ	ಲಚ್ಛ	ಈಗಲೂ/ಚೀಮುಲು
ನೋಯ್ಯುತ್ತದೆ	ನೋವ್ ತತ್	ನೋವುತ್ತೆ
ನೋಡು	ನೋಡು	ನೊಡು

ಪ.ಫ

ಪಕ್ಕಪಕ್ಕ	ಬಗಲ್, ಬಗಲ್	ಬಗಲುಬಗಲು
ಪಶ್ಚಿಮ	ಮಗರಿಬ್	ಪಡವಲ
ಪಲ್ಯ	ಶೆರಾ	ಪಲ್ಯೆ
ಪಕ್ಷಿ	ಬಕ್ಸಿ	ಪಚ್ಚಲು
ಪ್ರಪಂಚ	ಪಪಂಚ	ಪ್ರಪಂಚ
ಪ್ರಶ್ನೆ	ಪ್ರಸ್ನಾ/ಪಸ್ನಾ	ಪ್ರಸ್ನಾ
ಪುಂಡಿಸೊಪ್ಪು	ಅಂಬಾಡ್/ಪುಂಡೇಕಾ..	ಪುಂಡ್ಯಾಕು
ಪ್ರಾರ್ಥನೆ	ಇಬಾದತ್/ಪ್ರತನ/ಪಿರಾತನ	ಪಾತನಿ/ಪಾಡತನ
ಪಾರಿವಾಳ	ಕಬುತರ್	ಪಾವುರಾಲು
ಪಾಲಕ್ ಸೊಪ್ಪು	ಪಾಲಕ್	ಪಾಲಕ್
ಪಾದರಕ್ಷೆ	ಕಾಲೆಮರಿ	ಚೊಪ್ಪಲು
ಪ್ಯಾಂಟ	ಕಪುಡೆ	ಪಾಯಿಂಟ್
ಪ್ರಾಯ	ಜವಾನ/ಜವಾನ ಬಚ್ಚೆ	ಅರೇವು
ಪೂರ್ತಿ	ಸೀದ	ಚೀದ
ಪೂರ್ವ	ಶಾಯಾಲ್/ ಶೂ ಮಾಲ್	ಮೂಡಣ
ಪೇಲಾಗು	ಅಫೇಲಾಗು	ಫೇಲಾಗು
ಪೇರಲ ಹಣ್ಣು	ಜಾಮ್/ಜಾಮನ್ನು(ಣ್ಣು)	ಜಾಮನ್ನು
ಪೊರಕೆ	ಝಾಡು/ಬಾರಿಗೆ	ಬಾರಿಗೆ

ಬ.ಭ

ಬಲಿದಾನ	ಕುರುಬಾನಿ	ಬಲಿದಾನ
ಬಳ್ಳಾರಿ	ಬಲ್ಲಾರಿ	ಬಲ್ಲಾರಿ
ಬರುಬರುತ್ತಾ	ಬತ್ತಾ ಬತ್ತಾ	ಬರ್ತಾ ಬರ್ತಾ

ಬಸಣ್ಣ	ಬಸನ್ನ	ಬಸನ್ನ
ಬರುತ್ತದೆ	ಬರುತೆ/ಬರ್ತಹೆ	ಬರುತೆ/ವಸ್ತುಂದಿ
ಬರುತ್ತಿತ್ತು	ಬರ್ತಿತು	ಬರ್ತೀತು
ಬರುವುದಿಲ್ಲ	ಬರಲ್ಲಾ/ಬರೋಲ್ಲ/ಬರಕಿಲ್ಲ	ಬರಲ್ಲ/ಬರಕಿಲ್ಲ
ಬಡವರು	ಬಡವ್ರು.	ಬಡವ್ರು
ಬಣವೆ	ಚಾರ/ಹುಲ್ಲು/ಉಲ್ಲು	ವಾಮೆ
ಬ್ರಷ್	ಮಿಸ್ ವಾಕ್	ಬ್ರಸ್ಸು
ಬಾಲವಾಡಿ	ಅರ್ಧ ಕಲಾಸ್	ಬಾಲವಾಡಿ
ಬಾಳೆಹಣ್ಣು	ಬಾಲೆಪಾಂಡು/ಮೌಜ್	ಬಾಲೆ ಪಾಂಡು/
	–ಬಾಳೆ ಪಂಡು/ಮಾಜ್	–ಅರಟಿಪಂಡು
ಬಾಟ	ಬಾಟನ್	ಬಾಟ
ಬಾರೋ	ಬಾಲೇ	ಬಾಲೇ
ಬಾಯಿಂದ	ಬಾಯಂದ	ಬಾಯಿಂದ
ಬಾಗು	ಬೊಗ್ಗು	ಬಗ್ಗಿ/ಬೊಗ್ಗಿ
ಬಾಡಿಗೆ	ಬಾಡ್ಗೆ	ಬಾಡಿಗ
ಬಾ	ದಾ.	ಬಾ
ಬೀರಲ್ಲಿ	ಬಿರೋನಾಗ	ಬೀರ್ ನಾಗ
ಬೀಗರಲ್ಲಿ	ಬೀಗರ್ದಾಗ	ಬೀಗರಲ್ಲಿ
ಬಿಜಿ	ಬೀಜಿ	ಬೀಜಿ
ಬೀನ್ಸ್	ಬೀನ್ಸು	ಬೀನ್ಸು
ಬಿಕ್ಷೆ	ಬಿಕ್ಷೆ	ಬಿಕ್ಷೆ
ಬಿಸಿಲು	ಧೂಪ್/ಎಂಡ	ಧೂಪ್/ಎಂಡ
ಭೂಮಿ	ಜಮೀನು	ಭೂಮಿ
ಬೆಳೆಗಳು	ಕೇತಿ	ಬೆಲ್ತಾ/ಬೆಳೆ
ಬೆಕ್ಕು	ಕೋಸ್ ಬಿಲ್ಲಿ	ಕೋಸ್ ಬಿಲ್ಲಿ/ಪಿಲ್ಲಿ
ಬೇಗ	ಜಲ್ದಿ/ಬಿರ್‌ನು	ಜಲ್ದಿ/ಬಿರಿಬಿರಿ
ಬೇಳೆ	ದಾಲು	ತೊಗರೆ
ಬೇವಿನಮರ	ನೀಮ್‌ಮರ/	
	ನೀಮ್‌ಕಾ ಝಾಡ್	ಝಾಡ್ ನೀಮ್ ಚೆಟ್ಟು
ಬೆಳಿಗ್ಗೆ	ಪಾಜರ್	ಮುಂಜಾನ

ಬೆಂಡೆ	ಬೆಂಡಿದು	ಬೆಂಡೆಕಾಯಿ
ಬೇರೊಂದು	ಬೆರಂದು/ಬೆರೊಂದು	ಬೇರೊಂದು
ಬೇರೆಯದು	ಬೆರೇದು	ಬೆರೇದು
ಬೆಳ್ಳಿ	ಬೆಲ್ಯೆ	ಬೆಲ್ಲಿ/ಎಂಡಿ
ಬೇರೆಕಡೆ	ಬೇರವುರತ	ಬೇರತ್ರ
ಬೇಸರ	ಬೇಜಾರ	ಬ್ಯಾಸರ
ಬೆಣ್ಣೆ	ಮಸ್ಕ	ಬೆಣ್ನ/ಎನ್ನ ಪೂಸ
ಬೆಳ್ಳುಳ್ಳಿ	ಲಸೋನ	ಬೆಳಗಡ್ಡೆ/ಎಲ್ ಪಾಯಿಲ್

ಮ

ಮರಳು	ಉಸುಕು/ಬಾಲು	ಮಲ್ಲು
ಮಕ್ಕಳಾಗಿದಾಗ	ಉಡುಗರಿದ್ದಾವರೆ	ಮಕ್ಕುಲಿದ್ದಾಗ
ಮನೆ	ಘರ್	ಇಲ್ಲೂ/ಡಿಲ್ಲು
ಮಜ್ಜಿಗೆ	ಚ್ಹಾಜ್	ಮಜ್ಜಿಗೆ
ಮರ	ಝಾಡ್	ಚೆಟ್ಟು
ಮಗು	ಬೇಟಿ	ಕೂಸು
ಮದ್ಯಾನ್ಹ	ಧಪಕ್/ದೋಪ್ಯಹರ್	ಮದ್ಯಾನ
ಮಕ್ಕಳು	ಮಕ್ಳು/ಮಕ್ಲ	ಪಿಲ್ಲರು/ಮಕಲು
ಮರಕ್ಕೆ	ಮರಗೆ	ಚೆಟ್ಟಲು
ಮಲಗಿಕೊಂಡಿದ್ದೆ	ಮಲ್ ಕಂಡಿದ್ದೆ	ಮಕಂಡಿದ್ದೆ
ಮನೆಯಲ್ಲಿ	ಮನೇಗ	ಮನೇಗ/ಹಿಂಟಲೋನಿ
ಮನಸ್ಸಲ್ಲಿ	ಮಂತಿಗಿಟ್ಟು,	ಮನಸಾಗ
ಮಗನಿಗೆ	ಮಗಗೆ/ಮಗಿಗೆ	ಮಗಗೆ
ಮದುವೆ	ಶಾದಿ/ಮದ್ವಿ	ಮದ್ವಿ/ಪೆಂಡ್ಲಿ
ಮಲಗುವಾಗ	ಮಲಗಗೆ	ಮಲಗ್ ಬೇಕರೆ
ಮನೆ	ಮನಿ	ಮನಿ/ಇಲ್ಲೂ
ಮನೆಯೊಳಗೆ	ಮನ್ಯಾಗೆ	ಹಿಂಟಿಲು
ಮಳೆಗಾಲ	ಮಲೆಗಾಲ	ಮಲೆಗಾಲ
ಮಣ್ಣು ಕೊಡಲಿಕ್ಕೆ	ಮನ್ ಕೊಡಕೆ	ಮೊನ್ನುವಚ್ಚೇದಿ

ಮಂಡಕ್ಕಿ	ಮಂಡಾಳ್/ಲು	ಮಂಡಾಲು
ಮದುವೆ	ಶಾದಿ	ಪೆಂಡ್ಲಿ
ಮಂಗ	ಕೋತಿ	ಕೋತಿ
ಮಾವು	ಹಾಂ	ಮಾಮಿಡಿ/ಮಾವ್
ಮಾತಾಡಲ್ಲ	ಆಡುಲ್ಲ	ಆಡಲ್ಲ
ಮಾಡಿದೆ/ಮಾಡುತಿದ್ದೆ	ಮಾಡ್‌ತಿದೆ	ಮಾಡ್‌ತಿದ್ದೆ
ಮಾಡಿಕೊಂಡು	ಮಾಡ್‌ಕೊಂಡು	ಮಾಡ್‌ಕೊಂಡು
ಮಾನಮರ್ಯಾದೆ	ಮಾನಮರದ	ಮಾನ ಮರ್ಯದ
ಮಾಡುತ್ತಾರೆ	ಮಾಡ್‌ತಾರೆ	ಮಾಡ್ ತಾರ
ಮಾಡಿಕೊಳ್ಳುತ್ತಾರೆ	ಮಾಡಿಕೊಂತರ	ಮಾಡ್ ಕೊಂತರ
ಮಾದರು	ಮದವರು	ಹರಿಜನ
ಮಾವಿನಕಾಯಿ	ಮಾನಕಾಯಿ	ಮಾಮಿಡಿಕಾಯಿ /ಮಾನ್ ಕಾಯಿ
ಮಾತು	ಜವಾಬ್	ಮಾಟ
ಮಾಡುತ್ತಿದೆ	ಮಾಡ್‌ತಿದೆ	ಮಾಡ್‌ತಿದೆ
ಮಾಡಿಕೊಂಡ ಹೆಂಡತಿ	ಮಾಡಿಕೊಂಡಿದ್ ಯೆಂಡ್ತಿ	ಮಾಡಿಕೊಂಡೇಂತಿ/ಏಂತಿ
ಮಿಂಚು	ಫಿಜಲ್	ಮಿಂಚು
ಮಿಷಿನ್	ಮಿಸನ್	ಮಿಸನ್ನು
ಮುದುಕ	ಮುದುಕ	ಮುದ್ಯಾತ
ಮುದುಕರಿಗೆ	ಮುದೇರಿಗೆ	ಮುದುಕರು/ಮುದೇರು
ಮುದ್ದೆ	ಮುದ್ದಾ	ಮುದ್ದಾ
ಮುದುಕಿ	ಮುದುಕಿ/ಬುಡ್ಡಿ	ಮುದ್ಯಾಕಿ
ಮೂತ್ರ	ಪಿಶಾಪ್/ತಹರ್	ಕಾಲ್ಮಡಿ
ಮೂಕನಾಗು	ಬೆಪ್ಪಗೆ	ಬೆಪ್ಪಾದು
ಮೂಗು	ನಾಕ	ಮೂಕಿ
ಮೂಸಂಬಿ	ಮಾಸೆಂಬೆ/ಮುಸೆಂಬಿ	ಮೂಸಂಬೆ
ಮೂಟೆ	ಮೂಟ	ಮೂಟ
ಮೂವತ್ತು	ತೀಸ್	ಮುವತ್ತು
ಮೂಕ	ಮೂಗು	ಮೂಕ ಜಂತಲು/ಮೂಕ
ಮೂಗು	ಮೂಗ	ಮುಕ್ಕಾ

ಮೇಕೆ	ಚೇಳಿ/ಚಡಿ/ಬಕರ	ಮೇಕೆ/ಮ್ಯಕ/ಮ್ಯಕಿ
ಮೇಲಾಧಿಕಾರಿ/ಮುಖ್ಯಾಧಿಕಾರಿ	ದೊಡ್ ಅಫಿಸಾರು /ಸಾಹೇಬ್ರು	ಪೆದ್ದಸಾರು /ಸಾರುಡು
ಮೆಣಸಿನಕಾಯಿ	ಮಿಡ್ಜಿ/ಮೆಣ್ಸಿನಕಾಯಿ	ಮೆಂಚಿಕಾಯಿ
ಮೇಯ್ಯುಸುತ್ತಾರೆ	ಮೆಸ್ತಾರೆ	ಮೆಯ್ತವಿ
ಮೇಲಿನಿಂದ	ಮ್ಯಗ್ಲಿಂದ	ಮ್ಯಲಿಂದ/ಮೇಲ್ನಿಂದ
ಮೇರೆ/ಮೇರಿ	ಪಡ್ಡು	ವಡ್ಡು/ಒಡ್ಡು
ಮೊಲ	ಖರ್ ಗೋಶ್	ಮಲ/ಕುಂದ್ಲಿ
ಮೊಬೈಲ್	ಮೊಬಲ್	ಮೊಬ್ಇಲ್
ಮೊಸರು	ದೈ	ಮಚುರು
ಮೊದಲಿನಿಂದ	ಮುಂದಿನಿಂದ/ಮುದ್ಲಿಂದ.	ಮೊದ್ಲಿಂದ /ಮುದ್ಲಿಂದ
ಮೋಸಾ	ಮೋಶಾ	ಮೋಸ

ಟ

ಟೀ	ಚಾ	ಟೀ
ಟೋಪಿ	ತೋಪಿ	ತೋಪಿ

ಯ್

ಯಜಮಾನನಿಗೆ	ಯಜಮಾನ್ಗೆ	ಯಜಮಾನ್ಗೆ
ಯಾಹೂದಿ	ಮುಸಾ	ಯವುದಿ
ಯೋಚನೆ	ಯೋಸ್ನಾ	ಯೋಚ್ನ

ರ

ರಕ್ತ	ರಕ್ತೆ/ರಕತ	ರಕ್ತಮು/ರಕೂತ/ರೊಕ್ತ
ರಂಜಾನ್	ರನ್ಜಾನ್/ರಮ್ಜಾನ್	ರನ್ಜಾನ್
ರಥ	ತೇರಾ	ತೇರು
ರಾಗಿಹುಲ್ಲು	ದೀವ್ಹಕ ಝಾಡ್	ರಾಗ ಪುಲ್ಲು
ರಾತ್ರಿ	ರಾತ್ರಿ/ರಾತಿ	ರಾತಿ

ರಾಜ	ರಾಜ್	ರಾಜ
ರಾಣಿ	ರಾನಿ/ರಾಣ	ರಾನಿ/ರಾಣಿ
ರಿಕ್ಷ	ರಿಕ್ಸಾ/ರಿಕಿಸಾ	ರಿಚ್ಚಾ
ರೂಪಾಯಿ	ರುಪ	ರುಪಾಯ

ಲ

ಲಂಚ	ಮೇಲ್ ರೊಕ್ಕ	ಲಂಚೆ
ಲಕ್ಷ	ಲಕ್ಸ/ಲಚ್ಚ	ಲಚ್ಚ
ಲಕ್ಷ್ಮೀ	ಲಚ್ಮಿ	ಲಚ್ಮಿ
ಲೆಕ್ಕ	ವಜ/ಇಬಾದ್	ಲೆಕ್ಕ

ವ

ವಜ್ರ	ವಜ್‌ರ್ರಾ	ವಜ್ರಾ
ವರ್ಷ	ವರಸಾ/ವಚ್ಚಾ	ವಚ್ಚ
ವ್ಯತ್ಯಾಸ	ಯತ್ಯಾಸ	ಯತ್ಯಾಸ/ತೇಡ
ವಾರಕ್ಕೆ	ವಾರಗೆ	ವಾರಮು
ವಾಸನೆ ಹೂ	ಬಾಸ್ಕಿಕಲ್ಲಿ (ಮೊಗ್ಗು)	ವಾಸ್ನಪೂಲು
ವಿಶ್ರಾಂತಿ	ಆರಾಮ್	ಅರಾಮ್
ವೆಂಕಟೇಶ್	ಯಂಕ್‌ಟೇಸ್	ಯಂಕ್‌ಟೇಸ್
ವೆಸನ	ಯಸ್ನಾ	ಯಸ್ನಾ

ಶ

ಶಬ್ದ	ಅವಾಜ್/ಸಬುದ	ಗಲಾಟ/ಸಬ್ದ
ಶಕ್ತಿ	ಸಕ್ತಿ.	ಸಕ್ತಿ
ಶಾವಿಗೆ	ಸೇಮ್ಯ	ಸ್ಯಾವಿಗಿ
ಶಿಕ್ಷೆ	ಸಜಾ	ಸಜಾ
ಶುಂಠಿ	ಅಲ್ಲಾ/ಸುಂಟಿ	ಸುಂಟ

ಸ

ಸಂಕಟಪಡು	ವದ್ದಾಡು	ವದ್ದಾಡು
ಸಕ್ಕರೆ	ಸಕ್ಕರ	ಸಕ್ಕರೆ
ಸ್ವಭಾವ	ಸಬಾವ	ಸಬಾವ
ಸಂವಿದಾನ	ಸಮ್ಮಿದಾನ	ಸಮ್ಮಿದಾನ
ಸಂಬಾರು	ಸಂಬಾರ್.	ಸಂಬಾರ್
ಸತ್ತೋಗು	ತೀರೋದ್ರು	ಸತ್ತ್ಯೋಗರ
ಸ್ವಲ್ಪಾ	ತೋಡ/ಜರ	ರವಟು/ತೊಗಟು
ಸಗಣಿ	ಗೋಬರ್/ಗೊಬರಿ	ಸಗನ/ಎಂಡಿ/ಯಂಡಿ
ಸಪೋಟಣ್ಣು	ಸಪೊಟ್/ಸಪಟನ್ನು	ಸಪೋಟ ಪಂಡು
ಸಣ್ಣವನಿದ್ದಾಗ	ಸನ್‌ಗಿದ್ದಾಗ	ಸನ್ನಾನಿದ್ದಾಗ
ಸ್ಮಾಶಾನದಲ್ಲಿ	ಸೊಶಾಣದಾಗೆ	ಶಸಾನ್‌ದಾಗೆ
ಸ್ನಾನ	ಸಾನ/ಜಲಕ	ಜಲಕ/ಸಾನ
ಸ್ವಾಮಿ	ಸಾಮಿ	ಸ್ವಾಮಿ/ಗುರು/ಚ್ವಾಮಿ
ಸಾರ್	ಸಾರು	ಸಾರು
ಸಾಯುತ್ತಿದ್ದಾರೆ	ಸಾಯ್‌ತಿದಾರೆ	ಸಾಯ್ತಾರೆ
ಸಾಯುವುದಿಲ್ಲ	ಸಾಯಂಗಿಲ್ಲ	ಸಾಯಂಗಿಲ್ಲ
ಸಾವಂತಿಗೆ ಹೂವೂ	ಸಾವಂತಿ ಪೂಲ್	ಚಿಮಂತಿಪೂಲ್
ಸಾರು	ಬ್ಯಾಳಿ/ತೊಗಿ	ಸಾರು/ತೊಗಿ
ಸಾವಿರ	ಸೌರ/ಸವ್‌ರ	ಸೌರ
ಸಾವು	ಸೆಟಲ್/ಕತಂ	ಸಾವು
ಸಿಹಿ ಹುಣಸಿ	ಕೊಡಕ್ ಪಲ್ಯ	ಸಿಹಿ ಹುಣಚಿ
ಸೀರೆ	ಲಂಗ್‌ಸೀರಿ	ಲಂಗ್‌ಚೀರ
ಸೀಮೆ ಎಣ್ಣೆ	ಸೀಮೆನ್ನಿ	ಸೀಮೆನ್ನಿ
ಸಿಹಿಪಾಲಕ್	ಸಿಪಲ್ಲೆ	ಪಾಲಕ
ಸಿಂಹ	ಸಿಮ್ ಹ/ಆ	ಸಿಂಭಾ
ಸುಂಕಸಾಲಿಮರ	ರಿಜಿಡ್ ಗಿಡ	ಸುಂಕಸಾಲಿ ಚೆಟ್ಟು /ಗಿಡ
ಸುಡುಗಾಡಿನಲ್ಲಿ	ಸುಡುಗಾಡದಲ್ಲಿ	ಶಸಾನಂದಲ್ಲಿ
ಸುಟ್ಟಿದ್ದು	ಸುಟುದು(ಸುಟಿದು	ಸುಟಿದು

ಸುಳ್ಳು	ಸುಲ್ಲು	ಸುಲ್ಲು
ಸುತ್ತಿಗೆ	ಸುತಿಗಿ/ಹಾಮರ್	ಸುತ್ತಿಗ/ಹಾಮರ್
ಸೂರ್ಯ	ಸೂರಿದ್	ಸೂರ್ಯ
ಸ್ಕೂಲ್	ಇಸ್ಕೂಲ್/ಇಸ್ ಕೂಲ್	ಸ್ಕೂಲ್/ಸಾಲೆ/ಸೂಲು
ಸೂಳೇಮಗ	ದೋಕಾಬಾದ್	ಚುಲೇಮಗ
ಸೆಳ್ಳೆ ಹಣ್ಣು	ಗೊನ್ನೆ ಪಂಡು	ಬಂಕಪಂಡು
ಸೊಕ್ಕಿನಲ್ಲಿರು	ಪುಗರಮೆಲೆ ಲೆತೆ/ಪೊಗರು	ಪೂಗರ ಮ್ಯಲೇತೆ
ಸೊಳ್ಳೆ	ಮಸಡಾ	ಸುಕಡಿ/ಚುಕಡೆ
ಸೊಪ್ಪು	ಪಲ್ಯ	ಪಲ್ಯ/ಸಪ್ಪು

ಹ

ಹಗ್ಗ	ಅಗ್ಗ	ಅಗ್ಗ
ಹಣ್ಣು	ಅನೇನು	ಅನ್ನು
ಹಳ್ಳಿ	ಅಲ್ಲಿ	ಅಲ್ಲಿ ಊರು
ಹತ್ತುವರ್ಷ	ಅತ್‌ವಶ	ಅತ್‌ವಶ
ಹಸಿ ಶುಂಠಿ	ಅಲಾ	ಅಲ್ಲಾ
ಹಲ್ಲಿ	ಚಿಪ್‌ಲಾಕ್/ಬಲ್ಲಿ	ಬಲ್ಲಿ
ಹಂದಿ	ಸುವಾರ್	ಪಂದಿ/ಅಂದಿ
ಹಲಸು	ಹನಸ್/ಅನ್ಸ್	ಪನಸ್
ಹಸಿ	ಹಚಿ	ಹಸೆ
ಹಣ	ರೊಕ್ಕ	ರೊಕ್ಕ
ಹಂಚು	ಅಂಚು/ಅಂಚ	ಅಂಚು/ಪಡಿತು
ಹಾಲು	ದೂದ್	ಪಾಲು
ಹಾಕಿದ	ಹಾಕಿದು/ಆಕಿದು	ಆಕ್‌ದ/ ಆಕಿದ
ಹಾವು	ಸಾಂಪು	ಹಾವು/ಪಾಮು
ಹಿಡಿ	ಇಡಿ/ಸಿಕ್ಕ	ಇಡಿ
ಹೀಗೆ	ಇಂಗೆ	ಇಂಗೆ
ಹುಚ್ಚ	ಉಚ್ಚ	ಉಚ್ಚ
ಹುಣಸೆಮರ	ಅಂಚ್ಲಿ ಬಾಗ್	ಅಂಚ್ಲಿ ಚೆಟ್ಟು
ಹುಡುಗರು	ಉಡುಗರು	ಉಡುಗ್ರು/ಪಿಲ್ಲುಡು

ಹುಡುಗರಿದ್ದಾಗ	ಉಡುಗರಿದಾವಗೆ	ಮಕ್ಕಲಿದಾಗ
ಹುಸುಕು	ಉಸುಗು	ಉಸ್ಗು
ಹುಣಸೆಹಣ್ಣು	ಅಮ್ಲಿ	ಅಂಬಲ್ಲನ್ನು
ಹುಡುಗಿ	ಬಚ್ಚಿ/ಲಡಕ	ಪಿಲ್ಲುಲು
ಹೂವೂ	ಪೂಲ್	ಪೂವು/ಪೂಲು
ಹೆದರಿಕೋ	ಅಂಜಿಕೋ	ಅದುರು/ಅಂಜಿಕಿ
ಹೇಳು	ಅಂಬು .	ಅಂಬು/ಚೆಪ್ಪು
ಹೇಳಬಾರದು	ಏಳ್ ಬಾರದು .	ಏಳ್ ಬಾರದು
ಹೆಗ್ಗಣ	ಗೂಸಾ	ಯಗ್ಗಾ
ಹೆಣ	ಯನ/ಯಣ	ಯನ
ಹೆಣ್ ಮಕ್ಕಳು	ಯನ್ ಮಕ್ಲು	ಯನ್ ಮಗಲು
ಹೇಗೆ	ಯಾಗೆ/ಯಂಗೆ	ಯಂಗೆ
ಹೊಂದಾಣಿಕೆ	ಆಗಿಬರ್‌ಲಿಲ್ಲ	ಸಾರಿಕಿಲೇದು
ಹೊಸದಾದಪೇಟೆ	ವಸ್‌ಪೇಟೆ	ವಸಪೇಟೆ
ಹೊರಗೆ	ವರಗ/ಬಹರ್	ವರಗೆ
ಹೊಟ್ಟೆ	ವಟ್ಟಿ	ಹೊಟ್ಟಿ
ಹೊದೆ	ವದಿ	ವದಿ
ಹೊಡೆ	ಬಡಿ	ಬಡಿ/ವದಿ

ಅನುಬಂಧಗಳು

ಉರ್ದು ಮತ್ತು ತೆಲುಗುಭಾಷಿಕರ ಉಚ್ಚಾರಣೆಯ ಕಥಾಮಾದರಿಗಳು

ಪ್ರಸ್ತುತ ಸಂಪ್ರಬಂಧದಲ್ಲಿ ಬಳ್ಳಾರಿನಗರದ ಉರ್ದು ಮತ್ತು ತೆಲುಗು ಭಾಷಿಕರ ಕನ್ನಡ ಉಚ್ಚಾರಣೆಯ ಸಹಜತೆಯನ್ನು ಅರಿಯಲು ಎರಡು-ಎರಡರಂತೆ ಉರ್ದು ಮತ್ತು ತೆಲುಗು ಕಥಾಮಾದರಿಗಳನ್ನು ಕೊಡಲಾಗಿದೆ. ಈ ಕಥೆಗಳಲ್ಲಿ ಬಳಕೆಯಾಗುವ ಭಾಷಿಕ ರಚನೆಗಳು ಬಳ್ಳಾರಿನಗರದ ಕನ್ನಡವನ್ನು ಪ್ರತಿನಿಧಿಸುತ್ತವೆ. ಹಾಗೆಯೇ ಇದೊಂದು ಕನ್ನಡದ ಉಪಭಾಷೆ ಎಂದು ನಿರ್ಣಯಿಸಬಹುದಾಗಿದೆ. ಒಟ್ಟಿನಲ್ಲಿ ಈ ಕಥೆಗಳನ್ನು ನೀಡುವ ಉದ್ದೇಶ ಬಳ್ಳಾರಿನಗರದ ಕನ್ನಡದ ಉಚ್ಚಾರಣೆಯನ್ನು ತಿಳಿಯುವುದೇ ಆಗಿದೆ.

ಉರ್ದು ಭಾಷಿಕರ ಕಥಾಮಾದರಿಗಳು

೧. ಮೋಸಿಸ್ ಇಸ್ಟೋರಿ

ಇಜಿಪ್‌ಟನಾಗೆ, ಪರೋನ್ ಅಂತ ಕಿಂಗ್ ಇರ್ತಾನ, ತಮ್ಮ ಒಂದು ಬರಲ್ ವರ್‌ಸದಿಂದ ಕೂಲ್ ಮಾಡಿಕೊಂಡು ಬಂದಿರ್‌ತಾನ್ ಅವನು. ಅವ್‌ನುದುಗೆ ಜ್ಯೋತಿಸುಗಳು ಏಳ್ತಾರೆ, ನಿಮ್ಮ ಇದರಾಗೆ ಒಬ್ಬತ ಉಡುಗ ಉಟ್ಟಿ ಇದೆಲ್ಲ, ನಿಮ್ಮ ರಾಜ್ಜಕೆಲ್ಲ ಇದನ್ ಮಾಡಿ ಬಿಡ್‌ತೇತ್, ಎಲ್ಲರಿಗೆ ಇದನ್ ಮಾಡಿ, ಅವನು ನಿಮ್ಮ ರಾಜ್ಯ ಎಲ್ಲ. ವಿನಾಸ್ ಮಾಡ್ತಾನ ಅಂತ ಏಳ್ತಾನ. ಆಮೇಲ ಏನ್ ಆಗ್‌ತೇತಿ ಅಂದ್ರೆ, ಈ ವರ್‌ಸ್ಯಾಗೆ ಯಾರ್‍ಯಾರು ಉಡುಗರು ಉಟ್‌ತಾವೆ, ಅವರ್‌ಗೆಲ್ಲರಿಗೆ, ಕೊಲೆ ಮಾಡಿಬಿಡ್ರಿ, ಇಲ್ಲಂದ್ರೆ ಅವನು ಬಂದು ಇದ ಮಾಡ್‌ಬಿಡ್ತಾನೆ. ಅಂತ ಊರಾಗೆ ಯಾರ್‍ಯಾರು. ಈ ದೇಟಿಗೆ ಯಾರ್‍ಯಾರು ಉಟ್ಟಿರ್‌ತಾರೋ, ಸನ್ನ ಉಡಗರಿಗೆ ಎಲ್ಲ ಕೊಲೆ ಮಾಡಕೆ ಏಳ್ತಾನ, ಸೇನಿಕರಿಗೆ.

